ದೆಹಲಿ ಕರ್ನಾಟಕ ಸಂಘದ

# ಅಭಿಮತ

ಜುಲೈ 2025 । ಬೆಲೆ ರೂ.1




## ಸಂಭ್ರಮದ ಅಂತರ ರಾಷ್ಟ್ರೀಯ ಯೋಗ ದಿನಾಚರಣೆ





ಇತ್ತೀಚೆಗೆ ದೆಹಲಿ ಕರ್ನಾಟಕ ಸಂಘಕ್ಕೆ ಜೆ.ಡಿ.ಎಸ್. ಮುಖಂಡರು, ಮಾಜಿ ಮಂತ್ರಿಗಳು ಮತ್ತು ಪ್ರಸ್ತುತ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಬಂಡೆಪ್ಪ ಕಾಶಪ್ಪನವರು ಭೇಟಿ ನೀಡಿದ ಸಂದರ್ಭ ಅವರನ್ನು ಸಂಘದ ಅಧ್ಯಕ್ಷ ಶ್ರೀ ಸಿ.ಎಂ. ನಾಗರಾಜ ಅವರು ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀ ಅರುಣ್ ಸಿ.ಎಸ್, ಶ್ರೀ ಶಶಿಕಾಂತ ಪಿ. ಪಾಟೀಲ್, ಶ್ರೀ ನವೀನ್ ಕುಮಾರ್ ವಿ. ಮತ್ತು ದೆಹಲಿ ಕನ್ನಡಿಗರ ಸಮ್ಮುಖದಲ್ಲಿ ಅಭಿನಂದಿಸಿದ ದೃಶ್ಯ.



ಬೆಂಗಳೂರಿನ ರಾಜೀವ್ ಗಾಂಧಿ ವೈದ್ಯಕೀಯ ವಿಜ್ಞಾನಗಳ ವಿಶ್ವವಿದ್ಯಾಲಯದ (RGUHS) ನೂತನ ಉಪಕುಲಪತಿಗಳಾಗಿ ಕಿಮ್ಸ್‌ನ ಪ್ರಿನ್ಸಿಪಾಲರಾಗಿದ್ದ ಡಾ. ಬಿ.ಸಿ. ಭಗವಾನ್ ಅವರು ಕರ್ನಾಟಕದ ಘನತೆವೆತ್ತ ರಾಜ್ಯಪಾಲರಿಂದ ನೇಮಕಗೊಂಡು ಅಧಿಕಾರ ವಹಿಸಿಕೊಂಡಿದ್ದಾರೆ. ಅವರನ್ನು ಸಂಘದ ಅಧ್ಯಕ್ಷ ಶ್ರೀ ಸಿ.ಎಂ. ನಾಗರಾಜ ಅವರು ಬೆಂಗಳೂರಿನಲ್ಲಿ ಭೇಟಿ ಮಾಡಿ ದೆಹಲಿ ಕನ್ನಡಿಗರ ಪರವಾಗಿ ಅಭಿನಂದಿಸಿದ್ದಾರೆ. ಈ ಸಂದರ್ಭದಲ್ಲಿ ಆಜೀವ ಸದಸ್ಯ ಡಾ. ಬಿ.ಟಿ. ಚಿದಾನಂದ ಮೂರ್ತಿ, ಎಂಡೀವರ್ಸ್ ಇಂಟರ್‌ನ್ಯಾಷನಲ್ ಶಾಲೆಯ ಸಂಸ್ಥಾಪಕರು ಮತ್ತು ಅಧ್ಯಕ್ಷರಾದ ಡಾ. ಶಿವಶಂಕರ್ ಎಮ್.ಎಲ್. ಮತ್ತು ಶ್ರೀ ರಮೇಶ್ ರೆಡ್ಡಿ ಉಪಸ್ಥಿತರಿದ್ದರು.



ಕೇಂದ್ರ ಸರ್ಕಾರ ಭಾರೀ ಕೈಗಾರಿಕೆಗಳ ಮತ್ತು ಉಕ್ಕು ಸಚಿವರಾದ ಶ್ರೀ ಎಚ್.ಡಿ. ಕುಮಾರ ಸ್ವಾಮಿಯುವರನ್ನು ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ರಾಧಾಕೃಷ್ಣ ಅವರು ಸಂಘದ ಸಮೀಪವಿರುವ ಶ್ರೀ ರಾಘವೇಂದ್ರ ಸ್ವಾಮಿ ಮಠದ ಪರಿಸರದಲ್ಲಿ ಭೇಟಿಯಾದ ಕ್ಷಣ. ಈ ಸಂದರ್ಭದಲ್ಲಿ ಕಾರ್ಯಕಾರಿ ಸಮಿತಿ ಸದಸ್ಯೆ ಶ್ರೀಮತಿ ಮಾಲಿನಿ ಪ್ರಹ್ಲಾದ ಮತ್ತು ಸಂಘದ ಆಜೀವ ಸದಸ್ಯೆ ಶ್ರೀಮತಿ ಕುಮಾರಿ ಜೊತೆಗಿದ್ದರು.

ಅಭಿಮತ
ದೆಹಲಿ ಕರ್ನಾಟಕ ಸಂಘದ
ಸಂಪುಟ 35 । ಸಂಚಿಕೆ 10
ಜುಲೈ 2025

ಅಭಿಮತ ಸಂಪಾದಕ ಮಂಡಳಿ

ಪ್ರಧಾನ ಸಂಪಾದಕ
ಕೆ.ಎಸ್. ಮೂರ್ತಿ

ಸದಸ್ಯರು
ಸರವು ಕೃಷ್ಣ ಭಟ್
ಯಲ್ಲಾಲಿಂಗ ಕೊಪ್ಪದ
ತಿಮ್ಮಪ್ಪ ಜಿ.ಆರ್.
ಎಸ್. ರಮೇಶ

ದೆಹಲಿ ಕರ್ನಾಟಕ ಸಂಘದ
ಕಾರ್ಯಕಾರಿ ಸಮಿತಿ–2024–26

ಅಧ್ಯಕ್ಷರು
ಸಿ.ಎಂ. ನಾಗರಾಜ
9811325440

ಉಪಾಧ್ಯಕ್ಷರು
ವಸಂತ ಶೆಟ್ಟಿ ಬೆಳ್ಳಾರೆ
9958697823
ಪೂಜಾ ಪಿ. ರಾವ್
9810882498

ಪ್ರಧಾನ ಕಾರ್ಯದರ್ಶಿ
ರಾಧಾಕೃಷ್ಣ
9818252183

ಖಜಾಂಚಿ
ಆಶಾಲತಾ ಎಂ.
9891249149

ಜಂಟಿ ಕಾರ್ಯದರ್ಶಿಗಳು
ನಾರಾಯಣ ಬಿ.
9868393978
ಅಶ್ವಿನಿ ಬಿ.ಎಸ್.
9036235665

ಸಮಿತಿ ಸದಸ್ಯರು
ಡಾ. ವೆಂಕಟಾಚಲ ಜಿ. ಹೆಗಡೆ
9312712476
ಕೆ.ಎಸ್. ಮೂರ್ತಿ
9871140222
ಪ್ರಭಾಕರ ಮಡ್ಡಿತೋಟ್
9910091978
ನವೀನ್ ಕುಮಾರ್ ವಿ.
9871945819
ಅರುಣ್ ಸಿ.ಎಸ್.
9741282211
ಜಯಶ್ರೀ ಬಸವರಾಜು ಬಿ.ಕೆ.
9560760341
ಶುಭಾ ದೇವಿಪ್ರಸಾದ್
9319762969
ಮಾಲಿನಿ ಪ್ರಹ್ಲಾದ
9910269085
ಎನ್.ಆರ್. ಶ್ರೀನಾಥ
7836954402
ಶಶಿಕಾಂತ ಪಿ. ಪಾಟೀಲ್
9650182413

# ಸಂಪಾದಕರ ಮನದ ಮಾತು...

## ‘ದೆಹಲಿಯಲ್ಲಿ ಮಳೆರಾಯನ ಆಗಮನ, ತಂಪಾಯಿತು ಹವಾಮಾನ’

ಆತ್ಮೀಯ ಕನ್ನಡಿಗರೇ,

ಬೇಸಿಗೆಯ ಸುಡು ಬಿಸಿಲಿನ ಝಳದಿಂದ ಬಳಲಿದ್ದ ದೆಹಲಿಗರಿಗೆ ಸ್ವಲ್ಪ ತಡವಾಗಿ ಆಗಮಿಸಿದರೂ ಈ ಬಾರಿಯ ಮುಂಗಾರು ಮಳೆ ತಾಪಮಾನವನ್ನು ತಗ್ಗಿಸಿ ಇಲ್ಲಿನ ಹವಾಮಾನವನ್ನು ತಂಪಾಗಿಸಿದೆ. ದೆಹಲಿ ಎನ್‌ಸಿಆರ್ ನಲ್ಲಿ ಚದುರಿದಂತೆ ಹಲವಾರು ಬಾರಿ ಆದ ಬಿರುಸಿನ ಗಾಳಿ ಮಳೆಯು ಇಲ್ಲಿನ ಜನರ ಜೀವನವನ್ನು ಅಸ್ತವ್ಯಸ್ತಗೊಳಿಸಿದ್ದು ಒಂದೆಡೆಯಾದರೆ, ಇನ್ನೊಂದೆಡೆ ಈ ಮಹಾ ನಗರದ ತಗ್ಗು ಪ್ರದೇಶಗಳಲ್ಲಿ ನೀರು ನಿಂತು, ವಾಹನಗಳ ಓಡಾಟಗಳಿಗೆ ಬಾಧೆ ತಂದೊಡ್ಡಿದೆ. ಅಲ್ಲಲ್ಲಿ ಟ್ರಾಫಿಕ್ ಸಂದಣಿ / ಜಾಮ್‌ಗಳು ಸರ್ವೇ ಸಾಮಾನ್ಯವಾಗಿದ್ದು ಬೇಸಿಗೆ ರಜೆಯ ನಂತರ ಶಾಲಾ ಕಾಲೇಜಿಗೆ ಹೋಗಿ ಬರುವ ವಿದ್ಯಾರ್ಥಿಗಳಿಗೆ, ದಿನನಿತ್ಯ ಆಫೀಸ್‌ಗಳಿಗೆ ತೆರಳುವ ಉದ್ಯೋಗಿಗಳಿಗೆ ನಗರದಲ್ಲಿ ಓಡಾಟ ನಡೆಸಲು ತೊಂದರೆಯಾಗುತ್ತಿದೆ. ರಾಜಧಾನಿಯ ಹಲವು ಕಡೆ ಮನೆಗಳು ಕುಸಿಯುತ್ತಿರುವ ಘಟನೆಗಳು ವರದಿಯಾಗುತ್ತಿದ್ದು ಯಮುನಾ ನದಿಯಲ್ಲಿ ನೀರಿನ ಮಟ್ಟ ಅಪಾಯದ ಗೆರೆಯತ್ತ ಏರಲಾರಂಭಿಸಿದೆ. ದಕ್ಷಿಣ ಹಾಗು ಉತ್ತರ ಭಾರತದ ಹಲವು ಭಾಗಗಳಲ್ಲಿ ವ್ಯಾಪಕವಾಗಿ ಮಳೆಯಾಗುತ್ತಿದೆ. ಅನೇಕ ಪ್ರಕೃತಿ ವಿಕೋಪಗಳು ಎದುರಾಗುತ್ತಿವೆ. ಭೂಕುಸಿತ ಮತ್ತು ಪ್ರವಾಹ ಭೀತಿ ಆತಂಕ ಮೂಡಿಸಿದೆ. ಉತ್ತರಾಖಂಡದ ಉತ್ತರ ಕಾಶಿ ಜಿಲ್ಲೆಯ ಧರಾಲಿ ಪಟ್ಟಣದ ಬಳಿ ಆಕಸ್ಮಿಕವಾಗಿ ಉಂಟಾದ ಮೇಘ ಸ್ಫೋಟ (Cloud Burst) ದಿಂದ ಉಲ್ಬಣಿಸಿದ ಹಠಾತ್ ಪ್ರವಾಹ (Flash Floods) ಗಳಿಂದಾಗಿ ಅಪಾರ ಆಸ್ತಿ ಪಾಸ್ತಿ ನಷ್ಟ ಹಾಗು ಜೀವ ಹಾನಿಯಾಗಿದೆ. ಈ ರೀತಿಯ ನಿಸರ್ಗ ಪ್ರಕೋಪದ ರೌದ್ರ ದೃಶ್ಯಗಳು ಮನಃ ಕಲಕುವಂತೆ ಮಾಡಿವೆ. ಆದಷ್ಟು ಬೇಗ ಆ ಪ್ರದೇಶಗಳಲ್ಲಿ ಜನ ಜೀವನ ಸಾಮಾನ್ಯ ಸ್ಥಿತಿಗೆ ಮರಳಲೆಂದು ಆಶಿಸುತ್ತೇನೆ.

ಬಂಧುಗಳೇ, ಆಷಾಡ ಮಾಸ ಮುಗಿದು ಶ್ರಾವಣ ಮಾಸಕ್ಕೆ ಕಾಲಿಟ್ಟಿದ್ದೇವೆ. ಹಿಂದೂ ಜ್ಯೋತಿಷ್ಯದ ಪ್ರಕಾರ ಆಷಾಡ ಅಶುಭ ಮಾಸ. ಹೀಗಾಗಿ ಈ ಮಾಸ ಪ್ರಾರಂಭವಾದ ಬಳಿಕ ಮದುವೆ, ಗೃಹಪ್ರವೇಶ, ಉಪನಯನಾದಿ ಶುಭಕಾರ್ಯಗಳು, ವಾಹನ ಮತ್ತು ಜಮೀನು ಕೊಳ್ಳುವುದು, ಹೊಸ ವ್ಯಾಪಾರ ಪ್ರಾರಂಭ ಮುಂತಾದ ಕಾರ್ಯಗಳನ್ನು ಯಾರೂ ಮಾಡುವುದಿಲ್ಲ. ಚಾಂದ್ರಮಾನದ ಆಚರಣೆ ಮಾಡುವವರಿಗೆ ಆಷಾಢ ಶೂನ್ಯ ಮಾಸ, ಸೌರಮಾನದವರಿಗೆ ಕರ್ಕಾಟಕ ಮಾಸ ಶೂನ್ಯ. ಆಷಾಢ ಮಾಸದಲ್ಲಿ ಶುಭ ಕಾರ್ಯಗಳು ನಡೆಯದಿದ್ದರೂ ಪೂಜೆ, ವ್ರತಗಳನ್ನು ಮಾಡಬಹುದು. ಈ ಮಾಸದಲ್ಲಿ ಮಳೆಯ ಆರ್ಭಟ ಹೆಚ್ಚು. ಈ ರೀತಿ ನಿರಂತರವಾದ ಮಳೆ, ಗಾಳಿಯಿಂದ ಸಂಚಾರಕ್ಕೆ ಅಡೆತಡೆ, ಶುಭ ಕಾರ್ಯಗಳನ್ನು ಇಟ್ಟುಕೊಂಡರೆ ಬಂದು ಹೋಗುವ ಬಂಧು–ಬಳಗ, ಇಷ್ಟ–ಮಿತ್ರರಿಗೆ ಕಷ್ಟವಾಗುವುದು ಎನ್ನುವ ಕಾರಣಗಳಿಂದ ಈ ಅವಧಿಯಲ್ಲಿ ಸಾಮಾನ್ಯವಾಗಿ ಯಾರೂ ಶುಭಕಾರ್ಯ ಮಾಡುವುದಿಲ್ಲ. ಹಾಗೆಯೇ, ಆಷಾಢದಲ್ಲಿ ಅತ್ತೆ– ಸೊಸೆ, ಒಟ್ಟಿಗೆ ಇರಬಾರದು ಎಂದು ಸಾಮಾನ್ಯವಾಗಿ ಹೆಂಡತಿಯನ್ನು ತವರುಮನೆಗೆ ಕಳಿಸುವರು.ಮದುವೆಯಾದ ವರ್ಷದಲ್ಲಿ ಆಷಾಢದಲ್ಲಿ ಮಳೆ ಹೆಚ್ಚು ಇರುವುದರಿಂದ ಹೊಲ ಗದ್ದೆಗಳಲ್ಲಿ ಮತ್ತು ಮನೆಯಲ್ಲಿ ಹೆಣ್ಣು ಮಕ್ಕಳಿಗೆ ಕೆಲಸ ಕಾರ್ಯಗಳು ಹೆಚ್ಚಿರುತ್ತವೆ. ಅತ್ತೆಯಾದವರು ಸೊಸೆಗೆ ಹೆಚ್ಚು ಕೆಲಸದ ಒತ್ತಡ ತರಬಹುದು,ಇದರಿಂದ ಅವರಿಬ್ಬರಲ್ಲಿ ಕುಟುಂಬದ ಸಾಮರಸ್ಯ, ಅನ್ಯೋನ್ಯತೆಗೆ ಧಕ್ಕೆಯಾಗಿ ಜಗಳಕ್ಕೆ ಕಾರಣ ಆಗಬಾರದೆಂದು, ಒಂದು ತಿಂಗಳ ಕಾಲ ಸೊಸೆಯನ್ನು ತವರು ಮನೆಗೆ ಕಳಿಸುವ ಸಂಪ್ರದಾಯವಿದೆ. ಇನ್ನೊಂದು ಸಿದ್ಧಾಂತ ಈ ಅವಧಿಯಲ್ಲಿ ಹೆಣ್ಣು ಗರ್ಭ ತಾಳಿದರೆ ಆಕೆ ಚೈತ್ರ ಮಾಸದಲ್ಲಿ ಅಂದರೆ ಬಿರುಬೇಸಿಗೆ ಕಾಲದಲ್ಲಿ ಮಗುವಿಗೆ ಜನ್ಮ ನೀಡುತ್ತಾಳೆ.ಬೇಸಿಗೆಯ ಅವಧಿಯಲ್ಲಿ ಆಕೆಗೆ ಹೆಚ್ಚುತೊಂದರೆಯಾಗಬಹುದೆನ್ನುವುದು. ಆಷಾಢ ಮಾಸಕ್ಕೆ ಧಾರ್ಮಿಕ ಹಾಗು ಪೌರಾಣಿಕ  ಮಹತ್ವ ಮತ್ತು ಹಿನ್ನೆಲೆಗಳೂ ಇವೆ. ಅದ್ದರಿಂದ ಈ ಮಾಸವೂ ಇನ್ನೊಂದು ರೀತಿಯಲ್ಲಿ ವಿಶೇಷವೇ ಆಗಿದೆ.

ಇನ್ನು, ಮಾಸಗಳಲ್ಲೇ ಶ್ರಾವಣ ಮಾಸವು ಅತ್ಯಂತ ಪ್ರಮುಖ ಮಾಸವಾಗಿದೆ. ಈ ಮಾಸದಲ್ಲಿ ಶ್ರಾವಣ ಸೋಮವಾರದ ಉಪವಾಸ ಮಾಡುವುದರಿಂದ ಭಕ್ತರಿಗೆ ಆಧ್ಯಾತ್ಮಿಕ ಆಶೀರ್ವಾದವು ಲಭ್ಯವಾಗುತ್ತದೆ. ವ್ಯಕ್ತಿಗಳ ದೈಹಿಕ ಮತ್ತು ಮಾನಸಿಕ ಆರೋಗ್ಯ ಸುಧಾರಿಸುತ್ತದೆ. ಇಚ್ಛಾಶಕ್ತಿಯನ್ನು ಮತ್ತು ಸ್ಮರಣಾಶಕ್ತಿಯನ್ನು ಹೆಚ್ಚಿಸುತ್ತದೆ. ಉಪವಾಸ ವ್ರತವು ನಕಾರಾತ್ಮಕ ಶಕ್ತಿಗಳನ್ನು ದೂರಾಗಿಸುತ್ತದೆ. ಶಿವಶ್ರಾವಣ ಸೋಮವಾರದಂದು ಮದುವೆಯಾಗದ ಕನ್ಯೆಯರು ಉಪವಾಸ ವ್ರತವನ್ನು ಕೈಗೊಂಡರೆ ಉತ್ತಮ ಪತಿಯನ್ನು ಪಡೆಯುತ್ತಾರೆ. ಈ ತಿಂಗಳಲ್ಲಿ ಶ್ರಾವಣ ಶಿವರಾತ್ರಿ ಪ್ರಮುಖವಾದುದಾಗಿದೆ. ಶ್ರಾವಣದಲ್ಲಿ ಶಿವನನ್ನು ಆರಾಧಿಸಿದರೆ ಶುಭ ಫಲವು ನಮ್ಮದಾಗುತ್ತದೆ. ಶಿವನ ಆರಾಧನೆಯು ವ್ಯಕ್ತಿಯ ಮನಸ್ಸನ್ನು, ಇಂದ್ರೀಯವನ್ನು, ದೇಹವನ್ನು ಮತ್ತು ಆತ್ಮವನ್ನು ಶುದ್ಧೀಕರಿಸುತ್ತದೆ. ಅನೇಕ ಧರ್ಮಗ್ರಂಥಗಳಲ್ಲಿ ಶ್ರಾವಣ ಮಾಸವನ್ನು ಅತ್ಯಂತ ಪವಿತ್ರವೆಂದು ಹೇಳಲಾಗಿದೆ. ಉತ್ತರ ಭಾರತದಲ್ಲಿ ಶ್ರಾವಣ ತಿಂಗಳಲ್ಲಿ ಶಿವ ಭಕ್ತರು ಕಠಿಣ ಉಪವಾಸವನ್ನು ಮತ್ತು ಪ್ರಾರ್ಥನೆಯನ್ನು ಮಾಡುತ್ತಾರೆ. ಲಕ್ಷಾಂತರ ಶಿವ ಭಕ್ತರು (ಕಾವರಿಯಾ) ಪುಣ್ಯ ನಗರಿ ಹರಿದ್ವಾರಕ್ಕೆ ತೆರಳಿ ಅಲ್ಲಿಂದ ಪವಿತ್ರ ಗಂಗಾ ನದಿಯ ಜಲವನ್ನು ತಮ್ಮ ತಮ್ಮ ಮನೆಗಳಿಗೆ, ದೇವಸ್ಥಾನಗಳಿಗೆ ತಂದು ಶಿವನಿಗೆ ಅಭಿಷೇಕ ಮಾಡುತ್ತಾರೆ. ದೇವರುಗಳ ಮತ್ತು ಅಸುರರ ನಡುವೆ ನಡೆದ ಸಮುದ್ರ ಮಂಥನ ಸಂದರ್ಭದಲ್ಲಿ ಬ್ರಹ್ಮಾಂಡವನ್ನು ರಕ್ಷಿಸಲು ಹೊರಹೊಮ್ಮಿದ ಹಾಲಾಹಲವನ್ನು ಶಿವನು ಸೇವಿಸಿದ ಸಮಯವಿದು. ಇದನ್ನು ಗಮನಿಸಿದ ಪಾರ್ವತಿಯು ಓಡಿ ಬಂದು ತನ್ನ ಪತಿಯ ಗಂಟಲನ್ನು ಬಿಗಿ ಹಿಡಿಯುತ್ತಾಳೆ. ಆಗ ವಿಷವು ಶಿವನ ಕಂಠದಲ್ಲೇ ಉಳಿದುಕೊಳ್ಳುತ್ತದೆ. ಹೀಗಾಗಿ ಶಿವನನ್ನು ನೀಲಕಂಠನೆಂದೂ ಕರೆಯಲಾಗುತ್ತದೆ. ಈ ಶ್ರಾವಣ ತಿಂಗಳ ಪ್ರತಿದಿನವೂ ಧಾರ್ಮಿಕ ಮಹತ್ವವನ್ನು ಹೊಂದಿದೆ. ಮನೆಯಲ್ಲಿ ಅಥವಾ, ದೇವಾಲಯಗಳಲ್ಲಿ ಪೂಜೆ, ವೃತ, ಭಜನೆಗಳಂತಹ ಧಾರ್ಮಿಕ ಚಟುವಟಿಕೆಗಳಲ್ಲಿ ಜನರು ಪಾಲ್ಗೊಳ್ಳಬೇಕು, ತಿಂಗಳಲ್ಲಿ ಪ್ರತಿನಿತ್ಯವಾಗದಿದ್ದರೂ ಒಮ್ಮೆಯಾದರೂ ಶಿವನ ದೇವಾಲಯಕ್ಕೆ ಭೇಟಿ ನೀಡಬೇಕು. ಎಲ್ಲರ ಆಸೆಗಳು ಸಾಕಾರಗೊಂಡು ಶಿವನ ಅನುಗ್ರಹ ಸಿಕ್ಕುತ್ತದೆ. ಭಾದ್ರಪದ ಶ್ರಾವಣದ ನಂತರ ಬರುವ ಮಾಸ. ಭಾದ್ರಪದ ಶುಕ್ಲದ ಚೌತಿಯಂದು ವಿಘ್ನ ವಿನಾಶಕ ಗಣಪನನ್ನು ಮನೆ ಮನೆಗೆ ಜನರು ಬರ ಮಾಡಿಕೊಳ್ಳುತ್ತಾರೆ. ಹಳ್ಳಿಗಳಲ್ಲಿ, ಪಟ್ಟಣಗಳಲ್ಲಿ ನಗರಗಳಲ್ಲಿ ಸಾಮೂಹಿಕವಾಗಿ, ಸಾರ್ವಜನಿಕವಾಗಿ ಗಣಪತಿ ಪೂಜೆ ನಡೆಯುತ್ತದೆ. ಈ ಬಾರಿ ಬರುವ ದಿನಗಳಲ್ಲಿ ಎಲ್ಲೆಡೆ ಆಚರಿಸಲಿರುವ ಗಣೇಶ ಚತುರ್ಥಿಯ ಶುಭಾಶಯಗಳನ್ನು ಎಲ್ಲರಿಗೂ ತಿಳಿಸುತ್ತೇನೆ ಹಾಗೂ ಗಜಾನನನ ಆಶೀರ್ವಾದ, ಅನುಗ್ರಹ ಎಲ್ಲರ ಮೇಲಿರಲೆಂದು ಪ್ರಾರ್ಥಿಸುತ್ತೇನೆ.

ಆತ್ಮೀಯರೇ, ಕಳೆದ ಜೂನ್ ತಿಂಗಳಲ್ಲಿ ಬಹಳ ವಿಶೇಷವಾಗಿ ಮತ್ತು ಸಂಭ್ರಮದಿಂದ ನಮ್ಮ ಸಂಘದಲ್ಲಿ ಮತ್ತು ಇತರ ಕನ್ನಡ ಪರ ಸಂಘ ಸಂಸ್ಥೆಗಳಲ್ಲಿ ಆಚರಿಸಿದ 11ನೇ ಅಂತರರಾಷ್ಟ್ರೀಯ ಯೋಗ ದಿನ ಕಾರ್ಯಕ್ರಮಗಳ ವರದಿ ಮತ್ತು ಛಾಯಾಚಿತ್ರಗಳು, ಸಂಘದ ಅಜೀವ ಸದಸ್ಯರಾದ ಐಐಟಿ ದೆಹಲಿಯ ಪೂರ್ವ ಪ್ರಾಧ್ಯಾಪಕರಾದ **ಪ್ರೊ. ಎಸ್. ಶ್ರೀನಿವಾಸ ಮೂರ್ತಿ** ಅವರ ದೆಹಲಿಯಲ್ಲಿ ಕನ್ನಡ ಅನುಭವ ಕುರಿತ ಲೇಖನ, **ಶ್ರೀ ಎಂ.ವಿ. ವೆಂಕಟೇಶ್** ಅವರ ಮುಂಬೈ–ಗೋವಾ ‘ಪ್ರವಾಸ ಕಥನ’, **ಶ್ರೀಮತಿ ಎಂ.ಎಸ್. ಲಾವಣ್ಯ ಬಸವರಾಜ್** ಅವರ ‘ಸಂತೋಷ ಸಂಭ್ರಮದ ಕರಾಳ ನೆನಪು’ ಎಂಬ ಶೀರ್ಷಿಕೆಯುಳ್ಳ ಲೇಖನ, ಯುವ ಬರಹಗಾರ **ಶ್ರೀ ಪ್ರಸಾದ್ ನಾಯ್ಕ್** ಅವರ ‘ಪುಟಗಳಲ್ಲಿ ವಿಶ್ವ ಪರ್ಯಟನೆ’ ಎಂಬ ಸ್ವಾರಸ್ಯಮಯ ಬರಹ, ಜೊತೆ ಜೊತೆಗೆ, ಆರೋಗ್ಯವೇ ಭಾಗ್ಯ ಅಂಕಣದಲ್ಲಿ ಪ್ರಸಿದ್ಧ ಒಂಕಾಲಜಿಸ್ಟ್ ಮತ್ತು ರೋಬೋಟಿಕ್ ಸರ್ಜನ್ **ಡಾ. ನಿರಂಜನ್ ನಾಯ್ಕ್** ಅವರು ನೀಡಿರುವ ‘ತಲೆ ಹಾಗು ಗಂಟಲಿನ ಕ್ಯಾನ್ಸರ್ ಕುರಿತು ಜಾಗೃತಿಯ ಮಾಹಿತಿ ಮತ್ತು ಹಿರಿಯ ಯೋಗ ವಿಜ್ಞಾನಿ, ತತ್ವಜ್ಞಾನಿ ಮತ್ತು ಯೋಗ ಗುರುಗಳಾದ **ಡಾ. ಈಶ್ವರ ವೀ. ಬಸವರಡ್ಡಿ** ಅವರ ರೋಗ ನಿಧಾನದಲ್ಲಿ ಮನಸ್ಸಿನ ಪಾತ್ರವೆಂಬ ಲೇಖನ, ಹಾಗೂ ತಿಂಗಳ ವ್ಯಕ್ತಿ ಅಂಕಣದಲ್ಲಿ ನಮ್ಮನ್ನಗಲಿದ **ಶ್ರೀಮತಿ ಜಮುನಾ ಸಿ. ಮಠದ** ಅವರ ಬಗ್ಗೆ **ಶ್ರೀ ಸರವು ಕೃಷ್ಣಭಟ್** ಅವರ ಅನಿಸಿಕೆ–ನುಡಿ ನಮನ ಮತ್ತಿತರ ವಿವರಗಳನ್ನು ಮೈತುಂಬಿಸಿಕೊಂಡು ನಿಮ್ಮ ಕೈಯಲ್ಲಿದೆ ಈ ಜುಲೈ ತಿಂಗಳ ಅಭಿಮತ ಸಂಚಿಕೆ. ನೀವೆಲ್ಲಾ ಸಾವಕಾಶವಾಗಿ, ಸವಿವರವಾಗಿ ಓದಬೇಕೆಂದು ವಿನಂತಿ.

ಎಲ್ಲರಿಗೂ ಗುರು ಪೂರ್ಣಿಮಾ ಮತ್ತು ರಕ್ಷಾ ಬಂಧನದ ಹಾರ್ದಿಕ ಅಭಿನಂದನೆಗಳು. ಮುಂಬರುವ ಸ್ವಾತಂತ್ರ್ಯೋತ್ಸವ ದಿನಾಚರಣೆಯ ಮತ್ತು ಗಣೇಶ ಚತುರ್ಥಿಯ ಹಾರ್ದಿಕ ಶುಭಾಶಯಗಳು, ನಮಸ್ಕಾರ.

**‘ಮನೆ ಮನೆಯಲ್ಲೂ ತ್ರಿವರ್ಣ ಧ್ವಜ–ಮುಗಿಲೆತ್ತರಕ್ಕೆ ಹಾರಲಿ ನಮ್ಮ ರಾಷ್ಟ್ರ ಧ್ವಜ’**

***ಕೆ. ಶ್ರೀನಿವಾಸ ಮೂರ್ತಿ***
**ಪ್ರಧಾನ ಸಂಪಾದಕ**

ಒಳಪುಟಗಳಲ್ಲಿ .....

❑ ಅಧ್ಯಕ್ಷರ ನುಡಿ–4 ❑ ಮುನ್ನೋಟ–5 ❑ ದೆಹಲಿ ಕರ್ನಾಟಕ ಸಂಘದಲ್ಲಿ ಅಚ್ಚುಕಟ್ಟಾಗಿ ಅರ್ಥಪೂರ್ಣವಾಗಿ ಆಯೋಜನೆಗೊಂಡ “11ನೇ ಅಂತರರಾಷ್ಟ್ರೀಯ ಯೋಗ ದಿನಾಚರಣೆ’–6 ❑ ಜನಕಪುರಿ ಕನ್ನಡ ಕೂಟದಿಂದ ಮತ್ತು ಸ್ನೇಹಾ ದೆಹಲಿ ಕನ್ನಡ ಅಸೋಸಿಯೇಷನ್ ವತಿಯಿಂದ ಅಂತರರಾಷ್ಟ್ರೀಯ ಯೋಗ ದಿನಾಚರಣೆ–8 ❑ ದೆಹಲಿಯಲ್ಲಿ ಕನ್ನಡ–ಒಂದು ಅನುಭವ–9 ❑ ಕವನಗಳು–13 ❑ ಆಹ್ಲಾದಕರ ಮುಂಬೈ ಮತ್ತು ಗೋವಾ ಪ್ರವಾಸ ಕಥನ–14 ❑ ತಲೆ ಹಾಗೂ ಗಂಟಲಿನ ಕ್ಯಾನ್ಸರ್ ಬಗ್ಗೆ ಜಾಗೃತಿ–16 ❑ ರೋಗ ನಿಧಾನದಲ್ಲಿ ಮನಸ್ಸಿನ ಪಾತ್ರ–17 ❑ ತಿಂಗಳ ವ್ಯಕ್ತಿ : ಶ್ರೀಮತಿ ಜಮುನಾ ಸಿ. ಮಠದ–18 ❑ ಸಂತೋಷ ಸಂಭ್ರಮದ ಕರಾಳ ನೆನಪು–19 ❑ ಪುಟಗಳಲ್ಲಿ ವಿಶ್ವ ಪರ್ಯಟನೆ–20 ❑ ಗುರುವಂದನಾ ಕಾರ್ಯಕ್ರಮ ಮತ್ತು ದೆಹಲಿ ತುಳುವ ಮಹಾಸಭೆಯ ಸಂಚಾಲಕರಾಗಿ ಶ್ರೀ ಪ್ರಕಾಶ್ ಶೆಟ್ಟಿ ಉಳೆಪಾಡಿ ನೇಮಕ–22

**ಕಾವಲು ಸಮಿತಿ :** ಶ್ರೀ ಎನ್.ಎ. ಮಾಧವ ಶ್ರೀ ಎಂ.ವಿ. ವೆಂಕಟೇಶ್ ಶ್ರೀಮತಿ ರಾಧಾ ಕೌಜಲಗಿ

## ಅಧ್ಯಕ್ಷರ ನುಡಿ



ಆತ್ಮೀಯ ದೆಹಲಿ ಕರ್ನಾಟಕ ಸಂಘದ ಸದಸ್ಯರೇ,

ಜೂನ್ ಮತ್ತು ಜುಲೈನಲ್ಲಿ ದೆಹಲಿ ಕರ್ನಾಟಕ ಸಂಘದ ಕಾರ್ಯಕ್ರಮಗಳು ವಿರಳವಾಗಿದ್ದವು. ಕಾರಣ ಮೇ ಮತ್ತು ಜೂನ್ ತಿಂಗಳಲ್ಲಿ ನಮ್ಮ ರಾಜಧಾನಿಯು ಕನ್ನಡಿಗರು ತಾಯ್ನಾಡಿಗೆ ತೆರಳುತ್ತಾರೆ, ದೆಹಲಿಯಲ್ಲಿ ಇರುವವರು ಕಡಿಮೆ ಇರುವ ಸಂದರ್ಭ.

ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಪ್ರಶಸ್ತಿಗಳನ್ನು ಪಡೆದ ಡಾ. ಎಂ. ಅಣ್ಣಯ್ಯ ಕುಲಾಲ್ ಉಳ್ತೂರ್(ಕುಂದಾಪುರ) ಮತ್ತು ಶ್ರೀಮತಿ ಬಾನು ಮುಷ್ತಾಕ್‌ರವರಿಗೆ ಅಭಿನಂದನೆ ಕಾರ್ಯಕ್ರಮವನ್ನು ದೆಹಲಿಯಲ್ಲಿ ಹಮ್ಮಿಕೊಂಡಿದ್ದು ತಮಗೆಲ್ಲ ಗೊತ್ತಿರುವ ವಿಷಯ.

ಈ ಮಧ್ಯದಲ್ಲಿ ದೆಹಲಿ ಕರ್ನಾಟಕ ಸಂಘದಲ್ಲಿ ಸರಿ ಸುಮಾರು 20 ವರ್ಷಗಳ ನಂತರ ಸಭಾಂಗಣದ ನವೀಕರಣದ ಕೆಲವೊಂದು ಕೆಲಸಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಅದರಲ್ಲಿ ಪ್ರಮುಖವಾಗಿ ಸೌಂಡ್ ಮತ್ತು ಪ್ರೊಜೆಕ್ಟರ್ ವ್ಯವಸ್ಥೆ ಈಗಾಗಲೇ ನವೀಕರಿಸಿದ್ದೇವೆ. ಈಗ ಮುಖ್ಯವಾಗಿ ಆಸನಗಳನ್ನು ಮತ್ತು ನೆಲಹಾಸನ್ನು (ಕಾರ್ಪೆಟ್) ಬದಲಿಸುವ ಕೆಲಸ ತ್ವರಿತ ಗತಿಯಲ್ಲಿ ನಡೆಯುತ್ತಿದೆ. ಸೆಪ್ಟೆಂಬರ್ 15 ರ ಒಳಗಾಗಿ ನಮಗೆ ಸಭಾಂಗಣದ ನೂತನ ಆಸನಗಳ ಅಳವಡಿಕೆ ಕೆಲಸಗಳು ಮುಗಿದು ಕೈಗೆ ಸಿಗುತ್ತದೆ. ಈ ಕೆಲಸ ಮುಗಿಯೋ ಮಧ್ಯದಲ್ಲಿ ಮೊಟ್ಟಮೊದಲಿಗೆ ದೆಹಲಿ ಕರ್ನಾಟಕ ಸಂಘದಲ್ಲಿ ಜ್ಞಾನಪೀಠ ಪ್ರಶಸ್ತಿ ಪಡೆದಂತಹ ಹೆಸರಾಂತ ನಮ್ಮ ಕನ್ನಡ ಸಾಹಿತ್ಯಲೋಕದ ದಿಗ್ಗಜ ಸಾಹಿತಿಗಳ, ಕವಿಗಳ ಸಾಹಿತ್ಯೋತ್ಸವವನ್ನು ಹಮ್ಮಿಕೊಂಡಿದ್ದೇವೆ. ಆಗಸ್ಟ್ ತಿಂಗಳ ಪ್ರತಿ ಭಾನುವಾರ ಇಬ್ಬರು ಕವಿಗಳ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು ನಂತರ ನಮ್ಮ ರಾಜ್ಯದ ಇತರ ಮಹಾನ್ ಸಾಹಿತಿ/ಕವಿಗಳ ಸ್ಮರಣೆ ಮತ್ತು ಜಯಂತೋತ್ಸವ ಕಾರ್ಯಕ್ರಮವನ್ನು ಮುಂದೆ ಹಮ್ಮಿಕೊಳ್ಳಲಿದ್ದೇವೆ. ಮೊದಲಿಗೆ ರಾಷ್ಟ್ರಕವಿ ಕುವೆಂಪು ಮತ್ತು ಡಾ. ಯು.ಆರ್. ಅನಂತಮೂರ್ತಿ ಅವರ ಕಾರ್ಯಕ್ರಮದಿಂದ ಶುರುವಾಗಿ ಜ್ಞಾನಪೀಠ ಪ್ರಶಸ್ತಿ ಪಡೆದಂತಹ ಎಲ್ಲಾ ಎಂಟು ಮಂದಿ ಹೆಮ್ಮೆಯ ಕನ್ನಡಿಗರ ಸಾಹಿತ್ಯೋತ್ಸವವನ್ನು ಮಾಡುತ್ತಿದ್ದೇವೆ. ಹಾಗೆ ಮುಂದುವರೆದು ಡಿವಿಜಿ, ಬಿಎಂಶ್ರೀ, ಎಸ್. ಎಲ್. ಭೈರಪ್ಪ, ಪು.ತಿ.ನ, ಅ.ನ. ಕೃಷ್ಣರಾಯರು, ಕೆ.ಎಸ್. ನರಸಿಂಹ ಸ್ವಾಮಿ, ಗೋಪಾಲಕೃಷ್ಣ ಅಡಿಗ, ನಿರಂಜನ, ಪಂಜೆ ಮಂಗೇಶರಾಯರು, ಗೋವಿಂದ ಪೈ, ಚೆನ್ನವೀರ ಕಣವಿ, ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ, ಜಿ.ಎಸ್. ಶಿವರುದ್ರಪ್ಪ, ಇತ್ತೀಚೆಗೆ ನಿಧನರಾದ ಎಚ್ಚೆಸ್ವಿ ಮತ್ತು ಇನ್ನೂ ಅನೇಕ ಸಾಹಿತಿಗಳ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತೇವೆ.

ಈ ನಡುವೆ ಪ್ರತಿವರ್ಷದಂತೆ ಈ ವರ್ಷವೂ ಸಹ ದೆಹಲಿ ಕರ್ನಾಟಕ ಸಂಘದಲ್ಲಿ ವಿಘ್ನ ವಿನಾಶಕ ಗಣೇಶನ ಚತುರ್ಥಿಯನ್ನು ಹಮ್ಮಿಕೊಳ್ಳಲಾಗುತ್ತಿದೆ ಐದು ದಿವಸಗಳು ಸಂಘದ ಆವರಣದಲ್ಲಿ ಗಣಪನನ್ನು ಇಡುತ್ತಿದ್ದೇವೆ.

ಇದೇ ಆಗಸ್ಟ್ 15 ರಂದು ಕರ್ನಾಟಕ ಜಾನಪದ ಪರಿಷತ್ತು ದೆಹಲಿ ಘಟಕವನ್ನು ರಾಷ್ಟ್ರ ರಾಜಧಾನಿಯಲ್ಲಿ ಉದ್ಘಾಟಿಸಲಾಗುತ್ತಿದೆ. ವಿಶ್ರಾಂತ ಕುಲಪತಿಗಳು ಹಾಗು ಜಾನಪದ ಪರಿಷತ್ತಿನ ಅಧ್ಯಕ್ಷರಾದ ಡಾ. ಹಿ.ಚಿ. ಬೋರಲಿಂಗಯ್ಯನವರ ನೇತೃತ್ವದಲ್ಲಿ ಸ್ವಾತಂತ್ರ್ಯ ದಿನಾಚರಣೆಯಂದು ರಾಷ್ಟ್ರ ರಾಜಧಾನಿಯಲ್ಲಿ ನಮ್ಮ ನಾಡಿನ ಜಾನಪದ ಕಲೆ, ಸಂಸ್ಕೃತಿ, ಉಳಿಸುವ, ಬೆಳೆಸುವ ನಿಟ್ಟಿನಲ್ಲಿ ಮತ್ತು ನಮ್ಮ ದೆಹಲಿಯ ಮಕ್ಕಳಿಗೆ ಜಾನಪದ ಸೊಗಡು ಅರಿವಾಗಿಸುವ ದಿಸೆಯಲ್ಲಿ ಪರಿಷತ್ತಿನ ದೆಹಲಿ ಘಟಕದ ಉದ್ಘಾಟನೆ ಆಗುತ್ತಿರುವುದು ಸ್ವಾಗತಾರ್ಹ. ದೆಹಲಿ ಕರ್ನಾಟಕ ಸಂಘದಿಂದ ಸಂಪೂರ್ಣ ಸಹಕಾರ ಈ ಘಟಕಕ್ಕೆ ನಾವು ನೀಡುತ್ತೇವೆ.

ಆಗಸ್ಟ್ ನಂತರ ಸೆಪ್ಟೆಂಬರ್ ತಿಂಗಳಲ್ಲಿ ನಾವು ವಿಶೇಷವಾಗಿ ಸ್ಥಳೀಯ ಸಂಘ ಸಂಸ್ಥೆಗಳಿಗೆ ನಾಟಕ ಸ್ಪರ್ಧೆಯನ್ನು ಹಮ್ಮಿಕೊಂಡಿದ್ದೇವೆ. ಈ ನಾಟಕ ಸ್ಪರ್ಧೆಯಲ್ಲಿ ಮೂರು ಅತ್ಯುತ್ತಮ ನಾಟಕಗಳಿಗೆ ಕ್ರಮವಾಗಿ ಮೊದಲ, ಎರಡನೇಯ, ಮೂರನೇಯ ಬಹುಮಾನಗಳನ್ನು ನೀಡಲಾಗುವುದು. ಜೊತೆಗೆ ಉತ್ತಮ ನಿರ್ದೇಶನ, ಕಲಾವಿದ/ದೆ, ಪ್ರಸಾಧನ, ರಂಗಸಜ್ಜಿಕೆ ಹೀಗೆ ಇನ್ನೂ ಅನೇಕ ವಿಭಾಗಗಳಲ್ಲಿ ಬಹುಮಾನಗಳನ್ನು ಕೊಡಲಾಗುವುದು. ನಮ್ಮ ಕಲಾವಿದರನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಸೆಪ್ಟೆಂಬರ್ ಮಧ್ಯ ಅಥವಾ ಕೊನೆಯ ವಾರ ಸಭಾಂಗಣ ತಯಾರಾದ ತಕ್ಷಣ ಈ ನಾಟಕೋತ್ಸವ ಸ್ಪರ್ಧೆ ನಡೆಯಲಿದೆ.

ಬಂಧುಗಳೇ, ಮೈಸೂರು ದಸರಾ ಎಷ್ಟೊಂದು ಸುಂದರ ಅಲ್ಲವೇ.. ಮೊಟ್ಟ ಮೊದಲ ಬಾರಿಗೆ ದೆಹಲಿಯ ನಮ್ಮ ಮಕ್ಕಳು ಮೈಸೂರು ದಸರಾದಲ್ಲಿ ಭಾಗವಹಿಸಲಿದ್ದಾರೆ. ಅದಕ್ಕಾಗಿ ದೆಹಲಿ ಕರ್ನಾಟಕ ಸಂಘದಲ್ಲಿ ನೃತ್ಯ ತರಬೇತಿ ಪಡೆದಂತಹ ಮಕ್ಕಳು ಮೈಸೂರಿನಲ್ಲಿ ಈ ಬಾರಿಯ ದಸರಾ ಉತ್ಸವದಲ್ಲಿ ನೃತ್ಯ ರೂಪಕವನ್ನು ನೀಡಲಿದ್ದಾರೆ. ಸುಮಾರು 15 ಮಕ್ಕಳು ದೆಹಲಿಯ ಪ್ರತಿನಿಧಿಗಳಾಗಿ ದೆಹಲಿ ಕರ್ನಾಟಕ ಸಂಘದಿಂದ ಈ ಕಾರ್ಯಕ್ರಮವನ್ನು ನೀಡಲಿರುವುದು ನನಗೆ ಖುಷಿಯ ಸಂಗತಿ. ಯಾಕೆಂದರೆ ನನ್ನ ಮೊದಲ ಆದ್ಯತೆ ದೆಹಲಿ ಕನ್ನಡಿಗರಿಗೆ ಸಿಗಬಹುದಾದ ಎಲ್ಲಾ ಅವಕಾಶಗಳನ್ನು ದೊರಕಿಸಿಕೊಡುವುದು. ಆದರಂತೆ ನಾನು ಇಲ್ಲಿಯವರೆಗೆ ಶ್ರಮಿಸಿದ್ದು, ಮುಂದೆಯೂ ಪ್ರಯತ್ನಿಸುವೆ. ಸ್ಥಳೀಯ ಪ್ರತಿಭೆಗಳು ರಾಷ್ಟ್ರ ರಾಜಧಾನಿಯಿಂದ ತಾಯ್ನಾಡಿಗೆ ಹೋಗಿ ಮೈಸೂರು ದಸರಾದಲ್ಲಿ ಭಾಗವಹಿಸಿ ಕಾರ್ಯಕ್ರಮ ನೀಡುವುದು ನನ್ನ ಇನ್ನೊಂದು ಕನಸಾಗಿತ್ತು. ಅದು ಸಹಾ ಈ ಸಲದಿಂದ ಆರಂಭವಾಗಲಿದೆ. ಈ ಬಾರಿ ಕೇವಲ 15 ಮಕ್ಕಳು ಮಾತ್ರ ಭಾಗವಹಿಸಲಿದ್ದು ಬರುವ ವರ್ಷಗಳಲ್ಲಿ ಇನ್ನು ಹೆಚ್ಚಿನ ಮಕ್ಕಳನ್ನು ಕರೆದುಕೊಂಡು ಹೋಗಿ ಬರುವ ಅವಕಾಶ ಪಡೆಯಲು ಪ್ರಯತ್ನಿಸುವೆ. ನಾವು ತಾಯ್ನಾಡಿನಿಂದ ದೂರದಲ್ಲಿದ್ದರೂ ಸಹ ನಮ್ಮ ರಾಜ್ಯದ ಕಲೆ, ಸಂಸ್ಕೃತಿ, ಭಾಷೆಯನ್ನು ಉಳಿಸುವ ಕಾರ್ಯಕ್ರಮಗಳನ್ನು ದೆಹಲಿ ಕರ್ನಾಟಕ ಸಂಘದಡಿ ನಾನು ಸದಾ ಮಾಡುತ್ತಲೇ ಬಂದಿರುವೆ. ಈ ದಸರಾ ಕಾರ್ಯಕ್ರಮದಲ್ಲಿ ಭಾಗವಹಿಸುವಿಕೆ ನಾವು ಇತರ ಭಾಷಿಕರಿಗಿಂತ ಯಾವುದರಲ್ಲೂ ಕಡಿಮೆ ಇಲ್ಲ ಎಂದು ನಮ್ಮ ರಾಜ್ಯದ ಕನ್ನಡಿಗರಿಗೆ ತಿಳಿಸುವ ಒಂದು ದೊಡ್ಡ ಅವಕಾಶ. ದೆಹಲಿ ಕರ್ನಾಟಕ ಸಂಘ ಆ ಕೆಲಸವನ್ನು ಯಶಸ್ವಿಯಾಗಿ ಮಾಡಲಿದೆ ಎಂದು ಭರವಸೆ ನೀಡುತ್ತೇನೆ.

ದೆಹಲಿ ಕರ್ನಾಟಕ ಸಂಘದ ವತಿಯಿಂದ ಬರುವ ದಿನಗಳಲ್ಲಿ ನಮ್ಮ ಕಲಾವಿದರು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಕಾರ್ಯಕ್ರಮಗಳನ್ನ ಕೊಡಬೇಕು ಎಂಬುದು ನನ್ನ ಮನದಾಸೆ.... ಆ ನಿಟ್ಟಿನಲ್ಲಿ ನಾನು ಸದಾ ಪ್ರಯತ್ನಪಡುವೆ.

ದೆಹಲಿ ಕರ್ನಾಟಕ ಸಂಘದಿಂದ ಸ್ಥಾಪಿತವಾದ ವಾರ್ಷಿಕ ಪ್ರಶಸ್ತಿಗಳಲ್ಲಿ ಕಳೆದ ವರ್ಷದ್ದು ಪ್ರದಾನ ಮಾಡಲು ಇನ್ನೂ ಬಾಕಿ ಉಳಿದಿವೆ. ಈ ವರ್ಷ ಕಳೆದ ವರ್ಷದ ಬಾಕಿಯುಳಿದ ನಾಲ್ಕು ಪ್ರಶಸ್ತಿಗಳು ಮತ್ತು ಈ ವರ್ಷದ ನಾಲ್ಕು ಪ್ರಶಸ್ತಿಗಳನ್ನು ಸೇರಿದಂತೆ ಬರುವ ಅಕ್ಟೋಬರ್ ತಿಂಗಳಲ್ಲಿ ದೆಹಲಿ ಕರ್ನಾಟಕ ಸಂಘದಿಂದ ಪ್ರತಿಷ್ಠಿತ ಅರ್ಹ ಗಣ್ಯಮಾನ್ಯರಿಗೆ ನೀಡಲಾಗುವುದು. ಜೊತೆಗೆ ದೆಹಲಿಯ ಕೆಲವು ಸ್ಥಳೀಯ ಸಂಘ-ಸಂಸ್ಥೆಗಳ ಕಾರ್ಯಕ್ರಮಗಳನ್ನು ಸಹ ಅಕ್ಟೋಬರ್ ತಿಂಗಳಲ್ಲಿ ಆಯೋಜನೆ ಮಾಡುತ್ತಿದ್ದೇವೆ.

ಬಂಧುಗಳೇ, ತಮಗೆಲ್ಲ ಗೊತ್ತಿರುವಂತೆ ನವಂಬರ್ ತಿಂಗಳಲ್ಲಿ ದೆಹಲಿಯ ಸ್ಥಳೀಯ ಕಲಾವಿದರಿಗೆ ತರಬೇತಿ ಕೊಡಿಸಿ, ವೇದಿಕೆಯ ಮೇಲೆ ಕಾರ್ಯಕ್ರಮಗಳನ್ನು ನಮ್ಮ ಕನ್ನಡ ಹಬ್ಬ ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ಪ್ರತಿ ಶನಿವಾರ ಭಾನುವಾರ ಎಡೆಬಿಡದೆ ನಡೆಸಲಿದ್ದೇವೆ.

ಸಾಲು ಸಾಲಾಗಿ ನಾಲ್ಕು ತಿಂಗಳ ಕಾರ್ಯಕ್ರಮಗಳ ಯೋಚನೆ ಮತ್ತು ಯೋಜನೆಗಳನ್ನು ತಮ್ಮ ಮುಂದೆ ತೆರೆದಿಟ್ಟಿರುವೆ. ದಯಮಾಡಿ ಈ ಎಲ್ಲಾ ಕಾರ್ಯಕ್ರಮಗಳಿಗೆ ತಾವು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ವಿಯಾಗಿಸಿ ರಾಷ್ಟ್ರ ರಾಜಧಾನಿಯಲ್ಲಿ. ನಮ್ಮ ಕನ್ನಡ ಡಿಂಡಿಮವನ್ನು ಬಾರಿಸಿ...

ಮೊಟ್ಟ ಮೊದಲ ಬಾರಿ ನಮ್ಮ ರಾಜ್ಯದ ಪ್ರಸಿದ್ಧ ಸಾಹಿತಿಗಳಾದ ಪದ್ಮಭೂಷಣ ಶ್ರೀಮತಿ ಡಾ. ಸುಧಾ ಮೂರ್ತಿಯವರು ಬರೆದ ಸಣ್ಣ ಕಥೆಗಳ ಆಧಾರಿತ ಒಂದು ನಾಟಕವನ್ನು ದೆಹಲಿಯಲ್ಲಿ ಉತ್ತರ ಭಾರತದ ಕಲಾವಿದರು ಪ್ರದರ್ಶನ ಮಾಡಿ ತುಂಬಾ ಹೆಸರನ್ನು ಗಳಿಸಿದ್ದಾರೆ. ಆ ನಾಟಕ ನಮ್ಮ ಸಭಾಂಗಣದಲ್ಲೂ ಸಹ ಪ್ರದರ್ಶಿತವಾಗಬೇಕೆಂಬುದು ಕೆಲವರ ಮನದಾಸೆ. ಈ ನಾಟಕವನ್ನು ಪ್ರಸ್ತುತಪಡಿಸುವ ಕಲಾವಿದರೊಂದಿಗೆ ಮಾತನಾಡಿ ಬರುವ ದಿನಗಳಲ್ಲಿ ಶ್ರೀಮತಿ ಸುಧಾ ಮೂರ್ತಿ ಅಮ್ಮನವರ ಈ ನಾಟಕವನ್ನು ದೆಹಲಿ ಕರ್ನಾಟಕ ಸಂಘ ಆಯೋಜನೆ ಮಾಡಲಿದೆ. ಏಕೆಂದರೆ ದೆಹಲಿ ಕರ್ನಾಟಕ ಸಂಘಕ್ಕೆ ಅವರು ನೀಡಿರುವ ಕೊಡುಗೆ ಅಪಾರ. ಅವರು ದೆಹಲಿಯಲ್ಲಿ ಇರುವ ಅವಧಿಯಲ್ಲಿಯೇ ಮತ್ತೊಂದು ಜಾಗವನ್ನು ದೆಹಲಿ ಕರ್ನಾಟಕ ಸಂಘಕ್ಕೆ ತೆಗೆದುಕೊಳ್ಳಬೇಕು ಎನ್ನುವುದು ದೆಹಲಿಯ ಕನ್ನಡಿಗರ ಮನದಾಸೆ. ಜೊತೆಗೆ ಕರುನಾಡಿನಿಂದ ಉನ್ನತ ಶಿಕ್ಷಣಕ್ಕೆ/ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ದೆಹಲಿಗೆ ಬರುವ ವಿದ್ಯಾರ್ಥಿಗಳಿಗೆ, ಅನೇಕ ಕಲಾವಿದರಿಗೆ. ಅನುಕೂಲವಾಗುವಂತಹ ಒಂದು ವಸತಿ ನಿಲಯ, ನಿತ್ಯ ಅನ್ನ ದಾಸೋಹ ಆದಷ್ಟು ಬೇಗನೆ ಆಗಬೇಕು. ಈ ನಿಟ್ಟಿನಲ್ಲಿ ಪ್ರಯತ್ನವನ್ನು ಸತತವಾಗಿ ಮಾಡುತ್ತಿದ್ದೇನೆ. ಇದಕ್ಕಾಗಿ ನಿಮ್ಮೆಲ್ಲರ ಸಹಕಾರ, ಬೆಂಬಲ, ಪ್ರೀತಿ ಮತ್ತು ವಿಶ್ವಾಸ ಸದಾ ಇರಲಿ ಎಂದು ಕೇಳಿಕೊಳ್ಳುತ್ತಿದ್ದೇನೆ. ನಮಸ್ಕಾರ.

ನಿಮ್ಮ ವಿಶ್ವಾಸಿ,

*ಸಿ.ಎಂ. ನಾಗರಾಜ*
ಅಧ್ಯಕ್ಷರು

## ಮುನ್ನೋಟ

ಆತ್ಮೀಯ ಕನ್ನಡ ಸಹೃದಯರೇ,

ಆಷಾಢ ಮತ್ತು ಶ್ರಾವಣದ ಆರಂಭಿಕ ಮಾಸವಾದ ಜುಲೈನಲ್ಲಿ ಕರುನಾಡಿನಲ್ಲಿ ನಿಲ್ಲದ ಮಳೆಯಾದರೆ, ನಮ್ಮ ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ನಿಂತು ನಿಂತು ಸುರಿಯುತ್ತಿದೆ ಜನರನ್ನು, ವಾಹನಗಳನ್ನು ಬಾಧಿಸುತ್ತಿರುವ ಮಳೆ. ಅತಿಯಾದರೆ ಅಮೃತವೂ ವಿಷ ಎಂಬ ನಾಣ್ನುಡಿ ಇಲ್ಲಿ ಅನ್ವಯಿಸುವಂತೆ ವಿಪರೀತ ಮಳೆಯಿಂದಾಗಿ ಅನೇಕ ಅವಗಡಗಳನ್ನು ನಾವೂ ಕಂಡು ಕೇಳಿರುವುದನ್ನು ನೆನೆಯಬಹುದು.

ದೆಹಲಿ ಕರ್ನಾಟಕ ಸಂಘದಲ್ಲಿ ರಜೆಯ ದಿನಗಳ ನಂತರದ ಕಾರ್ಯಕ್ರಮಕ್ಕೆ ಪುನಃ ಚಾಲನೆ ನೀಡಿದ್ದು ಡಾ. ಎಂ. ಅಣ್ಣಯ್ಯ ಕುಲಾಲ್ ಉಳತ್ತೂರ್ ಅವರು ವೈದ್ಯಕೀಯ ಮತ್ತು ಸಮುದಾಯ ಸೇವೆಗಾಗಿ ಪ್ರತಿಷ್ಠಿತ ಡಾ. ಬಿ.ಸಿ. ರಾಯ್ ಪ್ರಶಸ್ತಿಗೆ ಗೌರವಿತರಾದ ಸಂಧರ್ಭದಲ್ಲಿ ಅವರನ್ನು ಅಭಿನಂದಿಸಿ ಗೌರವಿಸಿದ ಕಾರ್ಯಕ್ರಮ. ಅಂತರ ರಾಷ್ಟ್ರೀಯ ಬೂಕರ್ ಪ್ರಶಸ್ತಿಗೆ ಪಾತ್ರರಾದ ಬಾನು ಮುಷ್ತಾಕ್ ಅವರೊಂದಿಗೆ ಸಂವಾದ ಮತ್ತು ಅವರಿಗೆ ಅಭಿನಂದನೆ ನೀಡಿದ ಒಂದು ಅರ್ಥಪೂರ್ಣ ಸಂಜೆಯಾಗಿತ್ತು. ಸಿನಿಮಾ ಪ್ರಿಯರಿಗೆ ಸಿದ್ಲಿಂಗು–2 ಕನ್ನಡ ಚಲನಚಿತ್ರ ನವೀಕರಣಗೊಂಡ ಧ್ವನಿವರ್ಧಕ ಡಿಜಿಟಲ್ ಸೌಂಡ್ ಜೊತೆ ಮಜಾ ನೀಡಿತ್ತು.

ನಾನು ದೆಹಲಿ ಕರ್ನಾಟಕ ಸಂಘದ ವಿವಿಧ ಕಾಲಘಟ್ಟವನ್ನು ಸುಮಾರು ಮೂರು ದಶಕಗಳಿಂದ ಹಲವಾರು ಮಹನೀಯರ ಒಡನಾಟದೊಂದಿಗೆ ನೋಡುತ್ತ, ಕಲಿಯುತ್ತ ಮತ್ತು ದೆಹಲಿಯಲ್ಲಿ ಕನ್ನಡತನವನ್ನು ಅನುಭವಿಸಿ ಅದರ ಉಸಿರನ್ನು ಉಸಿರಾಡುತ್ತ ಬಂದಿದ್ದೇನೆ. ಸುಮಾರು ಎರಡು ದಶಕಗಳ ಕಥೆ ಹೇಳುವ ದೆಹಲಿ ಕರ್ನಾಟಕ ಸಂಘದ ಸಭಾಂಗಣದ ವೇದಿಕೆ ಲಕ್ಷಾಂತರ ಕಲಾವಿದರು, ಸಾಹಿತಿಗಳು ಮತ್ತು ಮಹನೀಯರುಗಳಿಗೆ ಅಡಿಪಾಯವಾಗಿ ಬೆಳೆಸಿರುವುದಕ್ಕೆ ಸಾಕ್ಷಿಯಾಗಿದ್ದೇನೆ. ಅಂತಹ ಒಂದು ಸಭಾಂಗಣ ಈ ಕಾಲಾವಧಿಯಲ್ಲಿ ನವೀಕರಣಗೊಳ್ಳುತ್ತಿದ್ದು ಈಗಾಗಲೇ ಆಧುನಿಕ ಪ್ರೊಜೆಕ್ಟರ್ ಮತ್ತು ಧ್ವನಿವರ್ಧಕ ವ್ಯವಸ್ಥೆ ಅಳವಡಿಸಿದ್ದು, ಇದೀಗ ಆರಾಮದಾಯಕ ಆಸನಗಳ ಅಳವಡಿಕೆಗೆ ಸಾಕಷ್ಟು ಮುತುವರ್ಜಿವಹಿಸಿದ ಕಾರ್ಯ ಭರದಿಂದ ಸಾಗುತ್ತಿದ್ದು ಸೆಪ್ಟೆಂಬರ್ ತಿಂಗಳಲ್ಲಿ ಸಭಾಂಗಣ ಹೊಸರೂಪದೊಂದಿಗೆ ನನ್ನ ಕನ್ನಡ ಬಂಧುಗಳ ಮಡಿಲಿಗೆ ನೀಡುವ ಮಹದಾಸೆ ನನ್ನದು.

ಸಂಘದಲ್ಲಿ ದಿನಗಳಲ್ಲಿ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಕವಿಗಳ ನೆನಪು, ಸಾಧನೆ ಮತ್ತು ಅವರ ಬರಹಗಳ ಕುರಿತ ವಿಚಾರ ಸಂಕಿರಣ ಮತ್ತು ಸ್ಥಳೀಯರಿಂದ ಕಾರ್ಯಕ್ರಮ ಪ್ರತಿ ವಾರಾಂತ್ಯ ಸಾಹಿತ್ಯೋತ್ಸವವನ್ನು ಹಮ್ಮಿಕೊಳ್ಳಲಾಗಿದ್ದು, ಮುಂದೆ ನಾಟಕೋತ್ಸವವನ್ನು ಕೂಡ ಆಯೋಜಿಸಲಾಗುತ್ತಿದೆ. ನನ್ನೆಲ್ಲಾ ಸ್ಥಳೀಯ ಕನ್ನಡಿಗರು ಈ ಕಾರ್ಯಕ್ರಮಗಳಲ್ಲಿ ಭಾಗವಹಿಸಬೇಕೆಂದು ನಾನು ಇಚ್ಛಿಸುತ್ತೇನೆ.

ಶ್ರಾವಣವೆಂದರೆ ಸಂಭ್ರಮ, ಹಬ್ಬ ಮತ್ತು ಆಚರಣೆ. ಮಹಿಳೆಯರಿಗೆ ಬಹು ಮುಖ್ಯವಾದ ವರಮಹಾಲಕ್ಷ್ಮಿ ಹಬ್ಬಕ್ಕೆ ನನ್ನೆಲ್ಲ ಅಕ್ಕ, ತಂಗಿಯರು ಮತ್ತು ಅಮ್ಮಂದಿರಿಗೆ ಆತ್ಮೀಯ ಶುಭಾಶಯಗಳು. ಸಮಸ್ತ ಸ್ವತಂತ್ರ ಭಾರತದ ನನ್ನೆಲ್ಲ ಬಂಧುಗಳಿಗೆ ಸ್ವಾತಂತ್ರ್ಯ ದಿನಾಚರಣೆಯ ಹಾರ್ದಿಕ ಶುಭಾಶಯಗಳು. ನನ್ನೆಲ್ಲಾ ಸಹೋದರಿಯರಿಗೆ ನಿಮ್ಮ ಆತ್ಮೀಯ ಸಹೋದರನ ರಕ್ಷಾ ಬಂಧನದ ಅಭಿನಂದನೆಗಳು. ಹಾಗೇಯೇ, ವಿಘ್ನ ವಿನಾಶಕ ಗಣಪನನ್ನು ಬರಮಾಡಿಕೊಳ್ಳುವ ಸಮಯ, ನಾವೆಲ್ಲರೂ ಸೇರಿ ಭಕ್ತಿಪೂರ್ವಕವಾಗಿ ಆಚರಿಸೋಣ.

*ಜೈ ಭುವನೇಶ್ವರಿ*

**ರಾಧಾಕೃಷ್ಣ**
ಪ್ರಧಾನ ಕಾರ್ಯದರ್ಶಿ

### ದೆಹಲಿ ಕರ್ನಾಟಕ ಸಂಘದ ಆಗಸ್ಟ್ ತಿಂಗಳ ಕಾರ್ಯಕ್ರಮಗಳು

**10 ಆಗಸ್ಟ್ 2025 ಭಾನುವಾರ ಸಂಜೆ : 4.00 ಗಂಟೆಗೆ**

ಸಾಹಿತ್ಯೋತ್ಸವ–ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಹೆಮ್ಮೆಯ ಕನ್ನಡಿಗರಾದ ರಾಷ್ಟ್ರಕವಿ ಕುವೆಂಪು ಮತ್ತು ಡಾ. ಯು.ಆರ್. ಅನಂತಮೂರ್ತಿ ಅವರ ಜೀವನ–ಸಾಹಿತ್ಯ ಸಾಧನೆಗಳ ಕುರಿತು ಸಂವಾದ–ಅನುಸಂಧಾನ–ವಿಚಾರ ಸಂಕಿರಣ ಹಾಗು ಸ್ಥಳೀಯ ಕಲಾವಿದರಿಂದ ಕಾರ್ಯಕ್ರಮಗಳು.

**15 ಆಗಸ್ಟ್ 2025 ಶುಕ್ರವಾರ ಬೆಳಿಗ್ಗೆ : 8.30 ಗಂಟೆಗೆ**

ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ಸಂಘದಲ್ಲಿ ರಾಷ್ಟ್ರ ಧ್ವಜಾರೋಹಣ

**17 ಆಗಸ್ಟ್ 2025 ಭಾನುವಾರ ಸಂಜೆ : 4.00 ಗಂಟೆಗೆ**

ಸಾಹಿತ್ಯೋತ್ಸವ–ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಮತ್ತು ಡಾ. ವಿನಾಯಕ ಕೃಷ್ಣ ಗೋಕಾಕ ಅವರ ಜೀವನ–ಸಾಹಿತ್ಯ ಸಾಧನೆಗಳ ಕುರಿತು ವಿಚಾರ ಸಂಕಿರಣ ಹಾಗು ಸ್ಥಳೀಯ ಕಲಾವಿದರಿಂದ ಕಾರ್ಯಕ್ರಮಗಳು.

**24 ಆಗಸ್ಟ್ 2025 ಭಾನುವಾರ ಸಂಜೆ : 4.00 ಗಂಟೆಗೆ**

ಸಾಹಿತ್ಯೋತ್ಸವ–ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಡಾ. ದ.ರಾ. ಬೇಂದ್ರೆ ಮತ್ತು ಡಾ. ಗಿರೀಶ್ ಕಾರ್ನಾಡ್ ಅವರ ಜೀವನ–ಸಾಹಿತ್ಯ ಸಾಧನೆಗಳ ಕುರಿತು ವಿಚಾರ ಸಂಕಿರಣ ಹಾಗು ಸ್ಥಳೀಯ ಕಲಾವಿದರಿಂದ ಕಾರ್ಯಕ್ರಮಗಳು.

**27 ರಿಂದ 31 ಆಗಸ್ಟ್ 2025**

ಸಂಘದಲ್ಲಿ ಗಣೇಶ ಪ್ರತಿಷ್ಠಾಪನೆ ಸಾಂಸ್ಕೃತಿಕ ಪೂಜಾ ಉತ್ಸವ

**31 ಆಗಸ್ಟ್ 2025 ಭಾನುವಾರ ಸಂಜೆ : 4.00 ಗಂಟೆಗೆ**

ಸಾಹಿತ್ಯೋತ್ಸವ–ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಡಾ. ಶಿವರಾಮ ಕಾರಂತ ಮತ್ತು ಡಾ. ಚಂದ್ರಶೇಖರ ಕಂಬಾರ ಅವರ ಜೀವನ–ಸಾಹಿತ್ಯ ಸಾಧನೆಗಳ ಕುರಿತು ವಿಚಾರ ಸಂಕಿರಣ ಹಾಗು ಸ್ಥಳೀಯ ಕಲಾವಿದರಿಂದ ಕಾರ್ಯಕ್ರಮಗಳು.

### ನಾಟಕೋತ್ಸವ

ಆತ್ಮೀಯರೇ,

ದೆಹಲಿ ಕರ್ನಾಟಕ ಸಂಘವು ಈ ವರ್ಷದ ನಾಟಕೋತ್ಸವವನ್ನು ಸೆಪ್ಟೆಂಬರ್ ತಿಂಗಳಲ್ಲಿ ಹಮ್ಮಿಕೊಂಡಿದೆ. ಈ ನಾಟಕೋತ್ಸವದಲ್ಲಿ ಭಾಗವಹಿಸುವ ತಂಡಗಳಿಗೆ ಗೌರವ ಧನ ನೀಡಲಾಗುವುದು. ಉತ್ತಮ ಪ್ರದರ್ಶನ ನೀಡಿದ ನಾಟಕಗಳಿಗೆ ಪ್ರಥಮ, ದ್ವಿತೀಯ, ತೃತೀಯ ಬಹುಮಾನ ನೀಡಲಾಗುವುದು. ದೆಹಲಿಯಲ್ಲಿರುವ ಎಲ್ಲಾ ಸಂಘ ಸಂಸ್ಥೆಗಳ ವತಿಯಿಂದ ತಾವು ನಾಟಕಗಳನ್ನು ಮಾಡಬಹುದು. ನಾಟಕದ ಅವಧಿ 50 ನಿಮಿಷ. ಅದಕ್ಕಿಂತ ಅಧಿಕವಾಗಿ 10 ನಿಮಿಷಗಳ ಸಮಯಾವಕಾಶವನ್ನು ನಿಮಗೆ ನೀಡಲಾಗುವುದು.(ನಿಯಮಗಳು ಅನ್ವಯ)

ಭಾಗವಹಿಸುವ ನಾಟಕ ಪ್ರೇಮಿಗಳು, ಸ್ಥಳೀಯ ಸಂಘ ಸಂಸ್ಥೆಗಳ ಕಲಾವಿದರು ದೆಹಲಿ ಕರ್ನಾಟಕ ಸಂಘದ ಸದಸ್ಯರು ಈ ಕೆಳಗಿನವರನ್ನು ಸಂಪರ್ಕಿಸಿ.

ನಾಟಕ ಸಂಚಾಲಕರು–ಶ್ರೀ ಎನ್.ಆರ್. ಶ್ರೀನಾಥ್–ಮೊ. 7836954402, ಶ್ರೀ ಶಶಿಕಾಂತ ಪಾಟೀಲ್–ಮೊ. 9650182413, ಶ್ರೀ ನವೀನ್ ಕುಮಾರ್ ವಿ.–ಮೊ. 9871945819, ಶ್ರೀ ರಾಧಾಕೃಷ್ಣ–ಪ್ರಧಾನ ಕಾರ್ಯದರ್ಶಿ–ಮೊ. 9818252183, ಶ್ರೀ ಸಿ.ಎಂ. ನಾಗರಾಜ–ಅಧ್ಯಕ್ಷರು–ಮೊ. 9811325440, ವ್ಯವಸ್ಥಾಪಕರು–ಶ್ರೀ ಶೇಖರ–ಮೊ. 9871475213, ಶ್ರೀ ದೇವಯ್ಯ ಎಂ.ಇ.–ಮೊ. 9654040627

ಆದಷ್ಟು ಬೇಗನೆ ತಮ್ಮ ನಾಟಕದ ಹೆಸರು ಮತ್ತು ವಿವರಗಳನ್ನು ನೋಂದಾಯಿಸಿಕೊಳ್ಳಿ. ಹೆಸರು ನೋಂದಾಯಿಸಲು ದಿನಾಂಕ 16.08.2025 ಅಂತಿಮ ದಿನವಾಗಿರುತ್ತದೆ.

**ಪ್ರಧಾನ ಕಾರ್ಯದರ್ಶಿ**

# ದೆಹಲಿ ಕರ್ನಾಟಕ ಸಂಘದಲ್ಲಿ ಅಚ್ಚುಕಟ್ಟಾಗಿ ಅರ್ಥಪೂರ್ಣವಾಗಿ ಆಯೋಜನೆಗೊಂಡ '11ನೇ ಅಂತರರಾಷ್ಟ್ರೀಯ ಯೋಗ ದಿನಾಚರಣೆ'




ಎಲ್ಲಾ ಗೊಂದಲಗಳಿಂದ ಮುಕ್ತವಾದ ಮನಸ್ಸೇ ಯೋಗ ಎಂದು ಪತಂಜಲಿ ಮಹರ್ಷಿಗಳು ಹೇಳಿರುವಂತೆ ಈಗಿನ ಕಾಲಘಟ್ಟಕ್ಕೆ ಯೋಗವು ಎಲ್ಲರಿಗೂ ತುಂಬಾ ಅವಶ್ಯಕವಾಗಿದೆ. ಏಕೆಂದರೆ ಈಗಿನ ಅವಿಶ್ರಾಂತ ಕೆಲಸ ಕಾರ್ಯದಿಂದ ಸದಾ ಮನಸ್ಸಿನಲ್ಲಿ ದುಗುಡ ತುಂಬಿಕೊಂಡಂತಹ ಎಲ್ಲರಿಗೂ ಯೋಗ ತುಂಬಾ ಉಪಯುಕ್ತ. ಯೋಗವು ದೇಹ, ಮನಸ್ಸು ಮತ್ತು ಆತ್ಮವನ್ನು ಒಗ್ಗೂಡಿಸುತ್ತದೆ. ಯೋಗಾಭ್ಯಾಸವು ದೇಹವನ್ನು ಬಲಪಡಿಸುತ್ತದೆ, ಮನಸ್ಸನ್ನು ಶಾಂತಗೊಳಿಸುತ್ತದೆ ಮತ್ತು ಆತ್ಮದೊಂದಿಗೆ ಸಂಪರ್ಕ ಸಾಧಿಸಲು ಸಹಾಯ ಮಾಡುತ್ತದೆ. ಈ ಯೋಗವನ್ನು ಇಡೀ ವಿಶ್ವಕ್ಕೆ ನಮ್ಮ ಭಾರತ ದೇಶವು ಪರಿಚಯಿಸಿದೆ. ವಿಶ್ವಕ್ಕೆ ನಾವು ನೀಡಿದ ಅತಿದೊಡ್ಡ ಕೊಡುಗೆ **"ಯೋಗ"** ಎಂದರೆ ಅತಿಶಯೋಕ್ತಿಯಾಗಲಾರದು. 2014 ರಲ್ಲಿ ವಿಶ್ವ ಸಂಸ್ಥೆಯಲ್ಲಿ ನೀಡಿದ ಭಾಷಣದಲ್ಲಿ ನಮ್ಮ ಸನ್ಮಾನ್ಯ ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿಯವರು ಯೋಗದ ಮಹತ್ವದ ಬಗ್ಗೆ ಪ್ರಸ್ತಾಪಿಸಿ 177 ರಾಷ್ಟ್ರಗಳ ಒಮ್ಮತದಿಂದ ಉತ್ತರ ಗೋಳಾರ್ಧದಲ್ಲಿ ವರ್ಷದ ಅತೀ ದೊಡ್ಡ ದಿನವಾದ "ಜೂನ್ 21ನ್ನು ಅಂತರರಾಷ್ಟ್ರೀಯ ಯೋಗ ದಿನವೆಂದು ಘೋಷಿಸಲಾಯಿತು. ಅಂದಿನಿಂದ ಇಂದಿನವರೆಗೆ ಜೂನ್ 21ನ್ನು ವಿಶ್ವದ ಎಲ್ಲಾ ದೇಶಗಳು ಅಂತರ ರಾಷ್ಟ್ರೀಯ ಯೋಗದಿನವನ್ನಾಗಿ ಆಚರಿಸುತ್ತಿದ್ದಾರೆ.

ಇದೇ ನಿಟ್ಟಿನಲ್ಲಿ ದಿನಾಂಕ **21.06.2025** ರಂದು ದೆಹಲಿ ಕರ್ನಾಟಕ ಸಂಘವು ನವದೆಹಲಿಯ ಮೊರಾರ್ಜಿ ದೇಸಾಯಿ ರಾಷ್ಟ್ರೀಯ ಯೋಗ ಸಂಸ್ಥೆಯ ಸಹಭಾಗಿತ್ವದಲ್ಲಿ ಕೇಂದ್ರ ಆಯುಷ್ ಮಂತ್ರಾಲಯದ ಸಂಯುಕ್ತಾಶ್ರಯದಲ್ಲಿ **"ಹರಿತ್ ಯೋಗ"** ಎಂಬ ಪರಿಕಲ್ಪನೆಯೊಂದಿಗೆ 11ನೇ ಅಂತರರಾಷ್ಟ್ರೀಯ ಯೋಗ ದಿನವನ್ನು ಪ್ರಪ್ರಥಮ ಬಾರಿ ಇಲ್ಲಿನ ಕನ್ನಡಿಗರೆಲ್ಲರನ್ನು ಒಗ್ಗೂಡಿಸಿ ದೊಡ್ಡ ಮಟ್ಟದಲ್ಲಿ ಸಂಘದ ಸಾಂಸ್ಕೃತಿಕ ಸಮುಚ್ಚಯದ ಆವರಣದಲ್ಲಿ ಆಯೋಜಿಸಿತ್ತು. ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ ಅವರ ಪ್ರಯತ್ನದಿಂದ ಹಾಗು ಸದಸ್ಯ ಶ್ರೀ ಯಲ್ಲಾಲಿಂಗ ಕೊಪ್ಪದ ಅವರ ನೆರವಿನಿಂದ ಆಯುಷ್ ಮಂತ್ರಾಲಯದ ವತಿಯಿಂದ 'ಹರಿತ್' ಯೋಗ, ಅಭಿಯಾನದ ಅಡಿಯಲ್ಲಿ 'ಒಂದು ಭೂಮಿ ಒಂದು ಆರೋಗ್ಯಕ್ಕಾಗಿ ಯೋಗ' ಎಂಬ ಧ್ಯೇಯ ವಾಕ್ಯದೊಂದಿಗೆ ಈ ವರ್ಷದ ವಿಶ್ವ ಯೋಗ ದಿನದ ಕಾರ್ಯಕ್ರಮವನ್ನು ಆಯೋಜಿಸಲು ಸಹಯೋಗ ಮತ್ತು ಸಹಕಾರ ದೊರಕಿತ್ತು.

ಆರಂಭದಲ್ಲಿ, ಆಗಮಿಸಿದ್ದ ಎಲ್ಲರನ್ನು ಸಂಘದ ಜಂಟಿ ಕಾರ್ಯದರ್ಶಿ ಶ್ರೀ ಬಿ. ನಾರಾಯಣ ಅವರು ಆತ್ಮೀಯವಾಗಿ ಸ್ವಾಗತಿಸಿ, ಸಂಘದಲ್ಲಿ ಯೋಗ ದಿನವನ್ನು ಆಚರಿಸುತ್ತಿರುವ ಕುರಿತು ಪ್ರಾಸ್ತಾವಿಕವಾಗಿ ಮಾತನಾಡಿದರು. ನಂತರ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರ ಅನುಪಸ್ಥಿತಿಯಲ್ಲಿ ಉಪಾಧ್ಯಕ್ಷರಾದ ಶ್ರೀಮತಿ ಪೂಜಾ ಪಿ. ರಾವ್ ಅವರು, ಕಾರ್ಯಕಾರಿ ಸಮಿತಿ ಪದಾಧಿಕಾರಿಗಳು ಮತ್ತು ಸದಸ್ಯರು ಹಾಗೂ ಭಾಗವಹಿಸಿದ್ದ ದೆಹಲಿ ಕನ್ನಡಿಗರಿಂದ ಗಿಡಗಳನ್ನು ನೆಟ್ಟು ಯೋಗ ದಿನಾಚರಣೆಯನ್ನು ಪ್ರಾರಂಭ ಮಾಡಲಾಯಿತು. ಶ್ರೀಮತಿ ಪೂಜಾ ಪಿ. ರಾವ್ ಅವರು ಮಾತನಾಡಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಯೋಗವನ್ನು ನಮ್ಮ ದೇಶವು ಪರಿಚಯಿಸಿದ ಮತ್ತು ಯೋಗವನ್ನು ವಿಶ್ವಕ್ಕೆ ಕೊಡುಗೆಯಾಗಿ ನೀಡಿರುವುದನ್ನು ಉಲ್ಲೇಖಿಸಿದರು. ದೇಶದ ಪ್ರಧಾನ ಮಂತ್ರಿಯವರ ಪ್ರಸ್ತಾವನೆಯನ್ನು ಒಪ್ಪಿ 2014 ರಿಂದ ಪ್ರತಿ ವರ್ಷ ಜೂನ್ 21 ನೇ ತಾರೀಖನ್ನು ಅಂತರ ರಾಷ್ಟ್ರೀಯ ಯೋಗ ದಿನವನ್ನಾಗಿ (International Day of Yoga) ಆಚರಿಸಲು ವಿಶ್ವ ಸಂಸ್ಥೆಯು ಅಂಗೀಕರಿಸಿದ ಬಗ್ಗೆ ಮತ್ತು ಬಹಳ ದೀರ್ಘವಾದ ದಿನವಾದ ಜೂನ್21 ರಂದೇ ಯೋಗ ದಿನವನ್ನು ಆಚರಿಸುತ್ತಿರುವ ಹಿನ್ನೆಲೆಯನ್ನು ಹಾಗು ಯೋಗದಿಂದ ದೇಹಕ್ಕೆ, ಮನಸ್ಸಿಗೆ ಆಗುವ ಪ್ರಯೋಜನಗಳ ಬಗ್ಗೆ ಮಾಹಿತಿ ನೀಡಿದರು.

ಈ ಕಾರ್ಯಕ್ರಮದಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ದೆಹಲಿ ಕನ್ನಡಿಗರು ಭಾಗವಹಿಸಿ ವಿವಿಧ ಯೋಗಾಸನಗಳನ್ನು, ಪ್ರಾಣಾಯಾಮ ಮತ್ತು ಸೂರ್ಯ ನಮಸ್ಕಾರಗಳನ್ನು ಮಾಡಿ ತಮ್ಮ ದೇಹವನ್ನು ದಂಡಿಸಿ ಯೋಗದ ಲಾಭ ಪಡೆದರು. ನುರಿತ ಯೋಗ ತರಬೇತುದಾರರಾದ ಶ್ರೀಮತಿ ಪುಷ್ಪ ಗೋಲಾ ಮತ್ತು ಶ್ರೀಮತಿ ನೀಲಿಮಾ ಶರ್ಮ ಭಾಗವಹಿಸಿದ್ದವರಿಗೆ ಯೋಗಾಭ್ಯಾಸ ಮಾಡುವುದಕ್ಕೆ ಮಾರ್ಗದರ್ಶನ ಮಾಡಿದರು. ಕು. ಪ್ರತಿಮಾ ಕಶ್ಯಪ್ ಯೋಗಾಸನಗಳ ಪ್ರದರ್ಶನದೊಂದಿಗೆ ಎಲ್ಲರಿಗೂ ಸರಿಯಾಗಿ ಯೋಗ ಮಾಡುವ ಬಗ್ಗೆ ಡೆಮೋ ನೀಡಿದರು. ಶ್ರೀಮತಿ ಅಶ್ವಿನಿ ಬಿ.ಎಸ್., ಶ್ರೀಮತಿ ಮಾಲಿನಿ ಪ್ರಹ್ಲಾದ ಮತ್ತು ಶ್ರೀಮತಿ ರಾಜಶ್ರೀ ಶಶಿಕುಮಾರ್ ಸಹಕರಿಸಿದರು.

ದೆಹಲಿ ಕರ್ನಾಟಕ ಸಂಘದ ಅಭಿಮತ ಪತ್ರಿಕೆಯ ಪ್ರಧಾನ ಸಂಪಾದಕರಾದ ಶ್ರೀ ಕೆ.ಎಸ್. ಮೂರ್ತಿ ಮತ್ತು ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀ



ಸಿ.ಎಸ್. ಅರುಣ್ ಅವರು ಯೋಗದ ಮಹತ್ವದ ಬಗ್ಗೆ ಮತ್ತು ಅದರಿಂದಾಗುವ ಪ್ರಯೋಜನಗಳ ಬಗ್ಗೆ ತಿಳಿಸಿದರು. ಅರುಣ್ ಅವರು ಈ ಯೋಗ ದಿನಾಚರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿದ ಎಲ್ಲರಿಗೂ ದೆಹಲಿ ಕರ್ನಾಟಕ ಸಂಘದ ಪದಾಧಿಕಾರಿಗಳು ಮತ್ತು ಸದಸ್ಯರ ಪರವಾಗಿ ಧನ್ಯವಾದಗಳನ್ನು ತಿಳಿಸುತ್ತಾ, ಕಾರ್ಯಕ್ರಮವನ್ನು ಆಯೋಜಿಸುವಲ್ಲಿ ಮುತುವರ್ಜಿ ವಹಿಸಿದ ಸಂಘದ ಅಧ್ಯಕ್ಷರಿಗೆ, ಕಾರ್ಯದರ್ಶಿಗಳಿಗೆ ಮತ್ತು ಆಯುಷ್ ಮಂತ್ರಾಲಯದಿಂದ ಸಹಯೋಗ ಪಡೆಯಲು ಸಹಕರಿಸಿದ ಶ್ರೀ ಯಲ್ಲಾಲಿಂಗ ಕೊಪ್ಪದ ಅವರಿಗೆ, ಸಂಘದ ಸದಸ್ಯರು, ಸಿಬ್ಬಂದಿಗೆ ಹಾಗು ಸಹಕಾರ ನೀಡಿದ ಮೊರಾರ್ಜಿ ದೇಸಾಯಿ ರಾಷ್ಟ್ರೀಯ ಯೋಗ ಸಂಸ್ಥೆ ಮತ್ತು ಆಯುಷ್ ಮಂತ್ರಾಲಕ್ಕೆ ಕೃತಜ್ಞತೆಗಳನ್ನು ವ್ಯಕ್ತಪಡಿಸಿದರು. ಯೋಗಾಸನಕ್ಕೆ ಮಾರ್ಗದರ್ಶನ ನೀಡಲು ಸತ್ವ ಸ್ಕೂಲ್ ಆಫ್ ಯೋಗ ಸಂಸ್ಥೆಯಿಂದ ಬಂದಂತ ಯೋಗ ಗುರುಗಳಿಗೆ ಸಂಘದ ಪರವಾಗಿ ಗೌರವ ಸಮರ್ಪಣೆ ಮಾಡಲಾಯಿತು. ಭಾಗಿಯಾಗಿದ್ದವರಿಗೆ ಮಿನಿಸ್ಟ್ರಿ ಆಫ್ ಆಯುಷ್ ಅವರ ಕಡೆಯಿಂದ ಯೋಗ ಮ್ಯಾಟ್ ಮತ್ತು ಟೀ–ಶರ್ಟನ್ನು ಸಿಜಿಎಚ್‌ಎಸ್ ನ ಹೆಚ್ಚುವರಿ ನಿರ್ದೇಶಕರೂ, ಆಯುರ್ವೇದ ತಜ್ಞರೂ ಮತ್ತು ಜನಕಪುರಿ ಕನ್ನಡ ಕೂಟದ ಅಧ್ಯಕ್ಷರಾದ, ದೆಹಲಿ ಕನ್ನಡಿಗ ಡಾ. ಅಶೋಕ ಎಂ. ಈಟಿ ಅವರ ಸಹಕಾರದಿಂದ ಉಚಿತವಾಗಿ ವಿತರಿಸಲಾಯಿತು. ಅವರಿಗೆ ಸಂಘದ ಪರವಾಗಿ ಕೃತಜ್ಞತೆ ಸಲ್ಲಿಸಲಾಯಿತು.





ಕಾರ್ಯಕ್ರಮದಲ್ಲಿ ಹಿರಿಯ ಕನ್ನಡಿಗರಾದ ಡಾ. ವೀರಭದ್ರಪ್ಪ, ಶ್ರೀಮತಿ ಮತ್ತು ಶ್ರೀ ಎಸ್. ದತ್ತ, ಶ್ರೀ ಶ್ರೀಕಾಂತ ಚೌಕೀಮಠ, ಶ್ರೀಮತಿ ಜಮುನಾ ಸಿ. ಮಠದ, ಶ್ರೀ ಮಹೇಶ ಕೋಳಿವಾಡ, ಶ್ರೀ ಬಸವರಾಜ್ ಬಂಗೇರ್ ಮತ್ತು ದೆಹಲಿ ಪೋಲಿಸ್‌ನ ಕನ್ನಡಿಗ ಅಧಿಕಾರಿಗಳು, ಸ್ಥಳೀಯ ಕನ್ನಡಪರ ಸಂಘ ಸಂಸ್ಥೆಗಳ ಪದಾಧಿಕಾರಿಗಳು ಸೇರಿದಂತೆ ಅನೇಕ ಕನ್ನಡಿಗರು ಭಾಗವಹಿಸಿದ್ದರು. ಕಾರ್ಯಕ್ರಮದ ಕೊನೆಯ ಭಾಗದಲ್ಲಿ ಆರ್ಟ್ ಆಫ್ ಲಿವಿಂಗ್ ಸಂಸ್ಥೆಯ ನವದೆಹಲಿ ಘಟಕದ ಸದಸ್ಯೆಯರಾದ ಶ್ರೀಮತಿ ರಾಜಶ್ರೀ ಮತ್ತು ಶ್ರೀಮತಿ ನಯನಾ ಮಾನಕಾಪುರೆ ಅವರು ದೆಹಲಿ ಕರ್ನಾಟಕ ಸಂಘದಲ್ಲಿ ಜುಲೈ 11 ರಿಂದ 13 ರವರೆಗೆ ಹಮ್ಮಿಕೊಂಡ ಯೋಗ ಮತ್ತು ಸುದರ್ಶನ ಕ್ರಿಯೆ ಕುರಿತ ಕಾರ್ಯಕ್ರಮದ ಬ್ಯಾನರ್ ಅನ್ನು ಸಂಘದ ಸದಸ್ಯರ ಸಮ್ಮುಖದಲ್ಲಿ ಅನಾವರಣಗೊಳಿಸಿದರು. ಶ್ರೀಮತಿ ರಾಜಶ್ರೀ ಅವರು ಯೋಗ ದಿನಾಚರಣೆ ಕಾರ್ಯಕ್ರಮದ ಬಗ್ಗೆ ಮೆಚ್ಚುಗೆ ಸೂಚಿಸಿ, ಯೋಗದ ಪ್ರಯೋಜನ ತಿಳಿಸುತ್ತಾ ಎಲ್ಲರಿಗೂ ಮುಂಬರುವ ಈ ಕಾರ್ಯಕ್ರಮದಲ್ಲಿಯೂ ಸಹಾ ಭಾಗವಹಿಸಲು ಆಹ್ವಾನ ನೀಡಿದರು. ಕಾರ್ಯಕ್ರಮದ ನಂತರ ಭಾಗಿಯಾಗಿದ್ದ ಎಲ್ಲರಿಗೂ ಸಂಘದ ವತಿಯಿಂದ ಚೌಚೌ ಬಾತ್ ಉಪಹಾರ ಮತ್ತು ಕಾಫಿ ಕೂಟವನ್ನು ಏರ್ಪಡಿಸಲಾಗಿತ್ತು. ಎಲ್ಲರೂ ಅದರ ರುಚಿಯನ್ನು ಸವಿದು, ವಿಶ್ವ ಯೋಗ ದಿನದಂದು ಸಂಘದ ಅವರಣದಲ್ಲಿ ಯೋಗಾಭ್ಯಾಸ ಮಾಡಿ ಸಂಘದ ಈ ಅಭಿಯಾನದ ಯಶಸ್ಸಿನಲ್ಲಿ ಭಾಗಿಯಾದ ಸಂತೃಪ್ತಿಯನ್ನು ಪಡೆದರು.ದೆಹಲಿ ಕರ್ನಾಟಕ ಸಂಘವು ಆಯೋಜಿಸುತ್ತಿರುವ ಸದಸ್ಯರಿಗೆ ಅನುಕೂಲವಾಗುವಂತಹ ಅನೇಕ ವಿಭಿನ್ನ ವಿಶಿಷ್ಟ ಕಾರ್ಯಕ್ರಮಗಳಲ್ಲಿ ಈ ವರ್ಷದ ಅಂತರರಾಷ್ಟ್ರೀಯ ಯೋಗ ದಿನಾಚರಣೆಯೂ ಸಹಾ ಸೇರ್ಪಟ್ಟು ಯಶಸ್ವಿಯಾಗಿ ಸಂಪನ್ನಗೊಂಡಿತು.❑





***ಅಭಿಮತ ವರದಿ***

ನೆರವು : ಶ್ರೀ ವೆಂಕಟೇಶ ಹೆಚ್. (ಚಿತ್ರದುರ್ಗ)
ಸಬ್ ಇನ್ಸ್‌ಪೆಕ್ಟರ್, ಸಿ.ಆರ್.ಪಿ.ಎಫ್., ನವದೆಹಲಿ

# ಜನಕಪುರಿ ಕನ್ನಡ ಕೂಟದಿಂದ ಅಂತರರಾಷ್ಟ್ರೀಯ ಯೋಗ ದಿನದ ಆಚರಣೆ



**ಓಂ ತ್ರಯೋಂಬಕಂ ಯಜಾಮಹೇ ಸುಗಂಧಿನೋ**
**ಪುಷ್ಟಿಗವರ್ಧೋನಮ್ ।**
**ಉಗರ್ವಾಗರುಗಕಮಿಯೋವಃ**
**ಬನ್ಧೋನಾತ್ಮಗತ್ಯೋರ್ಮುಕ್ಷೀಯ ಮಾಮಮೃತಾಃ**

ಯೋಗ ಪಿತಾಮಹ ಮಹರ್ಷಿ ವಾಲ್ಮೀಕಿ ಹಾಗೂ ಮಹಾಮೃತ್ಯುಂಜಯ ಮಂತ್ರವನ್ನು ಜಪಿಸುವುದರ ಮೂಲಕ ಜನಕಪುರಿ ಕನ್ನಡ ಕೂಟವು 11 ನೇಯ ಅಂತರರಾಷ್ಟ್ರೀಯ ಯೋಗ ದಿನಾಚರಣೆಯನ್ನು 2025 ಜೂನ್ 21 ರ ಶನಿವಾರ ಸಂಜೆ 5:00 ಘಂಟೆಗೆ ಜನಕಪುರಿಯ ಸಿ–2, ಪಾರ್ಕ್‌ನಲ್ಲಿ ಆಚರಿಸಲಾಯಿತು. ಜನಕಪುರಿ ಕನ್ನಡ ಕೂಟದ ಅಧ್ಯಕ್ಷರಾದಂತಹ ಡಾ. ಅಶೋಕ ಎಂ. ಈಟಿ ಹಾಗೂ ಆಯುರ್ವೇದ ತಜ್ಞೆ ಶ್ರೀಮತಿ ಡಾ. ರೂಪಶ್ರೀ ಅವರ ನೇತೃತ್ವದಲ್ಲಿ ಯೋಗ ತರಬೇತಿಗಾರರಾದ ಸತ್ವ ಸ್ಕೂಲ್ ಆಫ್ ಯೋಗ ವತಿಯಿಂದ ಪುಷ್ಪಗೋಲಾ, ನೀಲಿಮಾ ಶರ್ಮ, ಪ್ರತಿಮಾ ಕಶ್ಯಪ್ ಮತ್ತು ಸುನಿಲ್‌ರವರು ನೆರೆದಿದ್ದ ಕೂಟದ ಸದಸ್ಯರಿಗೆ ಯೋಗದ ಮಹತ್ವ, ಪ್ರಯೋಜನ ಹಾಗೂ ಅನೇಕ ವಿಧವಾದ ಯೋಗಾಸನಗಳನ್ನು ಹೇಳಿಕೊಟ್ಟರು.

ಕೂಟದ ಅಧ್ಯಕ್ಷರು ನೆರೆದಿದ್ದ ಕೂಟದ ಸದಸ್ಯರೆಲ್ಲರಿಗೂ ಯೋಗ ಮ್ಯಾಟ್ ಹಾಗೂ ಟೀ ಶರ್ಟ್‌ಗಳನ್ನು ವಿತರಿಸಿದರು. ಹೊಸದೊಂದು ಕಾರ್ಯಕ್ರಮ ಕೂಟದ ಆಚರಣೆ ಪಟ್ಟಿಯಲ್ಲಿ ಸೇರಿಕೊಂಡು ಇನ್ನು ಮುಂದೆ ಪ್ರತಿ ವರ್ಷ ಜೂನ್ 21ರಂದು ಜನಕಪುರಿ ಕನ್ನಡ ಕೂಟವೂ ಸಹ ಯೋಗ ದಿನಾಚರಣೆಯನ್ನು ಆಚರಿಸಲಾಗುವುದು ಎಂದು ಅವರು ತಿಳಿಸಿದರು.

ಉಪಸ್ಥಿತರಿದ್ದ ಎಲ್ಲಾ ಸದಸ್ಯರುಗಳು ಬಹಳ ಉತ್ಸುಕತೆ ಮತ್ತು ಉಲ್ಲಾಸದಿಂದ ಯೋಗವನ್ನು ಮಾಡಿ ಸಂತಸ ಹಾಗೂ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು.

ನಂತರ ಅಧ್ಯಕ್ಷರಾದ ಡಾ. ಅಶೋಕ ಈಟಿ ಹಾಗೂ ಜಂಟಿ ಕಾರ್ಯದರ್ಶಿ ಶ್ರೀಯುತ ಕೃಷ್ಣರಾಜರವರು ಯೋಗಕ್ಕೆ ಸಂಬಂಧಿಸಿದ ರಸಪ್ರಶ್ನೆಯನ್ನು ಆಯೋಜಿಸಿದ್ದರು. ಆ ರಸಪ್ರಶ್ನೆಯಲ್ಲಿ ಬಹಳಷ್ಟು ಮಂದಿ ಸರಿ ಉತ್ತರಗಳನ್ನು ಹೇಳಿದರು. ಅದರಲ್ಲಿಯೂ ಶ್ರೀಮತಿ ನಯನಾ ಮಾನಕಾಪುರೆ, ಶ್ರೀಮತಿ ಪವಿತ್ರ ತಮಣ್‌ಕರ್, ಶ್ರೀಮತಿ ಪ್ರೇರಣಾ ವೆಂಕಟೇಶ್ ಮತ್ತು ಶ್ರೀ ಮುಕುಂದ ಮೂರ್ತಿರವರು ಅತೀ ಹೆಚ್ಚು ಸರಿಯಾದ ಉತ್ತರಗಳನ್ನು ನೀಡಿ ವಿಜೇತರಾದರು. ವಿಜೇತರಿಗೆ ಮುಂಬರುವ ಜನಕಪುರಿ ಕನ್ನಡ ಕೂಟದ ಕಾರ್ಯಕ್ರಮದಲ್ಲಿ ಸೂಕ್ತ ಬಹುಮಾನ ನೀಡಲಾಗುವುದು ಎಂದು ಕೂಟದ ಕಾರ್ಯದರ್ಶಿಗಳಾದ ಡಾ. ಬಸವರಾಜ್ ಘೋಷಿಸಿದರು.

ನಂತರ ಎಲ್ಲರಿಗೂ ಚಹಾ ಬಿಸ್ಕತ್‌ಗಳನ್ನು ವಿತರಿಸಲಾಯಿತು. ಜನಕಪುರಿ ಕನ್ನಡ ಕೂಟದ ಸುವರ್ಣ ಮಹೋತ್ಸವ ವರ್ಷದ ಸಾಲಿನಲ್ಲಿ ಹೊಸ ಹೊಸ ಕಾರ್ಯಕ್ರಮ ಸೇರ್ಪಡೆಯಾಗಿದ್ದು ಬಹಳ ಸಂತೋಷ ಉಂಟಾಗಿದೆ ಎಂಬುದು ಸದಸ್ಯರುಗಳ ಮಾತಿನಲ್ಲಿ ಕಂಡು ಬಂದಿತು.

ಜನಕಪುರಿ ಮಹಿಳಾ ಮಂಡಳಿಯ ಸದಸ್ಯರುಗಳು ಯೋಗಾಭ್ಯಾಸದಲ್ಲಿ ಪಾಲ್ಗೊಂಡು ಕಾರ್ಯಕ್ರಮಕ್ಕೆ ಮೆರಗು ಮತ್ತು ಶೋಭೆಯನ್ನು ನೀಡಿದರು.

**ಓಂ ಸರ್ವೇ ಭವಂತು ಸುಖಿನಃ**
**ಸರ್ವೇ ಸಂತು ನಿರಾಮಯ**
**ಸರ್ವೇ ಭದ್ರಾಣಿ ಪಶ್ಯಂತು ಮಾ**
**ಕಶ್ಚಿದುಃಖ ಭಾಗ್ಬವೇತ್!**
**ಓಂ ಶಾಂತಿಃ ಶಾಂತಿಃ ಶಾಂತಿಃ**

ಎಲ್ಲರೂ ಸುಖವಾಗಿರಲಿ, ಎಲ್ಲರೂ ರೋಗದಿಂದ ಮುಕ್ತರಾಗಿರಲಿ, ಎಲ್ಲರೂ ಒಳ್ಳೆಯದನ್ನು ಕಾಣಲಿ, ಯಾರು ಬಳಲದಿರಲಿ

**ಓಂ ಶಾಂತಿಃ ಶಾಂತಿಃ ಶಾಂತಿಃ**

ಎಂಬ ವ್ಯಾಖ್ಯಾನ ಅನ್ವರ್ಥಿಸುತ್ತಾ ಕಾರ್ಯಕ್ರಮ ಮುಗಿಸಿದರು. ❑

***ಡಾ. ಬಸವರಾಜ***
ಕಾರ್ಯದರ್ಶಿ, ಜನಕಪುರಿ ಕನ್ನಡ ಕೂಟ

# ಸ್ನೇಹಾ ದೆಹಲಿ ಕನ್ನಡ ಅಸೋಸಿಯೇಷನ್ ವತಿಯಿಂದ ವಿಶ್ವ ಯೋಗ ದಿನದ ಸಂಭ್ರಮಾಚರಣೆ





ದೆಹಲಿಯಲ್ಲಿ ಜೂನ್ ತಿಂಗಳು ಬಂದರೆ ಸಾಕು ಸಾಮಾನ್ಯವಾಗಿ ಮಕ್ಕಳಿಗೆ ಬೇಸಿಗೆ ರಜೆಯು ಶುರುವಾಗಿ ಶಾಲೆಯ ರಜೆಯ ಕಾರಣ ಎಲ್ಲರೂ ತಾಯ್ನಾಡಿಗೆ ತೆರಳುತ್ತಾರೆ. ಅಂತಹ ಉರಿ ಬಿಸಿಲಿನಲ್ಲೂ ನಮ್ಮ ಸ್ನೇಹಾದ ಸದಸ್ಯೆಯರು ದಿನಾಂಕ 18.06.2025ರಂದು ಅಧ್ಯಕ್ಷರಾದ ಶ್ರೀಮತಿ ಆಶಾ ಕಾರಿಯಪ್ಪ ಹಾಗೂ ಉಪಾಧ್ಯಕ್ಷರಾದ ಶ್ರೀಮತಿ ರಾಧಾ ಕೌಜಲಗಿ ಅವರ ಅನುಪಸ್ಥಿತಿಯಲ್ಲಿ ಖಜಾಂಚಿಗಳಾದ ಶ್ರೀಮತಿ ರಾಜೇಶ್ವರಿ ಕಲ್ಲೂರು ಮತ್ತು ಕಾರ್ಯದರ್ಶಿಯಾದ ಶ್ರೀಮತಿ ಶೋಭಾ ಹನುಮೇ ಗೌಡ ಅವರು ಕರ್ನಾಟಕ ಸಂಘದ ಸೆಮಿನಾರ್ ಹಾಲ್‌ನಲ್ಲಿ 11ನೇ ಅಂತರರಾಷ್ಟ್ರೀಯ ಯೋಗ ದಿನಾಚರಣೆಯನ್ನು ತುಂಬಾ ಅರ್ಥಪೂರ್ಣವಾಗಿ ಏರ್ಪಡಿಸಿದ್ದರು.

ನಮ್ಮವರೇ ಆದ ಮಾಜಿ ಅಧ್ಯಕ್ಷೆ ಶ್ರೀಮತಿ ರಂಗಮಣಿರಾವ್ ಅವರು ಯೋಗದ ಮಹತ್ವ ಹಾಗೂ ಮಹಿಳೆಯರಿಗೆ ಯಾವ ಯಾವ ಯೋಗಾಸನಗಳು ಉತ್ತಮ, ಯೋಗದಲ್ಲಿ ಎಷ್ಟು ವಿಧಗಳಿವೆ ಎಂಬುದನ್ನು, ವಿವರವಾಗಿ, ತುಂಬಾ ಚೆನ್ನಾಗಿ ತಿಳಿಸಿದರು ಹಾಗು ಎಲ್ಲರಿಗೂ ಯೋಗ ಅಭ್ಯಾಸವನ್ನು ಮಾಡಿಸಿದರು.

ಅವರು ಯೋಗವು ಭಾರತ ದೇಶದ ಪಾರಂಪರಿಕ ಚಿಕಿತ್ಸೆಯ ಪದ್ಧತಿಯಾಗಿದ್ದು, ನಮ್ಮ ದೇಶವು

ಜಗತ್ತಿಗೆ ಕೊಟ್ಟಂತಹ ಮಹಾನ್ ಕೊಡುಗೆಯಾಗಿದೆ. ಶ್ರೀ ನರೇಂದ್ರ ಮೋದಿಯವರು ಪ್ರಧಾನಿಯಾಗಿ 2014ರಲ್ಲಿ ವಿಶ್ವಸಂಸ್ಥೆಯಲ್ಲಿ ಇಟ್ಟ ಮನವಿಯ ನಂತರ ವಿಶ್ವಸಂಸ್ಥೆಯು ಯೋಗದ ಮಹತ್ವವನ್ನು ಅರಿತು ಎಲ್ಲ ದೇಶಗಳ ಒಮ್ಮತದಿಂದ ಜೂನ್ 21ನೇ ತಾರೀಖನ್ನು ಅಂತರರಾಷ್ಟ್ರೀಯ ಯೋಗ ದಿನವೆಂದು ಘೋಷಿಸಿತ್ತು. ಅಂದಿನಿಂದ ಪ್ರತಿ ವರ್ಷವೂ ಒಂದೊಂದು ಥೀಮ್‌ನೊಂದಿಗೆ ಈ ದಿನವನ್ನು ಆಚರಿಸುತ್ತಾ ಬಂದಿದೆ. ಈ ವರ್ಷವೂ ಒಂದು ಭೂಮಿ, ಒಂದು ಆರೋಗ್ಯಕ್ಕಾಗಿ ಯೋಗ ಎಂಬ ಥೀಮ್‌ನೊಂದಿಗೆ ಹರಿತ್ ಯೋಗ ಪರಿಕಲ್ಪನೆ ಮೂಲಕ ಆಚರಿಸಲಾಯಿತು. ಸುಡು ಬಿಸಿಲಿನಲ್ಲೂ ಸ್ನೇಹಾದ ಸ್ನೇಹಿತೆಯರು ಬಹಳ ಉತ್ಸಾಹದಿಂದ ಶ್ರೀಮತಿ ರಂಗಮಣಿ ರಾವ್ ಅವರು ಹೇಳಿ ಕೊಟ್ಟಂತಹ ಯೋಗಾಸನಗಳನ್ನು ಅಭ್ಯಾಸ ಮಾಡಿದರು. ಆನ್‌ಲೈನ್ ಮೂಲಕ ಶ್ರೀಮತಿ ಆಶಾ ಕಾರಿಯಪ್ಪ ಹಾಗೂ ಲಂಡನ್‌ನಿಂದ ಶ್ರೀಮತಿ ರಾಧಾ ಕೌಜಲಗಿ ಅವರು ಪಾಲ್ಗೊಂಡರು. ಇದೇ ಸಂದರ್ಭದಲ್ಲಿ ಖಜಾಂಚಿಯವರು ಕೆಲವು ಯೋಗಾಸನದ ಸ್ಪರ್ಧೆಯನ್ನು ಏರ್ಪಡಿಸಿದ್ದರು, ಶ್ರೀಮತಿ ಮೀನಾಕ್ಷಿ ಮಹಾಲಿಂಗಪ್ಪ, ಶ್ರೀಮತಿ ಶೋಭಾ ಹನುಮೇ ಗೌಡ ಹಾಗೂ ಶ್ರೀಮತಿ ವಿಮಲಾ ರಂಗನಾಥ್ ಅವರು ವಿಜೇತರಾದರು. ಶ್ರೀಮತಿ ರಂಗಮಣಿ ರಾವ್ ಅವರನ್ನು ಅಸೋಸಿಯೇಷನ್ ಪರವಾಗಿ ಗೌರವಿಸಿ ಸನ್ಮಾನಿಸಲಾಯಿತು.

ಶ್ರೀಮತಿ ಅಶ್ವಿನಿ ಬಿ.ಎಸ್. ಅವರು ತಮ್ಮ ಮಗನ ಹುದ್ದೆಯ ಪ್ರಮೋಷನ್ ಆಗಿರುವ ಸಲುವಾಗಿ ಎಲ್ಲರಿಗೂ ತುಂಬಾ ರುಚಿಕರವಾದ ಊಟವನ್ನು ಏರ್ಪಡಿಸಿದ್ದರು.



ನಾವೆಲ್ಲರೂ ಪರಸ್ಪರ ಶುಭಾಶಯವನ್ನು ಕೋರಿ ಊಟವನ್ನು ಸವಿದೆವು ಮತ್ತು ತಂಬೋಲಾ ಆಟವನ್ನು ಆಡಿ ಸಂಭ್ರಮಿಸಿದೆವು. ❑

***ವಿಮಲಾರಂಗನಾಥ್***

# ದೆಹಲಿಯಲ್ಲಿ ಕನ್ನಡ–ಒಂದು ಅನುಭವ

ನಾನು 1970 ರಲ್ಲಿ ಐಐಟಿ ದೆಹಲಿಯಲ್ಲಿ ಅಧ್ಯಾಪಕನಾಗಿ ಸೇರಿದಾಗ ನಗರದಲ್ಲಿ ಕನ್ನಡ ಚಟುವಟಿಕೆ ಬಹಳ ಕಡಿಮೆ ಇತ್ತು. ಕರೋಲ್‌ಬಾಗ್‌ನಲ್ಲಿರುವ **ಕನ್ನಡ ಭಾರತೀ** ಆಗ ಕನ್ನಡ ನಾಟಕಗಳನ್ನು ನಿಯಮಿತವಾಗಿ ಪ್ರದರ್ಶಿಸುತ್ತಿದ್ದ ಒಂದು ಸಂಸ್ಥೆಯಾಗಿತ್ತು. ಈ ತಂಡವು ನಾಟಕವನ್ನು ಹವ್ಯಾಸವಾಗಿಟ್ಟುಕೊಂಡು ಶ್ರೀ ನಾರಾಯಣ ರಾವ್ ನೇತೃತ್ವದ ಕಾರ್ಯನಿರತ ವೃತ್ತಿಪರರನ್ನು ಒಳಗೊಂಡಿತ್ತು. ನಂತರ ಅನೇಕ ಚಲನಚಿತ್ರಗಳಲ್ಲಿ ನಟಿಸಿದ ದತ್ತಾತ್ರೇಯ (ದತ್ತಣ್ಣ ಎಂದು ಜನಪ್ರಿಯರು) ಸಹ ಸದಸ್ಯರಾಗಿದ್ದರು. ನಾರಾಯಣ ರಾವ್ ಕೂಡ ನಂತರ ಕೆಲವು ಚಲನಚಿತ್ರಗಳಲ್ಲಿ ನಟಿಸಿದ್ದರು. ಐಐಟಿಗೆ ಹತ್ತಿರದಲ್ಲಿ ವಾಸಿಸುತ್ತಿದ್ದ ನಮ್ಮ ಕುಟುಂಬ ಸ್ನೇಹಿತರಾದ WHO ಅಧಿಕಾರಿ ಶ್ರೀ ಎಂ.ಆರ್. ವೆಂಕಟಸುಬ್ಬಯ್ಯ ಸಹಾ ಸಕ್ರಿಯ ಸದಸ್ಯರಾಗಿದ್ದರು. ನಾನು ಅವರ ಅನೇಕ ನಾಟಕಗಳಿಗೆ ಹಾಜರಾಗಿ ವೀಕ್ಷಿಸಿದ್ದೇನೆ. ಅವರು ಗಿರೀಶ್ ಕಾರ್ನಾಡ್, ಬಿ.ವಿ. ಕಾರಂತ್ ಮತ್ತು ಚಂದ್ರಶೇಖರ ಕಂಬಾರರು ನಿರ್ದೇಶಿಸಿದ ನಾಟಕಗಳನ್ನು ಸಹ ಏರ್ಪಡಿಸಿದ್ದರು.

ದೆಹಲಿಯಲ್ಲಿ ಕನ್ನಡದ ಮತ್ತೊಂದು ಪ್ರಮುಖ ಕೇಂದ್ರವೆಂದರೆ ಲೋಧಿ ರಸ್ತೆಯಲ್ಲಿರುವ ದೆಹಲಿ ಕನ್ನಡ ಶಾಲೆ (ಡಿಕೆಎಸ್), ಲೋಕಸಭೆಯ ಮಾಜಿ ಉಪ ಸ್ಪೀಕರ್ ದಿ. ಎಸ್.ವಿ. ಕೃಷ್ಣಮೂರ್ತಿ ರಾವ್ ಅವರ ಸತತ ಪ್ರಯತ್ನಗಳಿಂದ ಅದನ್ನು ಸ್ಥಾಪಿಸಲಾಯಿತು. ಪ್ರವೇಶವು ಎಲ್ಲರಿಗೂ ಮುಕ್ತವಾಗಿದ್ದರೂ ದೆಹಲಿಯ ಕನ್ನಡ ಮಕ್ಕಳ ಶಾಲಾ ಶಿಕ್ಷಣದಲ್ಲಿ ಇದು ಪ್ರಮುಖ ಪಾತ್ರ ವಹಿಸಿತು. ಹೆಚ್ಚಿನ ಶಿಕ್ಷಕರು ಕರ್ನಾಟಕದವರು. ಸ್ಥಳೀಯ ಕನ್ನಡ ಪ್ರಜೆಗಳಿಂದ ಕೂಡಿದ ಆಡಳಿತ ಸಮಿತಿ. ಡಿಪಿಎಸ್ ನಂತಹ ಜನಪ್ರಿಯ ಶಾಲೆಗಳ ಹೊರ ಹೊಮ್ಮುವಿಕೆಯೊಂದಿಗೆ, ಸ್ಥಳೀಯ ಕನ್ನಡಿಗರಿಗೆ ಡಿಕೆಎಸ್ ನ ಮಹತ್ವ ಈಗ ಕಡಿಮೆಯಾಗಿದೆ. ಡಿಕೆಎಸ್ ವಿದ್ಯಾರ್ಥಿಗಳಿಗೆ ಪ್ರಸ್ತುತವಾಗುವ ಅನೇಕ ಕಾರ್ಯಕ್ರಮಗಳನ್ನು ಆಯೋಜಿಸುತ್ತಿದ್ದು, ಇದರ ವಾರ್ಷಿಕ ದಿನವು ದೆಹಲಿ ಕನ್ನಡಿಗರನ್ನು ಆಕರ್ಷಿಸಿತ್ತು. ದೆಹಲಿಗೆ ಭೇಟಿ ನೀಡುವ ಕರ್ನಾಟಕದ ಕನ್ನಡ ಕಲಾವಿದರನ್ನು ಹೆಚ್ಚಾಗಿ ಸನ್ಮಾನಿಸಲಾಗುತ್ತಿತ್ತು. ಅಂತಹ ಕಾರ್ಯಕ್ರಮಗಳು ವಿರಳವಾಗಿರುತ್ತಿದ್ದವು.

1972ರ ಸುಮಾರಿಗೆ ಶ್ರೀ ಸುರೇಶ್ ಮತ್ತು ಶ್ರೀ ಚಿತ್ತರಂಜನ್ ನೇತೃತ್ವದಲ್ಲಿ ಕೆಲವು ಕನ್ನಡ ಐಐಟಿ ಸಂಶೋಧನಾ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳು, ಪ್ರೊ. ಇಂದಿರೇಶನ್ (ನಂತರ ಐಐಟಿ ಮದ್ರಾಸ್ ನಿರ್ದೇಶಕರಾದರು), ಡಾ. ಎ. ಪ್ರಭಾಕರ್ (ನಂತರ ಐಟಿಐ ಬೆಂಗಳೂರಿನ ತಾಂತ್ರಿಕ ಮುಖ್ಯಸ್ಥರಾದರು), ಡಾ. ಯೋಗನರಸಿಂಹ ಮತ್ತು ನಾನು ಸೇರಿದಂತೆ ಕನ್ನಡ ಮಾತನಾಡುವ ಅಧ್ಯಾಪಕರನ್ನು ಸಂಪರ್ಕಿಸಿ ಐಐಟಿ ದೆಹಲಿಯಲ್ಲಿ ಕನ್ನಡ ಸಂಘವನ್ನು ಪ್ರಾರಂಭಿಸುವ ಬಗ್ಗೆ ಚರ್ಚಿಸಿದರು. ನಾವು ಈ ಕಲ್ಪನೆಯನ್ನು ಸಂಪೂರ್ಣವಾಗಿ ಬೆಂಬಲಿಸಿದೆವು ಮತ್ತು ಸಂಬಂಧಪಟ್ಟ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳ ಸಭೆಯನ್ನು ಯೋಗನರಸಿಂಹ ಅವರ ಮನೆಯಲ್ಲಿ ನಡೆಸಲಾಯಿತು ಮತ್ತು ಕನ್ನಡ ಸಂಘವನ್ನು ಪ್ರಾರಂಭಿಸಲು ನಿರ್ಧರಿಸಲಾಯಿತು. ಇದನ್ನು ಕಾರ್ಯಸಾಧ್ಯವಾಗಿಸಲು ನಾವು ಜೆಎನ್‌ಯು, ಏಮ್ಸ್, ಎನ್‌ಸಿಇಆರ್‌ಟಿ ಮತ್ತು ದಕ್ಷಿಣ ದೆಹಲಿಯ ನಮ್ಮ ನೆರೆಹೊರೆಗಳಲ್ಲಿ ವಾಸಿಸುವ ಕನ್ನಡಿಗರಿರುವಂತಹ ನೆರೆಯ ಸಂಸ್ಥೆಗಳನ್ನು ಸೇರಿಸಲು ನಿರ್ಧರಿಸಿದೆವು. ನಾವೆಲ್ಲರೂ ಅರಾವಳಿ ಪರ್ವತ ಶ್ರೇಣಿಗಳಲ್ಲಿ ನೆಲೆಸಿದ್ದರಿಂದ ಇಂದಿರೇಶನ್ 'ಅರಾವಳಿ ಕನ್ನಡ ಸಂಘ' (ಎಕೆಎಸ್) ಎಂಬ ಹೆಸರನ್ನು ಸೂಚಿಸಿದರು. ಕರ್ನಾಟಕದಿಂದ ದೂರದಲ್ಲಿರುವ ಕಾರಣ ಐಐಟಿ ಕನ್ನಡ ವಿದ್ಯಾರ್ಥಿಗಳು ಕನ್ನಡ ವಾತಾವರಣವನ್ನು ಕಳೆದುಕೊಳ್ಳುತ್ತಿರುವುದರಿಂದ ಅವರ 'ಗೃಹ ಅನಾರೋಗ್ಯ'ವನ್ನು ಕಡಿಮೆ ಮಾಡುವುದು ಮುಖ್ಯ ಉದ್ದೇಶವಾಗಿತ್ತು. ನಾವು ಸಾಮಾಜಿಕ ಸಭೆ, ಪಿಕ್‌ನಿಕ್, ಗಣೇಶ ಚತುರ್ಥಿ ಮತ್ತು ರಾಮನವಮಿಯಂತಹ ಹಬ್ಬಗಳ ಚಟುವಟಿಕೆಗಳನ್ನು ಪ್ರಾರಂಭಿಸಿದೆವು.



ಅರಾವಳಿ ಕನ್ನಡ ಸಂಘದ ಪಿಕ್‌ನಿಕ್ ಸಂದರ್ಭದಲ್ಲಿ ಸದಸ್ಯರ ಸಮೂಹ ಚಿತ್ರ

ಕರ್ನಾಟಕ ಶೈಲಿಯ ಆಹಾರವನ್ನು (ಅವರ ಹಾಸ್ಟೆಲ್‌ಗಳಲ್ಲಿ ಸಿಗದಿರದ್ದಂತಹ) ಹೆಚ್ಚಾಗಿ ಅಧ್ಯಾಪಕರ ಕುಟುಂಬಗಳು ಮನೆಯಲ್ಲೇ ತಯಾರಿಸಿದ್ದರಿಂದ ಶೀಘ್ರದಲ್ಲೇ ಅದರ ರುಚಿ ವಿದ್ಯಾರ್ಥಿಗಳಲ್ಲಿ ಬಹಳ ಜನಪ್ರಿಯವಾಯಿತು. ಕೆಲವೊಮ್ಮೆ ಬೇಸಿಗೆಯಲ್ಲಿ ನಾವು ನೆರೆಯ ಉದ್ಯಾನವನಗಳಲ್ಲಿ ಬೆಳದಿಂಗಳ ಭೋಜನವನ್ನು ಸಹ ಮಾಡಿದ್ದೇವೆ. ದೆಹಲಿಯಲ್ಲಿ ಬೇಸಿಗೆ ಮತ್ತು ಚಳಿಗಾಲದ ಉತ್ತುಂಗದಿಂದಾಗಿ ಎಲ್ಲಾ ಚಟುವಟಿಕೆಗಳನ್ನು ಹವಾಮಾನದಿಂದ ನಿರ್ಧರಿಸಲಾಗುತ್ತದೆ. ಚಳಿಗಾಲದಲ್ಲಿ ದಿನವಿಡೀ ವಾರ್ಷಿಕ ಪಿಕ್‌ನಿಕ್‌ಗಳನ್ನು ದೆಹಲಿ ಮತ್ತು ಸುತ್ತಮುತ್ತಲಿನ ಜನಪ್ರಿಯ ಪಿಕ್‌ನಿಕ್ ತಾಣಗಳಾದ ಲೋಧಿ ಗಾರ್ಡನ್, ನೆಹರು ಪಾರ್ಕ್, ಬುದ್ಧ ಜಯಂತಿ ಪಾರ್ಕ್, ಬಡ್ಕಲ್ ಸರೋವರ, ಸೂರಜ್‌ಕುಂಡ್, ಭರತ್‌ಪುರ ಪಕ್ಷಿಧಾಮ ಇತ್ಯಾದಿಗಳಲ್ಲಿ ನಡೆಸಲಾಗುತ್ತಿತ್ತು. ಐಐಟಿಯ ಬಸ್ ಸಾರಿಗೆ ನಮಗೆ ಸುಲಭವಾಗಿ ಲಭ್ಯವಿತ್ತು. ಆಟಗಳು ಮತ್ತು ರುಚಿಕರವಾದ ಕರ್ನಾಟಕ ಆಹಾರದೊಂದಿಗೆ ಅಧ್ಯಾಪಕರು, ವಿದ್ಯಾರ್ಥಿಗಳು ಮತ್ತು ಹೊರಗಿನ ಸದಸ್ಯರಿಗೆ ಪಿಕ್‌ನಿಕ್ ಒಂದು ಉತ್ತಮ ಮನರಂಜನೆಯ ಕಾರ್ಯಕ್ರಮವಾಗಿತ್ತು. ಇಂದಿರೇಶನ್ ವಿಶಿಷ್ಟವಾದ ಅನೇಕ ಪಾರ್ಟಿ ಆಟಗಳನ್ನು ಆಯೋಜಿಸುವಲ್ಲಿ ಪರಿಣಿತರಾಗಿದ್ದರು. ಗಣೇಶ ಚತುರ್ಥಿ ಕೂಡ ಬಹಳ ಜನಪ್ರಿಯ ಮತ್ತು ಯಶಸ್ವಿ ಚಟುವಟಿಕೆಯಾಗಿತ್ತು. ಇದನ್ನು ಹೆಚ್ಚಾಗಿ ಇಂದಿರೇಶನ್, ಶೇಷಾದ್ರಿ ಮತ್ತು ನಾನು ಐಐಟಿ ಕ್ಯಾಂಪಸ್‌ನಲ್ಲಿರುವ ಅಧ್ಯಾಪಕರ ಮನೆಯಲ್ಲಿ

ನಡೆಸಲಾಗುತ್ತಿತ್ತು. ಇಂದಿರೇಶನ್ ನಿವೃತ್ತರಾದ ನಂತರ ಸಮಾರಂಭವು ಶೇಷಾದ್ರಿಯವರ ಮನೆ ಮತ್ತು ನನ್ನ ಮನೆಯ ನಡುವೆ ಪರ್ಯಾಯವಾಗಿ ನಡೆಯಿತು.

ಶೇಷಾದ್ರಿ ಕೂಡ ನಿವೃತ್ತಿಯ ನಂತರ ಕರ್ನಾಟಕಕ್ಕೆ ಹೊರಟು ಹೋದಾಗ 2012 ರಲ್ಲಿ ತಾಯ್ನಾಡಿಗೆ ಹೊರಡುವವರೆಗೂ ನಾನು ಆ ಕನ್ನಡ ಕೋಟೆಯನ್ನು ಭದ್ರವಾಗಿ ಕಾಯ್ದುಕೊಂಡೆ. ನಂತರ ಇತರ ಕನ್ನಡ ಅಧ್ಯಾಪಕರ ಮನೆಗಳಲ್ಲಿ ಈ ಸಂಪ್ರದಾಯ ಮುಂದುವರೆಯಿತು. ವಿದ್ಯಾರ್ಥಿಗಳು ಪೂಜಾ ಸ್ಥಳದಲ್ಲಿ ಸಣ್ಣ ಗಣೇಶ ಮಂಟಪ ಮತ್ತು ಇತರ ವ್ಯವಸ್ಥೆಗಳನ್ನು ಆಸಕ್ತಿಯಿಂದ ಮಾಡುತ್ತಿದ್ದರು. ಪ್ರತಿಭಾನ್ವಿತ ಸದಸ್ಯರಿಂದ ಸುಮಧುರ ಭಜನೆಗಳು ಮತ್ತು ಭಕ್ತಿಗೀತೆಗಳ ಕಾರ್ಯಕ್ರಮ ನಡೆಯುತ್ತಿದ್ದವು. ಕುಟುಂಬ ಸದಸ್ಯರು 'ಪ್ರಸಾದ'ಕ್ಕಾಗಿ ವಿಭಿನ್ನ ಭಕ್ಷ್ಯಗಳನ್ನು ಸಿದ್ಧಪಡಿಸುತ್ತಿದ್ದರು, ಇದು ವಿಶೇಷವಾಗಿ ಮನೆಯ ಆಹಾರವನ್ನು ಕಳೆದುಕೊಳ್ಳುವ ಮತ್ತು ದಿನನಿತ್ಯದ ಹಾಸ್ಟೆಲ್ ಆಹಾರದಿಂದ ಬೇಸತ್ತ ವಿದ್ಯಾರ್ಥಿಗಳಿಗೆ ಉತ್ತಮ ಹಬ್ಬವಾಗಿತ್ತು. ಐಐಟಿ ದೆಹಲಿಯಲ್ಲಿ ನನ್ನ ವೃತ್ತಿ ಜೀವನದ ಅವಧಿಯಲ್ಲಿ ಗಣೇಶ ಚತುರ್ಥಿ ಸಮಾರಂಭಕ್ಕಾಗಿ ನೂರಾರು ಕನ್ನಡ ವಿದ್ಯಾರ್ಥಿಗಳು ನಮ್ಮ ಮನೆಗೆ ಭೇಟಿ ನೀಡಿದ್ದರು.

ನಾನು ಐಐಟಿ ಬಿಟ್ಟು ಬೆಂಗಳೂರಿನಲ್ಲಿ ಸ್ಥಳಾಂತರಗೊಂಡ ನಂತರ, ಬೆಂಗಳೂರು ಮತ್ತು ಇತರೆಡೆಗಳಲ್ಲಿ ವಿಚಿತ್ರ ಸ್ಥಳ ಮತ್ತು ವಿವಿಧ ಭಾಗಗಳಲ್ಲಿ ಈ ವಿದ್ಯಾರ್ಥಿಗಳಲ್ಲಿ ಅನೇಕರನ್ನು ನೋಡುವುದು ಸಂತೋಷಕರವಾಗಿತ್ತು. ನಮ್ಮ ಕನ್ನಡ ಸಂಘದ ಕಾರ್ಯಕ್ರಮಕ್ಕಾಗಿ ನಮ್ಮ ಐಐಟಿ ಮನೆಗೆ ಭೇಟಿ ನೀಡಿದ್ದಾಗ ಯಾರೋ ವಿಚಿತ್ರ ವ್ಯಕ್ತಿ ನನ್ನನ್ನು ಭೇಟಿ ಮಾಡಿ ಹೇಳಿದಾಗ ಆಶ್ಚರ್ಯವಾಗುತ್ತಿತ್ತು ಏಕೆಂದರೆ ನಮ್ಮನ್ನು ಭೇಟಿ ಮಾಡಿದ ಎಲ್ಲರನ್ನು ನೆನಪಿಸಿಕೊಳ್ಳುವುದು ನನಗೆ ಕಷ್ಟಕರವಾಗಿತ್ತು. ನಮ್ಮ ಅರಾವಳಿ ಕನ್ನಡ ಸಂಘ ಬೆಳೆದು ಸ್ಥಿರವಾದಾಗ, ಉತ್ಸಾಹಭರಿತ ಐಐಟಿ ವಿದ್ಯಾರ್ಥಿಗಳು ಪ್ರತಿ ವರ್ಷ 'ಯುಗಾದಿ'ಯನ್ನು ಭವ್ಯ ಸಾಂಸ್ಕೃತಿಕ ಕಾರ್ಯಕ್ರಮದೊಂದಿಗೆ ಆಚರಿಸಲು ಬಯಸಿದ್ದರು. ಇದನ್ನು ಐಐಟಿಯ ಸೆಮಿನಾರ್ ಹಾಲ್‌ನಲ್ಲಿ ಸತತವಾಗಿ ಮತ್ತು ಪರಿಣಾಮಕಾರಿಯಾಗಿ ಆಯೋಜಿಸಲಾಗಿತ್ತು, ಅದು ಸುಮಾರು 500 ಜನರನ್ನು ಹಿಡಿಯುವಂತಹ ಸಭಾಂಗಣವಾಗಿದೆ. ಕಾರ್ಯಕ್ರಮವು ಮಕ್ಕಳ ಕಾರ್ಯಕ್ರಮ, ಗುಂಪು ನೃತ್ಯ, ಗುಂಪು ಹಾಡುಗಳನ್ನು ಒಳಗೊಂಡಿತ್ತು, ಸದಸ್ಯರು ಪ್ರದರ್ಶಿಸಿದ ಹಾಸ್ಯಮಯ ಕನ್ನಡ ನಾಟಕದೊಂದಿಗೆ ಕಾರ್ಯಕ್ರಮ ಕೊನೆಗೊಳ್ಳುತ್ತಿತ್ತು. ಮಹಿಳೆಯರು ಮತ್ತು ಮಕ್ಕಳು ಸೇರಿದಂತೆ ಭಾಗವಹಿಸಿದ ಸದಸ್ಯರು ಅಂತಿಮ ಯುಗಾದಿ ಸಮಾರಂಭಗಳಲ್ಲಿ ಅತ್ಯುತ್ತಮ



ಪ್ರದರ್ಶನ ನೀಡಲು ಸುಮಾರು ಮೂರು ತಿಂಗಳುಗಳ ಕಾಲ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದ್ದರು. ಹೆಚ್ಚಾಗಿ ಶೇಷಾದ್ರಿ, ಭಾಸ್ಕರ್ (ಎಸ್ಕಾರ್ಟ್ ಅಧಿಕಾರಿ) ಮತ್ತು ನನ್ನ ಮನೆಗಳಲ್ಲಿ ಪೂರ್ವಾಭ್ಯಾಸವನ್ನು ನಡೆಸಲಾಗುತ್ತಿತ್ತು. ಇದು ನಿಜವಾಗಿಯೂ ಕನ್ನಡ ಉದ್ದೇಶಕ್ಕಾಗಿ ಸಂಯೋಜಿತ ಸಮುದಾಯ ಚಟುವಟಿಕೆಯಾಗಿತ್ತು. ಅನನುಭವಿ ವಿದ್ಯಾರ್ಥಿಗಳು ಮತ್ತು ಸದಸ್ಯರಿಂದ ನಾಟಕವನ್ನು ನಿಜವಾಗಿಯೂ ಅಸಾಧಾರಣ ಮತ್ತು ದೋಷರಹಿತವಾಗಿಸಲು ಕಠಿಣ ಪರಿಶ್ರಮದ ಪರಿಣತರಾದ "ಕನ್ನಡ ಭಾರತೀ"ಯ ಕಲಾವಿದ ವೆಂಕಟಸುಬ್ಬಯ್ಯ (WHO) ಮತ್ತು ಶಾಂತಾರಾಮ್ (ಕೆನರಾ ಬ್ಯಾಂಕ್) ಪ್ರತಿ ವರ್ಷ ನಾಟಕಗಳನ್ನು ನಿರ್ದೇಶಿಸಲು ಹೆಚ್ಚಿನ ಆಸಕ್ತಿ ವಹಿಸುತ್ತಿದ್ದರು. ಸ್ವತಃ ಪ್ರತಿಭಾನ್ವಿತ ಕಲಾವಿದರಾದ ರಾಷ್ಟ್ರೀಯ ಮಾಹಿತಿ ಕೇಂದ್ರದ (NIC) ರವೀಂದ್ರನಾಥ್ ನಾಟಕ ಸಿದ್ಧತೆಗಳಿಗೆ ಗಣನೀಯ ಕೊಡುಗೆ ನೀಡಿದರು. ದಕ್ಷಿಣ ದೆಹಲಿಯ ಸುಮಾರು 500 ಕನ್ನಡಿಗರು ಭಾಗವಹಿಸಿದ ಸಾಂಸ್ಕೃತಿಕ ಕಾರ್ಯಕ್ರಮವು ನಿಜವಾಗಿಯೂ ಮನರಂಜನೆ ಮತ್ತು ಮೆಚ್ಚುಗೆಯನ್ನು ಗಳಿಸಿತ್ತು.

ಕೆಲವು ವರ್ಷಗಳಲ್ಲಿ ಸಂಘವು ನಿಯಮಿತವಾಗಿ ಅಲ್ಲದಿದ್ದರೂ, ಐಐಟಿ ಸೀನಿಯರ್ ಸ್ಟಾಫ್ ಕ್ಲಬ್‌ನಲ್ಲಿ ಉತ್ತಮ ಕರ್ನಾಟಕ ಸಂಗೀತದೊಂದಿಗೆ ಪುರಂದರದಾಸ ಜಯಂತಿಯನ್ನು ಆಯೋಜಿಸಿತು. ದೆಹಲಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಪ್ರಸಿದ್ಧ ಹೊಸಹಳ್ಳಿ ಕೇಶವ ಮೂರ್ತಿ ಮತ್ತು ಮಾರ್ಕಂಡೇಯ ಅವಧಾನಿ ಅವರಿಂದ ಗಮಕ ಪ್ರದರ್ಶನವನ್ನು ಸಹ ಆಯೋಜಿಸಲಾಗಿತ್ತು. ಸಂಘದ ಐತಿಹಾಸಿಕ ಘಟನೆಗಳಲ್ಲಿ ಒಂದು, ಶ್ರೀ ಬಿ.ಡಿ. ಜತ್ತಿ ಅವರು ಭಾರತದ ಉಪಾಧ್ಯಕ್ಷರಾಗಿದ್ದಾಗ ಐಐಟಿಯ ಸೀನಿಯರ್ ಸ್ಟಾಫ್ ಕ್ಲಬ್‌ನಲ್ಲಿ ನಡೆದ ಸ್ವಾಗತ. ಐಐಟಿ, ಕನ್ನಡ ಸಂಘಕ್ಕೆ ಮೆಚ್ಚುಗೆಯ ಅವರ ಭಾಷಣವು ಅವಿಸ್ಮರಣೀಯವಾಗಿದೆ. ಯುಗಾದಿಯೊಂದಿಗೆ ಎಕೆಎಸ್ ನ 25 ವರ್ಷಗಳ ಆಚರಣೆಯನ್ನು ಅದ್ದೂರಿಯಾಗಿ ಆಯೋಜಿಸಲಾಗಿತ್ತು ಮತ್ತು ಆ ಸಂದರ್ಭದಲ್ಲಿ ಒಂದು ವಿಶೇಷ ಸ್ಮರಣ ಸಂಚಿಕೆಯನ್ನು ಸಹಾ ಹೊರತರಲಾಯಿತು.

**ದೆಹಲಿ ಕರ್ನಾಟಕ ಸಂಘ** (ಡಿಕೆಎಸ್) ಹಲವು ಏರಿಳಿತಗಳನ್ನು ಕಂಡ ದೀರ್ಘ ಇತಿಹಾಸವನ್ನು ಹೊಂದಿದ ದೆಹಲಿ ಕನ್ನಡಿಗರ ಅಸ್ಮಿತೆಯ ಸಂಸ್ಥೆ. ನಾನು ದೆಹಲಿಗೆ ಬಂದಾಗ (1970 ರಲ್ಲಿ) ಅದು ಹೆಚ್ಚಾಗಿ ಸುಪ್ತವಾಗಿತ್ತು. ನಾನು ಇಲ್ಲಿ ಬರೆಯುತ್ತಿರುವುದು ಹೆಚ್ಚಾಗಿ ಆ ಸಮಯದಲ್ಲಿ ಸ್ಥಳೀಯ ಕನ್ನಡಿಗರಿಂದ ನಾನು ಕೇಳಿದ ವಿಷಯಗಳನ್ನು ಆಧರಿಸಿದೆ. ಅದರ ಸತ್ಯಾಸತ್ಯತೆಯನ್ನು ನಾನು ದೃಢೀಕರಿಸಲು ಸಾಧ್ಯವಿಲ್ಲ. ಅದರಂತೆ, 1948 ರಲ್ಲಿ ದೆಹಲಿಯಲ್ಲಿ ಅಸ್ತಿತ್ವಕ್ಕೆ ಬಂದ ಈ ಸಂಘದ ಕಟ್ಟಡವನ್ನು ಕರ್ನಾಟಕದ ಜನಪ್ರಿಯ ರಾಜಕಾರಣಿ ಮತ್ತು ಮಾಜಿ ಕೇಂದ್ರ ಸಚಿವೆ ಡಾ. ಸರೋಜಿನಿ ಮಹಿಷಿ ಅವರು ಈಗಿರುವ ಮೋತಿಬಾಗ್ ಬಳಿ ಆರ್.ಕೆ. ಪುರಂ ಸೆಕ್ಟರ್–12 ರಲ್ಲಿ ಪ್ರಾರಂಭಿಸಿದರು. ಅವರ ರಾಜಕೀಯ ಪ್ರಭಾವದಿಂದಾಗಿ, ಮೂಲ ಸಂಘದ ಕಟ್ಟಡವನ್ನು ನಿರ್ಮಿಸಲಾದ ಮೋತಿಬಾಗ್‌ನ ರಿಂಗ್ ರಸ್ತೆಯಲ್ಲಿರುವ ಒಂದು ಪ್ರಮುಖ ಸ್ಥಳದಲ್ಲಿ ಅವರಿಗೆ ಉತ್ತಮ ಸ್ಥಳ ಸಿಗಲು ಸಾಧ್ಯವಾಯಿತು. ಇದನ್ನು ಅವರ ಮಾರ್ಗದರ್ಶನದಲ್ಲಿ ಒಂದು ಸಣ್ಣ ಕೂಟವು ಟ್ರಸ್ಟ್ ಆಗಿ ಪರಿಣಾಮಕಾರಿಯಾಗಿ ನಡೆಸುತ್ತಿತ್ತು. ನಿಯಂತ್ರಣವು ತನ್ನ ಕೈಯಿಂದ ಜಾರಿಕೊಳ್ಳುವುದನ್ನು ಅವರು ಬಯಸಲಿಲ್ಲ. ಸ್ಥಳೀಯ ಕನ್ನಡ ಸಮುದಾಯದ ಭಾಗವಹಿಸುವಿಕೆ ಕಡಿಮೆ ಇತ್ತು, ಸದಸ್ಯತ್ವ ಅಥವಾ ಚುನಾವಣೆಗಳು ಇರಲಿಲ್ಲ.

ಸುಪ್ರೀಂ ಕೋರ್ಟ್‌ನ ಪ್ರಸಿದ್ಧ ವಕೀಲ ಶ್ರೀ ಕೆ.ಆರ್. ನಾಗರಾಜ (ಶಿವಮೊಗ್ಗ ಜಿಲ್ಲೆಯ ಸಾಗರ ಮೂಲದವರು) ಮತ್ತು ಶ್ರೀ ಗೋಪಾಲ ಶಾಸ್ತ್ರಿಯವರಂತಹ ಕೆಲವು ಸ್ಥಳೀಯ ಕನ್ನಡ ನಾಯಕರೊಂದಿಗೆ, ಡಿಕೆಎಸ್ ಅನ್ನು ಮಹಿಷಿಯ ವೈಯಕ್ತಿಕ ನಿಯಂತ್ರಣದಿಂದ 'ಮುಕ್ತಗೊಳಿಸಿ' ದೆಹಲಿ ಕನ್ನಡ ಸಮುದಾಯಕ್ಕೆ ವರ್ಗಾಯಿಸಲು ನಿರ್ಧರಿಸಿದರು.



ಅಂದಿನ ಐಐಟಿ ದೆಹಲಿ ಡೈರೆಕ್ಟರ್ ಪ್ರೊ. ಸ್ವಾಮಿ ಅವರು ಅರಾವಳಿ ಕನ್ನಡ ಸಂಘದ ಕಾರ್ಯಕ್ರಮದಲ್ಲಿ ಭಾಗವಹಿಸಿದ ದೃಶ್ಯ

ವಕೀಲರಾಗಿದ್ದ ಅವರು ಈ ಉದ್ದೇಶವನ್ನು ಸಾಧಿಸಲು ಕಾನೂನು ಮಾರ್ಗವನ್ನು ಕಂಡುಕೊಂಡರು, ಅದರ ವಿವರಗಳು ನನಗೆ ಸಂಪೂರ್ಣವಾಗಿ ತಿಳಿದಿಲ್ಲ. ದೆಹಲಿ ನ್ಯಾಯಾಲಯಗಳಲ್ಲಿ ಈ ವಿಷಯದ ಬಗ್ಗೆ ದೀರ್ಘಕಾಲ ಹೋರಾಡಲಾಯಿತು. ಕೆಲವು ಸಮಯದವರೆಗೆ, ಸಂಘದ ಆವರಣದಲ್ಲಿ ಪೊಲೀಸರನ್ನು ನಿಯೋಜಿಸಲಾಗಿತ್ತು. ಕೆ.ಆರ್. ನಾಗರಾಜ ಕೆಲವು ಸ್ನೇಹಿತರೊಂದಿಗೆ ಡಿಕೆಎಸ್‌ಗಾಗಿ ಸಂವಿಧಾನವನ್ನು ರಚಿಸಿದರು ಮತ್ತು ಹೆಚ್ಚಿನ ಸಂಖ್ಯೆಯ ಸಾಮಾನ್ಯ ಮತ್ತು ಆಜೀವ ಸದಸ್ಯರನ್ನು ಸೇರಿಸಿಕೊಂಡರು. ನಾನು ಕೂಡ ನನ್ನ ಪತ್ನಿಯೊಂದಿಗೆ ಆಜೀವ ಸದಸ್ಯನಾದೆ. ಅದೊಂದು ದೀರ್ಘ ಹೋರಾಟವಾಗಿತ್ತು. ಅವರು ನನ್ನ ಐಐಟಿ ಮನೆಯ ಹತ್ತಿರವಿರುವ ಗ್ರೀನ್ ಪಾರ್ಕ್‌ನಲ್ಲಿ ವಾಸಿಸುತ್ತಿದ್ದರಿಂದ ಆಗಾಗ್ಗೆ ನನ್ನನ್ನು ಭೇಟಿ ಮಾಡಿ ಬೆಳವಣಿಗೆಗಳ ಬಗ್ಗೆ ನನಗೆ ವಿವರಿಸುತ್ತಿದ್ದರು. ದೆಹಲಿಯಲ್ಲಿನ ಎಲ್ಲಾ ಕನ್ನಡ ಚಟುವಟಿಕೆಗಳಿಗೆ ಅವರನ್ನು ಬೆಂಬಲಿಸಲು ನಾನು ಉತ್ಸುಕನಾಗಿದ್ದೆ. ನ್ಯಾಯಾಲಯದ ನಿರ್ದೇಶನ ಮತ್ತು ನಿಯಂತ್ರಣದ ಅಡಿಯಲ್ಲಿ ಚುನಾವಣೆಗಳನ್ನು ನಡೆಸಲಾಯಿತು ಮತ್ತು ನಾಗರಾಜ ಅವರನ್ನು ಆಗಿನ ಕಾರ್ಯದರ್ಶಿಯಾಗಿ ಆಯ್ಕೆ ಮಾಡಲಾಯಿತು. ನನ್ನ ನೆನಪು ಸರಿಯಾಗಿದ್ದರೆ ಗೋಪಾಲಶಾಸ್ತ್ರಿ ಅನಂತರ ಅಧ್ಯಕ್ಷರಾಗಿದ್ದರು. ಚುನಾಯಿತ ಕಾರ್ಯಕಾರಿ ಸಮಿತಿಯನ್ನು ಸಹ ರಚಿಸಲಾಯಿತು ಮತ್ತು ಚಟುವಟಿಕೆಗಳು ಸರಿಯಾದ ಶ್ರದ್ಧೆಯಿಂದ ಪ್ರಾರಂಭವಾದವು. ಸ್ವಲ್ಪ ಸಮಯದವರೆಗೆ, ನಾನು ಕಾರ್ಯಕಾರಿ ಸಮಿತಿಯ ಸದಸ್ಯನಾಗಿದ್ದೆ. ಅನೇಕ ಸಕ್ರಿಯ ಸ್ವಯಂಸೇವಕರು ಇದ್ದರು. ಎಲ್ಲಾ ದೆಹಲಿ ಕನ್ನಡಿಗರನ್ನು ಒಳಗೊಂಡ ಅನೇಕ ಸಾಂಸ್ಕೃತಿಕ, ಸಾಮಾಜಿಕ ಮತ್ತು ಧಾರ್ಮಿಕ ಚಟುವಟಿಕೆಗಳು ನಡೆದವು.

ಈ ಉದಯೋನ್ಮುಖ ದೆಹಲಿ ಕರ್ನಾಟಕ ಸಂಘದ ಚಟುವಟಿಕೆಗಳಲ್ಲಿ ಕನ್ನಡಿಗರ ಉತ್ಸಾಹವನ್ನು ನೋಡುವುದು ಹಬ್ಬವಾಗಿತ್ತು. ವಾರ್ಷಿಕ ದಿನವು ಮಕ್ಕಳು ಮತ್ತು ವಯಸ್ಕರಿಗೆ ಕ್ರೀಡೆ, ಸಾಹಿತ್ಯ ಮತ್ತು ಸಾಂಸ್ಕೃತಿಕ ಸ್ಪರ್ಧೆಯನ್ನು ಒಳಗೊಂಡ ಅತ್ಯಂತ ಜನಪ್ರಿಯ ಕಾರ್ಯಕ್ರಮವಾಗಿತ್ತು. ಶ್ರೀ ಸಿ.ವಿ. ಗೋಪಿನಾಥ್ (ಟೆಲಿಕಾಂ ಇಲಾಖೆ ಉನ್ನತ ಅಧಿಕಾರಿ) ಮತ್ತು ನಾನು ಕನ್ನಡ ಮತ್ತು ಕರ್ನಾಟಕದ ಕುರಿತು 'ರಸಪ್ರಶ್ನೆ'ಯನ್ನು ಹೆಚ್ಚಾಗಿ ಮಕ್ಕಳಿಗಾಗಿ ಆಯೋಜಿಸುವಲ್ಲಿ ಮುಂದಾಳತ್ವ ವಹಿಸಿದ್ದೆವು. ವಾರ್ಷಿಕ ಪಿಕ್‌ನಿಕ್ ಕೂಡ ಬಹಳ ಜನಪ್ರಿಯವಾಗಿತ್ತು. 'ಅಭಿಮತ' ಸಮರ್ಥ ಸ್ವಯಂಸೇವಕರು ಸಂಪಾದಿಸಿದ ಡಿಕೆಎಸ್‌ನ ಜನಪ್ರಿಯ ಸುದ್ದಿಪತ್ರವಾಯಿತು. ಆಗಾಗ್ಗೆ, ನಾವು ಭೇಟಿ ನೀಡುವ ಕನ್ನಡ ಕಲಾವಿದರು ಮತ್ತು ಸಾಹಿತ್ಯಿಕ ವ್ಯಕ್ತಿಗಳಿಗೆ ಕಲಾವಿದರ ಪ್ರದರ್ಶನ ಸೇರಿದಂತೆ ಸನ್ಮಾನ ಕಾರ್ಯಕ್ರಮಗಳನ್ನು ನಡೆಸುತ್ತಿದ್ದೆವು.

ಸಂಘದ ದೈನಂದಿನ ಕಾರ್ಯಗಳನ್ನು ನಿರ್ವಹಿಸಲು ಅಗತ್ಯ ಸಿಬ್ಬಂದಿಯನ್ನು ಹೊಂದಿರುವ ಕಚೇರಿಯನ್ನು ಸ್ಥಾಪಿಸಲಾಯಿತು, ಮುಖ್ಯವಾಗಿ ಕರ್ನಾಟಕದ ಪ್ರವಾಸಿಗರಿಗೆ ಅವಕಾಶ ಕಲ್ಪಿಸಲು ಅತಿಥಿ ಗೃಹ. ದೆಹಲಿಗೆ ಭೇಟಿ ನೀಡುವ ಕನ್ನಡಿಗರಿಗೆ ಇದು ತುಂಬಾ ಉಪಯುಕ್ತ ಸೌಲಭ್ಯವಾಗಿದೆ. ಆವರಣದಲ್ಲಿ ಬ್ಯಾಂಕ್ ಮತ್ತು ಕ್ಯಾಂಟೀನ್ ಆದಾಯದ ಉಪಯುಕ್ತ ಮೂಲವಾಗಿತ್ತು. ಆದರೆ ಸಂಘವು ಸಭಾಂಗಣದ ಕೊರತೆಯಿಂದ ಬಳಲುತ್ತಿತ್ತು. ಏಕೆಂದರೆ ಎಲ್ಲಾ ಕಾರ್ಯಕ್ರಮಗಳನ್ನು ತಾತ್ಕಾಲಿಕ ಶಾಮಿಯಾನದೊಂದಿಗೆ ತೆರೆದ ಸ್ಥಳದಲ್ಲಿ ನಡೆಸಬೇಕಾಗಿತ್ತು. ಕಟ್ಟಡವನ್ನು ಸಂಪೂರ್ಣವಾಗಿ ಕೆಡವಿ, ಅಗತ್ಯವಿರುವ ಎಲ್ಲಾ ಸೌಲಭ್ಯಗಳನ್ನು ಒಳಗೊಂಡ ಬಹುಮಹಡಿ ಸಂಕೀರ್ಣವನ್ನು ನಿರ್ಮಿಸಲು ಕೆ.ಆರ್. ನಾಗರಾಜ ಅವರು ಮಹತ್ವಾಕಾಂಕ್ಷೆಯ ಯೋಜನೆಯನ್ನು ಯೋಜಿಸಿದ್ದರು. ಇದಕ್ಕೆ ಸಾಕಷ್ಟು ಸಂಪನ್ಮೂಲಗಳು ಬೇಕಾಗಿದ್ದವು. ಅವರು ನಿಧಿ ಸಂಗ್ರಹಣೆಗೆ ಮುಂದಾದರು. ಹೊಸ ಸಂಘ ಕಟ್ಟಡಕ್ಕಾಗಿ ಸಂಪನ್ಮೂಲಗಳನ್ನು ಕ್ರೋಢೀಕರಿಸಲು ಪ್ರಸಿದ್ಧ ನಟ ಡಾ. ರಾಜ್‌ಕುಮಾರ್ ಮತ್ತು ಸಂಗೀತ ಮಾಂತ್ರಿಕ ಭೀಮಸೇನ ಜೋಶಿ ಅವರ ಪ್ರದರ್ಶನವನ್ನು ಬೃಹತ್ ಪ್ರಮಾಣದಲ್ಲಿ ದೆಹಲಿಯಲ್ಲಿ ಆಯೋಜಿಸಲಾಯಿತು. ಅವರು ಕರ್ನಾಟಕ ಸರ್ಕಾರದಿಂದ ಕೆಲವು ಅನುದಾನಗಳನ್ನು ಪಡೆಯುವಲ್ಲಿ ಯಶಸ್ವಿಯಾದರು ಮತ್ತು ಬ್ಯಾಂಕ್‌ಗಳಿಂದ ಕೆಲವು ಸಾಲಗಳನ್ನು ಸಹ ಸಂಗ್ರಹಿಸಿದರು. ಅಂತಿಮವಾಗಿ, ರಾಷ್ಟ್ರ ರಾಜಧಾನಿಯ ಮಹಾತ್ಮ ಗಾಂಧಿ ರಿಂಗ್ ರಸ್ತೆಯ ಬಳಿ ಮೋತಿಬಾಗ್‌ನಲ್ಲಿರುವ ಒಂದು ಪ್ರಮುಖ ಸ್ಥಳದಲ್ಲಿ ಪ್ರಭಾವಶಾಲಿ ಡಿಕೆಎಸ್ ನ ಹೊಸ ಸಾಂಸ್ಕೃತಿಕ ಸಂಕೀರ್ಣವು ಹೊರಹೊಮ್ಮಿತು.

ಇದು ಇಂದು ದೆಹಲಿ ಕನ್ನಡಿಗರ ಹೆಮ್ಮೆಯ ಆಸ್ತಿಯಾಗಿದೆ, ಇದು ನಾಗರಾಜ ಮತ್ತು ಅವರ ತಂಡದ ಪ್ರಯತ್ನಗಳಿಗೆ ಗೌರವ ತಂದಿದೆ. ಇದು ದೆಹಲಿಗೆ ಬರುವ ಕನ್ನಡ ಪ್ರವಾಸಿಗರಿಗೆ ಹಲವಾರು ವಸತಿ ಕೊಠಡಿಗಳನ್ನು ಹೊಂದಿದೆ. ಕ್ಯಾಂಟೀನ್ ಮತ್ತು ಬ್ಯಾಂಕ್ ಆಧುನಿಕ ಸೌಲಭ್ಯಗಳು ಇಲ್ಲಿವೆ. ಸಭಾಂಗಣವು ನಿಜವಾಗಿಯೂ ಪ್ರಭಾವಶಾಲಿಯಾಗಿದೆ. ಹೊಸ ಕಟ್ಟಡ ಸಂಕೀರ್ಣದೊಂದಿಗೆ ಡಿಕೆಎಸ್ ಚಟುವಟಿಕೆಗಳು ಹಲವು ಪಟ್ಟು ಹೆಚ್ಚಾದವು. ಹೊಸ ಅತಿಥಿ ಕೊಠಡಿಗಳು, ಬ್ಯಾಂಕ್ ಮತ್ತು ಕರ್ನಾಟಕ ಫುಡ್ ಸೆಂಟರ್ (ಕೆಎಫ್‌ಸಿ) ಕ್ಯಾಂಟೀನ್ ಸಂಘದ ಆದಾಯವನ್ನು ಹೆಚ್ಚಿಸಿದವು. ರಾಜ್ಯದ ಹೊರಗೆ ಕನ್ನಡ ಚಟುವಟಿಕೆಗಳನ್ನು ಬೆಂಬಲಿಸುವ ಕರ್ನಾಟಕ ಸರ್ಕಾರದ ನೀತಿಯು ಹೆಚ್ಚಿನ ಅನುದಾನದೊಂದಿಗೆ



ಡಿಕೆಎಸ್‌ಗೆ ಹೆಚ್ಚಿನ ಪ್ರಮಾಣದಲ್ಲಿ ಆರ್ಥಿಕ ಸಹಾಯ ಮಾಡಿತು. ಹೀಗಾಗಿ, ಡಿಕೆಎಸ್‌ನ ಆರ್ಥಿಕ ಆರೋಗ್ಯವು ಗಣನೀಯವಾಗಿ ಸುಧಾರಿಸಿತು. ಆದಾಯ ಹೆಚ್ಚಾಗಿ ಗಮನ ಸೆಳೆಯಲಾರಂಭಿಸಿತು.

ಕಾಲಾನಂತರದಲ್ಲಿ ಸದಸ್ಯರ ಭಾಗವಹಿಸುವಿಕೆ ಹೆಚ್ಚಾಯಿತು. ವಾರ್ಷಿಕ ಚುನಾವಣೆಗಳು ಹೆಚ್ಚಿದ ಅಭ್ಯರ್ಥಿಗಳು ಮತ್ತು ಗುಂಪುಗಳೊಂದಿಗೆ ತೀವ್ರ ಸ್ಪರ್ಧೆಯನ್ನು ಆಕರ್ಷಿಸಿದವು. ಮತದಾರರನ್ನು ಆಕರ್ಷಿಸಲು ಅಭ್ಯರ್ಥಿಗಳು ಅನೇಕ ತಂತ್ರಗಳನ್ನು ಬಳಸಿದರು. ದೆಹಲಿ ಕನ್ನಡಿಗರು ಸಾಮಾನ್ಯವಾಗಿ ವಿಶಾಲ ಮನಸ್ಸಿನವರು, ವಿಶ್ವಮಾನವರು, ರಾಷ್ಟ್ರೀಯ ದೃಷ್ಟಿಕೋನದಿಂದ ಶಿಕ್ಷಣ ಪಡೆದವರು ಮತ್ತು ಜಾತಿಯಂತಹ ಕಿರಿದಾದ ಅಂಶಗಳನ್ನು ಬಳಸಿಕೊಂಡು ಚುನಾವಣೆಯಲ್ಲಿ ಕೆಲವು ಅಭ್ಯರ್ಥಿಗಳು ತಂತ್ರಗಳನ್ನು ರೂಪಿಸುವುದು ನಿಷ್ಪರಿಣಾಮಕಾರಿಯಾಗಿರುತ್ತಿತ್ತು. ಯಾವುದೇ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಚುನಾವಣೆಗಳು ಅತ್ಯಗತ್ಯವಾದರೂ, ಅವುಗಳನ್ನು ಗೌರವಯುತ ರೀತಿಯಲ್ಲಿ ನಡೆಸಬೇಕು ಮತ್ತು ಡಿಕೆಎಸ್ ಈ ಸುವರ್ಣ ನಿಯಮವನ್ನು ಅನುಸರಿಸುತ್ತಿದೆ ಎಂದು ನನಗೆ ಖಚಿತವಾಗಿದೆ. ಕಳೆದ ಎರಡು ದಶಕಗಳಲ್ಲಿ ಡಿಕೆಎಸ್‌ನ ಸ್ಥಿರ ಬೆಳವಣಿಗೆ ಅಸಾಧಾರಣವಾಗಿದೆ, ಅದರ ಹಲವಾರು ಚಟುವಟಿಕೆಗಳಲ್ಲಿ ಅನೇಕ ಉತ್ಸಾಹಭರಿತ ಸ್ವಯಂಸೇವಕರು ತೊಡಗಿಸಿಕೊಂಡಿದ್ದಾರೆ. ಚಟುವಟಿಕೆಗಳ ಸ್ವರೂಪ ತುಂಬಾ ವೈವಿಧ್ಯಮಯವಾಗಿದೆ. ಸಂಘದ ಹಿಂದಿನ ಕ್ರಿಯಾತ್ಮಕ ಕಾರ್ಯದರ್ಶಿ ಮತ್ತು ಪ್ರಸ್ತುತ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ ಮತ್ತು ಅವರ ತಂಡದ ಅಡಿಯಲ್ಲಿ ಪ್ರಸ್ತುತ ಚಟುವಟಿಕೆಗಳಿಂದ ನಾನು ಪ್ರಭಾವಿತನಾಗಿದ್ದೇನೆ. ಅವರು ದೇಶದ ಪ್ರಧಾನ ಮಂತ್ರಿಗಳನ್ನು ಸಹಾ ಸಂಘದ ಅಮೃತ ಮಹೋತ್ಸವ ಕಾರ್ಯಕ್ರಮಕ್ಕೆ ಕರೆಸಿದ್ದು ಐತಿಹಾಸಿಕವಾಗಿದೆ.

ಇಂದು ಡಿಕೆಎಸ್ ಕರ್ನಾಟಕದ ಹೊರಗೆ ಅತ್ಯಂತ ಸಕ್ರಿಯವಾಗಿರುವ ಕನ್ನಡ ಸಂಘಗಳಲ್ಲಿ ಒಂದಾಗಿದೆ. ರಾಷ್ಟ್ರ ರಾಜಧಾನಿಯಲ್ಲಿರುವುದು ಮಹಾನ್ ಕವಿ ಕುವೆಂಪು ವ್ಯಾಖ್ಯಾನಿಸಿದಂತೆ 'ಕರ್ನಾಟಕ ಮಾತೆ'ಯ ಕಿರೀಟದಲ್ಲಿರುವ ಒಂದು ರತ್ನದಂತಿದೆ. ಕನ್ನಡ ಮತ್ತು ಕನ್ನಡಿಗರಿಗೆ ದೆಹಲಿ ಕರ್ನಾಟಕ ಸಂಘದ ಕೊಡುಗೆಗಾಗಿ ಎಲ್ಲಾ ಕನ್ನಡಿಗರು ಹೆಮ್ಮೆಪಡಬಹುದು. ಡಿಕೆಎಸ್ ಕಾರ್ಯಕ್ರಮಗಳಲ್ಲಿ ಕರ್ನಾಟಕದ ಸಂಸದರು, ಸಚಿವರು ಮತ್ತು ಅನೇಕ



ಯುಗಾದಿ ಹಬ್ಬ ಪ್ರಯುಕ್ತ ಅರಾವಳಿ ಕನ್ನಡ ಸಂಘ ಏರ್ಪಡಿಸಿದ್ದ ನಾಟಕದ ದೃಶ್ಯ

ಗಣ್ಯರು ನಿಯಮಿತವಾಗಿ ಭಾಗವಹಿಸುವುದರಿಂದ ಸಂಘವು ದೇಶದ ರಾಜಧಾನಿಯಲ್ಲಿರುವುದು ಅನೇಕ ಅನುಕೂಲಗಳಿಗೆ ಪೂರಕವಾಗಿದೆ.

ದೆಹಲಿಯಲ್ಲಿ ಕನ್ನಡದ ಒಂದು ಐತಿಹಾಸಿಕ ಘಟನೆಯೆಂದರೆ 1978 ರಲ್ಲಿ ದೆಹಲಿಯಲ್ಲಿ ಕರ್ನಾಟಕ ಸಂಘ ಮತ್ತು ದೆಹಲಿ ಕನ್ನಡ ಶಾಲೆ ಆಶ್ರಯದಲ್ಲಿ ಕೇಂದ್ರ ಸಚಿವಾಲಯದ ಬಳಿ ವಿಶೇಷವಾಗಿ ನಿರ್ಮಿಸಲಾದ ವಿಶಾಲವಾದ ಸಮ್ಮೇಳನ ಸಂಕೀರ್ಣದಲ್ಲಿ ನಡೆದ ವಿಶಿಷ್ಟ ಅಖಿಲ ಭಾರತ ಸುವರ್ಣ ಕನ್ನಡ ಸಾಹಿತ್ಯ ಸಮ್ಮೇಳನ (50 ನೇ ವಾರ್ಷಿಕ ಕನ್ನಡ ಸಾಹಿತ್ಯ ಸಮ್ಮೇಳನ). ನಾನು ಆ ಸಂಘಟನಾ ಸಮಿತಿಯ ಸದಸ್ಯನಾಗಿದ್ದೆ ಮತ್ತು ವಿವಿಧ ಕಾರ್ಯಗಳನ್ನು ನಿರ್ವಹಿಸುತ್ತಿದ್ದ ಸ್ಥಳೀಯ ಕನ್ನಡ ಸ್ವಯಂಸೇವಕರು ಹೆಚ್ಚಿನ ಸಂಖ್ಯೆಯಲ್ಲಿದ್ದರು. ಸಮ್ಮೇಳನದ ಯಶಸ್ಸಿನ ಬಗ್ಗೆ ಉತ್ಸುಕರಾಗಿದ್ದ ಎಎಸ್‌ಕೆ ರಾವ್ (ಆಗ ಪಿಟಿಐ ಜೊತೆಗಿದ್ದರು) ಸಮ್ಮೇಳನದ ಹಿಂದಿನ ಶಕ್ತಿಯಾಗಿದ್ದರು. ಅನೇಕ ಸ್ಥಳೀಯ ಕನ್ನಡ ಸಂಸ್ಥೆಗಳು ಆ ಐತಿಹಾಸಿಕ ಸಮ್ಮೇಳನದಲ್ಲಿ ಭಾಗಿಯಾಗಿದ್ದವು.

ಆಗಿನ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದ ಶ್ರೀ ಜಿ. ನಾರಾಯಣ ಸರ್ಕಾರ ಮತ್ತು ಇತರ ಪಾಲುದಾರರೊಂದಿಗೆ ಎಲ್ಲಾ ಸಂಪರ್ಕ ಕೆಲಸಗಳನ್ನು ಮಾಡಿದರು. ಸಮ್ಮೇಳನದ ಸಿದ್ಧತೆಗಳ ಪ್ರಗತಿಯನ್ನು ಮೇಲ್ವಿಚಾರಣೆ ಮಾಡಲು ಅವರು ನಿಯಮಿತವಾಗಿ ಬೆಂಗಳೂರು ಮತ್ತು ದೆಹಲಿ ನಡುವೆ ಪ್ರಯಾಣಿಸುತ್ತಿದ್ದರು. ಅವರು ಕೂಡ ಕಾರ್ಯಕ್ರಮವನ್ನು ಅದ್ದೂರಿಯಾಗಿ ಯಶಸ್ವಿಗೊಳಿಸಲು ಉತ್ಸುಕರಾಗಿದ್ದರು. ಅವರು ನಮ್ಮ ಹೆಚ್ಚಿನ ಸಂಘಟನಾ ಸಮಿತಿ ಸಭೆಗಳಲ್ಲಿ ಭಾಗವಹಿಸಿದ್ದರು. ಅಂತಹ ಒಂದು ಸಭೆಯಲ್ಲಿ ನಾವು ಸಮ್ಮೇಳನದ 'ಅಧ್ಯಕ್ಷರನ್ನು' ಆಯ್ಕೆ ಮಾಡಬೇಕಾಗಿತ್ತು. ಪ್ರಸಿದ್ಧ ಕನ್ನಡ ಕವಿ, ಮಹಾನ್ ವಿದ್ವಾಂಸ, ಜನಪ್ರಿಯ ಶಿಕ್ಷಕ ಮತ್ತು ಅತ್ಯುತ್ತಮ ಭಾಷಣಕಾರರಾದ ಡಾ. ಜಿ.ಪಿ. ರಾಜರತ್ನಂ ಅವರ ಹೆಸರನ್ನು ಉಲ್ಲೇಖಿಸಲು ನಾನು ಧೈರ್ಯ ಮಾಡಿದೆ. ಅದೃಷ್ಟವಶಾತ್, ಹಾಜರಿದ್ದ ಎಲ್ಲರೂ ನನ್ನ ನಾಮ ನಿರ್ದೇಶನವನ್ನು ಸುಲಭವಾಗಿ ಅನುಮೋದಿಸಿದರು. ಹೀಗಾಗಿ, ದೆಹಲಿ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರನ್ನು ನಾಮ ನಿರ್ದೇಶನ ಮಾಡುವ ಯಶಸ್ಸಿಗೆ ನನಗೆ ಹೆಮ್ಮೆಯಿದೆ. ಕರ್ನಾಟಕದ ಕೆಲವು ಭಾಗಗಳಲ್ಲಿ ನಡೆಯುವ ಯಾವುದೇ ಸಮ್ಮೇಳನದಲ್ಲಿ ರಾಜರತ್ನಂ ಅವರ ನಾಮ ನಿರ್ದೇಶನವು ಕಷ್ಟಕರವಾಗಿರುತ್ತದೆ ಎಂದು ಹಾಜರಿದ್ದ ಸದಸ್ಯರೊಬ್ಬರು ತಿಳಿಸಿದರು, ಏಕೆಂದರೆ ರಾಜಕೀಯ ಮತ್ತು ಭಾಷೆಗಳು ಬೆರೆತಿರುವ ಅನೇಕ ಸ್ಥಳೀಯ ಕಾರಣಗಳಿಂದ ಇದು ಕಷ್ಟಕರವಾಗಿರಬಹುದು.

ದೆಹಲಿ ಕನ್ನಡಿಗರ ಬೃಹತ್ ಮತ್ತು ಉತ್ಸಾಹಭರಿತ ಭಾಗವಹಿಸುವಿಕೆಯೊಂದಿಗೆ ಸಮ್ಮೇಳನದ ದಿನವು ಆಗಮಿಸಿತು. ಸಮ್ಮೇಳನದ ಸ್ಥಳವನ್ನು ಕನ್ನಡ / ಕರ್ನಾಟಕ ವಿಷಯಗಳಿಂದ ವರ್ಣರಂಜಿತವಾಗಿ ಅಲಂಕರಿಸಲಾಗಿತ್ತು. ಆ ದಿನ ಬೆಂಗಳೂರಿನಿಂದ ದೆಹಲಿಗೆ ಓಡುತ್ತಿದ್ದ ಏಕೈಕ ರೈಲು ಕರ್ನಾಟಕ ಎಕ್ಸ್‌ಪ್ರೆಸ್ ವಿಶೇಷವಾಗಿ ಕರ್ನಾಟಕದಿಂದ ಆಗಮಿಸುತ್ತಿದ್ದ ಈ ಸಮ್ಮೇಳನದ ಪ್ರತಿನಿಧಿಗಳಿಂದ ಮಾತ್ರ ತುಂಬಿತ್ತು. ಉದ್ಘಾಟನೆಗೆ ಮೊದಲು ದೆಹಲಿ ಮತ್ತು ಕರ್ನಾಟಕದ ಈ ಪ್ರತಿನಿಧಿಗಳು ಕನ್ನಡವನ್ನು ಹೊಗಳುವ ಘೋಷಣೆಗಳು ಮತ್ತು ಬ್ಯಾನರ್‌ಗಳೊಂದಿಗೆ ದೀರ್ಘ ಮೆರವಣಿಗೆಗಳನ್ನು ನಡೆಸಿದರು. ಆಗಿನ ಪ್ರಧಾನಿ ಮೊರಾರ್ಜಿ ದೇಸಾಯಿ ಸಮ್ಮೇಳನವನ್ನು ಉದ್ಘಾಟಿಸಿದರು. ಸಮ್ಮೇಳನದ ಅಧ್ಯಕ್ಷ



ರಾಜರತ್ನಂ ಅವರ ಭಾಷಣವು ಸ್ಮರಣೀಯವಾಗಿತ್ತು. ಎಂದಿನಂತೆ ಕನ್ನಡ, ಕರ್ನಾಟಕ ಮತ್ತು ಹೊರಗಿನ ಕನ್ನಡಿಗರ ಸಮಸ್ಯೆಗಳ ಕುರಿತು ಚರ್ಚಿಸುವ ಅನೇಕ ಅಧಿವೇಶನಗಳು ನಡೆದವು. ಸಾಂಸ್ಕೃತಿಕ ಕಾರ್ಯಕ್ರಮಗಳು ಅತ್ಯುತ್ತಮ ಗುಣಮಟ್ಟದ್ದಾಗಿದ್ದವು. ಇದು ದೆಹಲಿ ಕನ್ನಡಿಗರನ್ನು ಹೆಮ್ಮೆ ಪಡುವಂತೆ ಮಾಡಿದ ವಿಶಿಷ್ಟವಾದ ವಾರ್ಷಿಕ ಕನ್ನಡ ಸಾಹಿತ್ಯ ಸಮ್ಮೇಳನವಾಗಿತ್ತು.

ಕನ್ನಡ ಭಾಷೆಗೆ ಅವಿಶ್ರಾಂತ ಕೊಡುಗೆ ನೀಡಿದ ಅನೇಕ ಪ್ರಸಿದ್ಧ ವ್ಯಕ್ತಿಗಳಿದ್ದಾರೆ. ಜೆಎನ್‌ಯು ವಿದ್ವಾಂಸ ಬಾಲಕೃಷ್ಣ ಸಾಮಗ ಅಂತಹವರಲ್ಲಿ ಒಬ್ಬರು. ಅಂಗವಿಕಲರಾಗಿದ್ದರೂ ಅವರು ಕನ್ನಡ ಕೆಲಸಕ್ಕಾಗಿ ದೆಹಲಿಯನ್ನು ಸೈಕಲ್‌ನಲ್ಲಿ ಸುತ್ತುತ್ತಿದ್ದರು. ಅವರು ದೆಹಲಿಯಲ್ಲಿರುವ ನಮ್ಮ ಮನೆಗೆ ಹಲವಾರು ಬಾರಿ ಭೇಟಿ ನೀಡಿದ್ದರು ಮತ್ತು ದೆಹಲಿಯಲ್ಲಿ ಕನ್ನಡವನ್ನು ಉತ್ತೇಜಿಸುವ ಅವರ ಧ್ಯೇಯಕ್ಕೆ ಉಪಯುಕ್ತವೆಂದು ಅವರು ಪರಿಗಣಿಸಿದ ಅನೇಕ ಸ್ಥಳೀಯ ಕನ್ನಡಿಗರ ನಿವಾಸಗಳಿಗೆ ಭೇಟಿ ನೀಡಿದ್ದರು. ಅವರು ಕೇವಲ ತಮ್ಮ ವೈಯಕ್ತಿಕ ಪ್ರಯತ್ನಗಳಿಂದ 'ದೆಹಲಿ ಕನ್ನಡಿಗ' ಎಂಬ ನಿಯತಕಾಲಿಕವನ್ನು ಪ್ರಕಟಿಸಿದರು. ಅವರ ಧ್ಯೇಯದಿಂದ ಪ್ರಭಾವಿತರಾದ ನಾವು ಅವರಿಗೆ ಪೂರ್ಣ ಬೆಂಬಲ ನೀಡಲು ಈ ಪತ್ರಿಕೆಯನ್ನು ಪೋಷಿಸಿದೆವು. ಪ್ರತಿ ವರ್ಷ ಅವರು ಚಾಣಕ್ಯಪುರಿಯ ರಾಜ್ಯ ಸರ್ಕಾರದ ಕರ್ನಾಟಕ ಭವನದಲ್ಲಿ ಕನಿಷ್ಠ ಬೆಂಬಲದೊಂದಿಗೆ ತಮ್ಮ ವೈಯಕ್ತಿಕ ಪ್ರಯತ್ನದಿಂದ ದಿನವಿಡೀ 'ದೆಹಲಿ ಕನ್ನಡ ಸಮ್ಮೇಳನ'ವನ್ನು ಆಯೋಜಿಸುತ್ತಿದ್ದರು. ಹೀಗಾಗಿ ಅವರು ಸ್ಥಳೀಯ ಕನ್ನಡಿಗರಲ್ಲಿ ಬಹಳ ಯಶಸ್ವಿಯಾದರು. ಮಕ್ಕಳ ಕಾರ್ಯಕ್ರಮಗಳು, ಕವಿ ಸಮ್ಮೇಳನ, ಪ್ರಮುಖ ಕನ್ನಡಿಗರ ಸನ್ಮಾನ ಮತ್ತು ವಿವಿಧ ಮನರಂಜನೆ / ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಒಳಗೊಂಡ ಕಾರ್ಯಕ್ರಮಗಳು ಆಕರ್ಷಕ ಮತ್ತು ಭಾಗವಹಿಸುವಂತಿದ್ದವು. ಉಚಿತ ಊಟವೂ ಇತ್ತು. ನಾನು ಕೂಡ ಕೆಲವು ಬಾರಿ ನನ್ನ ಕನ್ನಡ ಕವಿತೆಗಳನ್ನು ಆ ಕಾರ್ಯಕ್ರಮಗಳಲ್ಲಿ ಪ್ರಸ್ತುತಪಡಿಸಿದ್ದೆ. ಒಂದು ವರ್ಷ ಅವರು ನನ್ನ ಕೊಡುಗೆಗಳನ್ನು ಗುರುತಿಸಿ ಒಬ್ಬ ಪ್ರಮುಖ ಕನ್ನಡಿಗ ಎಂದು ಸನ್ಮಾನಿಸಿದರು, ಆದರೂ ನಾನು ಎಷ್ಟು ಅರ್ಹನೆಂದು ನನಗೆ ತಿಳಿದಿಲ್ಲ, ಆದರೆ ಅದು ಅವರ ವಿಶಾಲ ಹೃದಯವನ್ನು ತೋರಿಸಿತ್ತು.


ಉಡುಪಿ ಕೃಷ್ಣ ಮಂದಿರ (ಸಫ್ದರ್‌ಜಂಗ್ ಎನ್‌ಕ್ಲೇವ್), ರಾಘವೇಂದ್ರ ಮಠ (ಮೋತಿ ಬಾಗ್) ಮತ್ತು ಶೃಂಗೇರಿ ಶಂಕರ ಮಠ (ವಸಂತ ವಿಹಾರ್) ನಂತಹ ದೆಹಲಿಯ ಕೆಲವು ಧಾರ್ಮಿಕ ಸ್ಥಳಗಳಲ್ಲಿ ಕನ್ನಡವನ್ನು ಕಾಣಬಹುದು. ಏಕೆಂದರೆ ಅವು ಅನೇಕ ಕನ್ನಡ ಭಕ್ತರನ್ನು ಆಕರ್ಷಿಸಿವೆ. ಪ್ರಸ್ತುತ ದೆಹಲಿ ಮತ್ತು ಎನ್‌ಸಿಆರ್ ಪ್ರದೇಶದ ವಿವಿಧ ಭಾಗಗಳಲ್ಲಿ (ಘಾಜಿಯಾಬಾದ್, ಫರೀದಾಬಾದ್, ಗುರುಗ್ರಾಮ, ನೋಯಿಡಾ) ಅನೇಕ ಕನ್ನಡ ಸಂಘಗಳಿವೆ, ಅವು ಸಾಕಷ್ಟು ಸಕ್ರಿಯವಾಗಿವೆ. ಆದರೆ ಎಲ್ಲಾ ದೆಹಲಿ ಕನ್ನಡಿಗರ ವಿವಿಧ ಚಟುವಟಿಕೆಗಳ ಮುಖ್ಯ ಕೇಂದ್ರವು ದೆಹಲಿ ಕರ್ನಾಟಕ ಸಂಘವಾಗಿದೆ.

1970 ರಿಂದ ಇಲ್ಲಿಯವರೆಗೆ ರಾಷ್ಟ್ರ ರಾಜಧಾನಿಯಲ್ಲಿ ಕನ್ನಡದ ಬಗ್ಗೆ ನನ್ನ ಅನುಭವ ಇದು. ಕಳೆದ ಕೆಲವು ದಶಕಗಳಲ್ಲಿ ಕನ್ನಡ ಚಟುವಟಿಕೆಗಳು ಹಲವು ಪಟ್ಟು ಬೆಳೆದಿವೆ ಎಂದು ನಾವೆಲ್ಲರೂ ಹೆಮ್ಮೆಪಡಬಹುದು ಮತ್ತು ಇದಕ್ಕೆ ಕಾರಣರಾದ ಎಲ್ಲರಿಗೂ ನಮ್ಮ ಕೃತಜ್ಞತೆಗಳು ಸಲ್ಲಲೇಬೇಕು. ❑


ಲೇಖಕರು :

**ಪ್ರೊ. ಎಸ್. ಶ್ರೀನಿವಾಸ ಮೂರ್ತಿ**

ಪೂರ್ವ ಪ್ರಾಧ್ಯಾಪಕರು ಐಐಟಿ ದೆಹಲಿ ಮತ್ತು ಮಾಜಿ ನಿರ್ದೇಶಕರು, ಎನ್‌ಐಟಿ, ಕರ್ನಾಟಕ, ಸುರತ್ಕಲ್

ಮಾನ್ಯರೇ,

2024-25ರ ಶೈಕ್ಷಣಿಕ ವರ್ಷದಲ್ಲಿ 10ನೇ ಮತ್ತು 12ನೇ ತರಗತಿಯಲ್ಲಿ ಶೇ. 80 ಮತ್ತು ಅದಕ್ಕಿಂತ ಹೆಚ್ಚು ಅಂಕ ಪಡೆದ ಹಾಗೂ 2024-25ರ ಸಾಲಿನಲ್ಲಿ ವಿಜ್ಞಾನ, ಕಲೆ, ವಾಣಿಜ್ಯ, ಇಂಜಿನಿಯರಿಂಗ್, ವೈದ್ಯಕೀಯ, ಫೈನ್ ಆರ್ಟ್ಸ್, ಕಾನೂನು ಮುಂತಾದ ವಿಷಯಗಳಲ್ಲಿ ಪದವಿಗಳನ್ನು ಪಡೆದಿರುವ ಸಂಘದ ಆಜೀವ ಸದಸ್ಯರ ಮಕ್ಕಳ ವಿವರವನ್ನು ಅಭಿಮತದ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಆದ್ದರಿಂದ, ಈ ಶೈಕ್ಷಣಿಕ ವರ್ಷದಲ್ಲಿ ಶೇ 80ಕ್ಕಿಂತ ಹೆಚ್ಚು ಅಂಕ ಗಳಿಸಿರುವ ಹಾಗೂ ಪದವೀಧರ(ರೆ)ಯಾಗಿರುವ ಸಂಘದ ಸದಸ್ಯರ ಮಕ್ಕಳ ಹೆಸರು, ಅಂಕಪಟ್ಟಿ, ಭಾವಚಿತ್ರ, ಪೋಷಕರ ಹೆಸರು ಮುಂತಾದ ವಿವರಗಳನ್ನು ದಿನಾಂಕ 20.08.2025ಕ್ಕಿಂತ ಮೊದಲು ಸಂಘದ ಕಛೇರಿಗೆ ಖುದ್ದಾಗಿ ಅಥವಾ ಸಂಘದ ಇಮೇಲ್ : dksangha@gmail.com ಗೆ ಕಳುಹಿಸಿಕೊಡಬೇಕಾಗಿ ವಿನಂತಿ.

**ಪ್ರಧಾನ ಕಾರ್ಯದರ್ಶಿ**




ದೆಹಲಿ ಕರ್ನಾಟಕ ಸಂಘದಲ್ಲಿ ನಡೆದ ಯೋಗ ದಿನಾಚರಣೆ ಸಂದರ್ಭದಲ್ಲಿ ಆರ್ಟ್ ಆಫ್ ಲಿವಿಂಗ್‌ನ ಕಾರ್ಯಕ್ರಮದ ಬ್ಯಾನರ್ ಅನಾವರಣಗೊಂಡ ದೃಶ್ಯ.

**ಕವನಗಳು**

# ನಮ್ಮ ಬೆಂಗಳೂರು....

**ನಮ್ಮ ಬೆಂಗಳೂರು, ನಮ್ಮ ಬೆಂಗಳೂರು, ಇದು ಮಹಾ ಬೆಂಗಳೂರು.**

ಕೆಂಪೇಗೌಡರು ಕಟ್ಟಿದಂತಾ ನಮ್ಮ ಊರು, ಇದು ಮೊದಲಿಗೆ ಆಗಿತ್ತು ಬೆಂದಕಾಳೂರು, ಈಗ ಆಗಿದೆ ಬೆಂಗಳೂರು.
ಸರಿಸಾಟಿನೇ ಇಲ್ಲ ಬೆಂಗಳೂರು Weather ಗೆ, ಮನಸೋತವ್ರೆ ಎಲ್ಲಾ ಇಲ್ಲಿರೋ Climate ಗೆ.
IT ಗೆ ಫೇಮಸ್ ಈ ಊರು, Traffic ಗೆ ಇಲ್ಲಿದೆ ಬಲು ಜೋರು,
ಚೆನ್ನೈನಲ್ಲಿ ಚಂಡಮಾರುತ, ಬೆಂಗಳೂರಿನಲ್ಲಿ ಮಳೆ ಸುರಿತ.
ಲಾಲ್‌ಬಾಗ್‌ನಲ್ಲಿ ಜೋರು ಹೂಗಳ ಜಾತ್ರೆ, ಇದನ್ನು ಹೀರಲು ಬರುತ್ತೆ ಜೇನುಗಳ ಯಾತ್ರೆ.
ಕಬ್ಬನ್ ಪಾರ್ಕಲ್ಲಿ ಮರಗಳ ಬೀಡು, ಇಲ್ಲಿ ಸಿಗುತ್ತೇ ಆಮ್ಲಜನಕದ ಗೂಡು.
ಕೆಂಪೇಗೌಡ ಏರ್‌ಪೋರ್ಟ್‌ನಲ್ಲಿ ಫ್ಲೈಟ್‌ಗಳ ಹಾರಾಟ, ಕಲಾಸಿಪಾಳ್ಯದಲ್ಲಿ ಸಿಗುತ್ತೆ ಚಾಕನ ಪರೋಟ.

**ನಮ್ಮ ಬೆಂಗಳೂರು, ನಮ್ಮ ಬೆಂಗಳೂರು, ಇದು ಮಹಾ ಬೆಂಗಳೂರು.**

ಪಿಸು ಪಿಸು ಮಾತು ಲಾಲ್‌ಬಾಗ್‌ನಲ್ಲಿ ಚುಮಚುಮ ವಾಕ್, ಕಬ್ಬನ್ ಪಾರ್ಕ್‌ನಲ್ಲಿ.
ಬಿಸಿ ಬಿಸಿ ಕಾಫಿ MTR ನಲ್ಲಿ, ಗರಿ ಗರಿ ದೋಸೆ CTR ನಲ್ಲಿ.
ಆ ಕಾಲದಲ್ಲಿ ಆಗಿತ್ತು Garden City, ಈ ಕಾಲದಲ್ಲಿ ಆಗ್ಬೈತೆ Concrete City.
ನಮ್ಮ Metro ಸರ್ವಿಸ್ ಬಲು ಚೆಂದ, ನಮ್ಮ ಕೆಂಪೇಗೌಡ್ರ
Statue ನೋಡಲು ಬಲು ಅಂದ.
ನಮ್ಮ ಅಣ್ಣಮ್ಮ ದೇವಿಯ ಉತ್ಸವ ಅಷ್ಟೇ ಅಂದ.
ನಮ್ಮ ಬೆಂಗಳೂರು ಕರಗ ನೋಡಲು ಬಲು ಚಂದ.

**ನಮ್ಮ ಬೆಂಗಳೂರು, ನಮ್ಮ ಬೆಂಗಳೂರು, ಇದು ಮಹಾ ಬೆಂಗಳೂರು.**

ವಿಧಾನ ಸೌದ ಕಟ್ಟಿದ್ರಯ್ಯ ಕೆಂಗಲ್ ಹನುಮಂತಯ್ಯ, 18ರ ಕಚೇರಿ ಕಟ್ಟಿದ್ರಯ್ಯ ಬ್ರಿಟೀಷರಯ್ಯ.
ಬ್ರಿಗೇಡ್ ರೋಡ್, ಎಂ.ಜಿ. ರೋಡ್, ಲವರ್ ರೋಡ್, ಮಾಗಡಿ ರೋಡ್, ಪೀಣ್ಯಾ ರೋಡ್, ವರ್ಕರ್ಸ್ ರೋಡ್,
ಕಾವೇರಿ ನದಿ ನೀರು ಕುಡಿಯೋಕಣ್ಣ, ಗಲೀಜು ನೀರೆಲ್ಲಾ ವೃಷಭಾವತಿ ನದಿಗಣ್ಣಾ.
ಆ ಕಾಲದಲ್ಲಿ ಆಗಿತ್ತು ಏಷ್ಯಾಗೆ ಯುಟಿಲಿಟಿ ಬಿಲ್ಡಿಂಗ್, ಈ ಕಾಲದಲ್ಲಿ ಆಗ್ಬೈತೆ ಗಗನ ಚುಂಬೋ ಬಿಲ್ಡಿಂಗ್.

**ನಮ್ಮ ಬೆಂಗಳೂರು, ನಮ್ಮ ಬೆಂಗಳೂರು, ಇದು ಮಹಾ ಬೆಂಗಳೂರು.**

ಅವರೆಕಾಯಿ ಪರ್ಸೆ, ಜನವರಿಯಲ್ಲಿ, ಕಡಲೆಕಾಯಿ ಪರ್ಸೆ, ನವೆಂಬರ್‌ನಲ್ಲಿ.
108 ಅಡಿ Statue ನಮ್ಮ ಕೆಂಪೇಗೌಡ್ರುದು, 60 40 ಸೈಟ್ ನಮ್ಮ BDA ದು.
ಜೇನು ಸಾಕೋ Training ಇದೆ GKVK ನಲ್ಲಿ, ವಿಮಾನ ಉತ್ಪಾದನೆ ನಮ್ಮ HAL ನಲ್ಲಿ.
Money Exchange ಮಾಡಬೇಕಾದ್ರೆ Lulu Mall ನಲ್ಲಿ Free Treatment ತಗೋಳಬೇಕಂದ್ರೆ Bowring, Victoria ಆಸ್ಪತ್ರೆಯಲ್ಲಿ.
Siteಗೆ ಫೇಮಸ್ Kempe Gowda Layout, Airportಗೆ ಫೇಮಸ್ Kempe Gowda Airport.
ನಗು ಮುಖದ ರಾಜಕುಮಾರ, ನಮ್ಮ ಪುನೀತ್ ರಾಜಕುಮಾರ್, ಎಲ್ಲರ ಹೃದಯ ಗೆದ್ದ ಕನ್ನಡದ ಕಣ್ಮಣಿ ಈ ಸರದಾರ.
ಕೈಚಾಚಿ ಬಂದೋರ್‌ಗೆಲ್ಲಾ ಅನ್ನ ನೀಡೋದು ನಮ್ಮ ಊರಣ್ಣ, ನಾಡು ನುಡಿ ಎಲ್ಲಾರ ಬೀಡು, ಈ ನಾಡಲ್ಲಿ ಕನ್ನಡ ಕಲೀರಣ್ಣ, ಕನ್ನಡ ಮಾತಾಡ್ರಣ್ಣ.

**ನಮ್ಮ ಬೆಂಗಳೂರು, ನಮ್ಮ ಬೆಂಗಳೂರು, ಇದು ಮಹಾ ಬೆಂಗಳೂರು.**

***ವೆಂಕಟೇಶ್ ಆರ್.ವಿ.***

## ನವ ವರುಷದ ಹರುಷದ ಆಗಮನ !

ವಿನಾಯಕನ ಕೃಪೆಯಿಂದ ವಿನಯ ವಿಶ್ವಾಸದಿಂದ ಸಂತಸದ ಹೊಸ
ವರುಷವನ್ನು ಹರುಷದಿಮದ ಸ್ವಾಗತಿಸೋಣ!
ಸುಮಧುರ ಭಾವನೆಗಳಿಂದ
ನಾವೆಲ್ಲರೂ ಸ್ವಾಗತಿಸೋಣ!
ಮನಃಪೂರ್ವಕವಾಗಿ ಸರ್ವರ ಯೋಗಕ್ಷೇಮ
ಸಂತೋಷದಾಯಕವಾಗಿರಲಿ ಎಂದು
ವಸು ನಾಮ ಸಂವತ್ಸರದ ಉತ್ಸವವೋತ್ಸವದೊಡನೆ ಆಚರಿಸೋಣ!
ರಗರಗದಲಿ ಆನಂದ ಲಹರಿ ಹರಿಯಲಿ
ಎನ್ನುತ್ತಾ ಸರ್ವೇ ಜನೋ ಸುಖಿನೋ
ಭವಂತು ಎಂದು ಪ್ರಾರ್ಥಿಸಿ ಶುಭ ಕೋರುವೆ.

***ಶ್ರೀಮತಿ ಡಾ. ಅಹಲ್ಯಾ ಚಿಂತಾಮಣಿ***

# ಆಹ್ಲಾದಕರ ಮುಂಬೈ ಮತ್ತು ಗೋವಾ ಪ್ರವಾಸಗಳ ಅದ್ಭುತ ಅನುಭವ



ದೇಶ ದೇಶದೊಳಗೆ ನಮ್ಮ ದೇಶ ಚಂದ, ಭಾರತದ ಉದ್ದಗಲಕ್ಕೂ ನಿಸರ್ಗದ ವಿಸ್ಮಯಕಾರಿ ಅನುಭವ ಪಡೆಯಬಹುದು. ವರ್ಷದಲ್ಲಿ ಕೆಲವು ಸಮಯ ಫ್ಯಾಮಿಲಿಯೊಂದಿಗೆ ಭಾರತ ಭ್ರಮಣ ಮಾಡಿದಾಗ ಮನಸ್ಸಿಗೆ ನೆಮ್ಮದಿ ಸಿಗುತ್ತದೆ. ನಾನು, ಪ್ರೇರಣ ಮತ್ತು ಅಧೋಕ್ಷಜ ಎಲ್ಲರೂ ನಿರ್ಧಾರ ಮಾಡಿ ಮುಂಬೈ ಮತ್ತು ಗೋವಾ ಸವಾರಿಗೆ ಹೊರಟೆವು. ಸುಮಾರು ವರ್ಷಗಳ ನಂತರ ಟ್ರೈನ್‌ನಲ್ಲಿ ಹೋಗಬೇಕೆಂದು ನಿರ್ಧರಿಸಿ ತೇಜಸ್ ರಾಜಧಾನಿ ಎಕ್ಸ್‌ಪ್ರೆಸ್‌ನಲ್ಲಿ ದೆಹಲಿಯಿಂದ ಮುಂಬೈಗೆ ಹೊರಟೆವು. ಸ್ವಚ್ಛವಾದ ನೂತನ ಮಾದರಿಯ ಕಂಪಾರ್ಟ್‌ಮೆಂಟ್‌ಗಳು ಸ್ವಚ್ಛವಾದ ಟಾಯ್ಲೆಟ್, ಚಾರ್ಜಿಂಗ್ ಪಾಯಿಂಟ್‌ಗಳು, ಒಂದಕ್ಕಿಂತ ಒಂದು ರುಚಿಯಾದ ವ್ಯಂಜನಗಳು ನಿಜಕ್ಕೂ ಅಚ್ಚರಿ ಮತ್ತು ಹೆಮ್ಮೆ ಮೂಡಿಸಿತು. ಅಂತರರಾಷ್ಟ್ರೀಯ ಮಟ್ಟದ ನಮ್ಮ ಟ್ರೈನ್‌ಗಳು ಯಾವುದಕ್ಕೂ ಕಮ್ಮಿ ಇಲ್ಲ.

ಮರುದಿನ ಬೆಳಿಗ್ಗೆ ಮುಂಬೈ ತಲುಪಿದೆವು. ಕನಸಿನ ನಗರ, ರಾಷ್ಟ್ರದ ಹಣಕಾಸಿನ ರಾಜಧಾನಿ, ವಾಣಿಜ್ಯ ನಗರ, The city that never sleeps. ಯಾವುದೇ ಜಾಗಕ್ಕೆ ಭ್ರಮಣ ಮಾಡಲು ಹೋದಾಗ ನಾವು ಇಳಿದುಕೊಳ್ಳುವ ಜಾಗ ಹೀಗಿರಬೇಕೆಂದು ನಿರ್ಧರಿಸುತ್ತದೆ. ಫ್ಯಾಮಿಲಿ ರೂಮ್ ಮತ್ತು ಡೀಸೆಂಟ್ ಏರಿಯಾ ಮುಖ್ಯವಾದದ್ದು. ಅದರಂತೆ ನಾವು ಮೊದಲೇ ಬುಕ್ ಮಾಡಿದ ರೂಮ್‌ಗೆ ಹೋಗಿ ಫ್ರೆಶ್ ಆಗಿ ನಿಗದಿ ಪಡಿಸಿದ್ದ ವಾಹನದಲ್ಲಿ ಸುತ್ತಲು ಹೊರಟೆವು. ನಿರ್ವಿಘ್ನ ದರ್ಶನ ಮಾಡಲು ಸಿದ್ಧಿವಿನಾಯಕ ಮಂದಿರಕ್ಕೆ ಹೋದಾಗ ವಿಪರೀತ ಜನಸಂದಣಿ ನೋಡಿ VVIP Darshan ನಲ್ಲಿ ದರ್ಶನ ಮಾಡಿದೆವು. ನಮ್ಮ ಭ್ರಮಣ ಸಫಲವಾಗಲೆಂದು ಬೇಡಿಕೊಂಡೆವು. ಅನಂತರ ಮಹಾಲಕ್ಷ್ಮಿ ಮಂದಿರ, JUHU ISKCON ನಲ್ಲಿ ದರ್ಶನ ಮಾಡಿಕೊಂಡು JUHU CHOWPATY ಸೇರಿದೆವು.




ಮುಂಬೈ ನಗರಕ್ಕೆ Floating Population ಜಾಸ್ತಿ. ದೇಶದ ಎಲ್ಲಾ ಜಾಗಗಳಿಂದಲೂ ಜನಗಳು ಬರುತ್ತಾರೆ. ವಿದೇಶಿ ಪ್ರವಾಸಿಗರು ಸಹ ವಿಪರೀತ. ಚೌಪಾಟಿ ಸಂಜೆಯ ಹೊತ್ತು ನೋಡಬೇಕಾದ ಸ್ಥಳ. ಆ ಜಾಗದಲ್ಲಿ ಭೇಲ್‌ಪುರಿ, ಸೇವ್‌ಪುರಿ, ವಡಾ ಪಾವ್, ಪಾವ್ ಭಾಜಿ ತಿನ್ನಲು ಕಾಯುತ್ತಿರುತ್ತಾರೆ. ಇಡೀ ಮುಂಬೈನಲ್ಲಿ ಓಡಾಡಲು ಲೋಕಲ್ ಟ್ರೈನ್, ಮೆಟ್ರೋ ಟ್ರೈನ್, ಟ್ಯಾಕ್ಸಿ, ಮೊನೋರೈಲ್ ಮತ್ತು ಕೆಲವೊಂದೆಡೆ ಆಟೋ ಸಹ ಉಪಯೋಗಿಸಬಹುದು. ಸಂಜೆ ನಮ್ಮಲ್ಲಿ ಸಮಯ ಇದ್ದಿದ್ದರಿಂದ ಮತ್ತು ಪರಿಚಯದ ಚಾಲಕನಿದ್ದ ಕಾರಣ ಬೆಳ್ಳಿ ಪರದೆಯ ನಾಯಕರಾದ ಅಮಿತಾಬ್ ಬಚ್ಚನ್, ಶಾರೂಖ್ ಖಾನ್, ರೇಖಾ, ಉದ್ಯೋಗಪತಿ ಅಂಬಾನಿ ಮನೆಯನ್ನು ನೋಡುವ ಅವಕಾಶ ಸಿಕ್ಕಿತು. Essel World ಮಕ್ಕಳಿಗೆ Entertainment Park, Elephanta Caves ನೋಡಬೇಕಾದರೆ ನೀರಿನಲ್ಲಿ ಹಡಗಿನ ಮೂಲಕ ಹೋಗಬಹುದು. ಮಕ್ಕಳಿಗೆ Tarapura Aquarium and Nehru Planetarium ನೋಡಬೇಕಾದ ಜಾಗ.

ನಮ್ಮ ಮುಂದಿನ ಪಯಣ ಎಲ್ಲರ ಕನಸಿನ ಫಿಲ್ಮ್ ಸಿಟಿ ಆಗಿತ್ತು. 1200/– ರೂ. ಕೊಟ್ಟು ಸ್ಲಾಟ್ ಬುಕ್ ಮಾಡಿಕೊಂಡರೆ, ಅವರೇ ತಮ್ಮ ಬಸ್ಸುಗಳಲ್ಲಿ ಇಡೀ ಫಿಲ್ಮ್ ಸಿಟಿ ತೋರಿಸುತ್ತಾರೆ. ಲೈವ್ ಶೂಟಿಂಗ್ ನೋಡುವ ಚಾನ್ಸ್‌ಗಳು ಸಿಕ್ಕಿತು. 7D Movie ತೋರಿಸುತ್ತಾರೆ. ಹಿಂದೆ ಚಿತ್ರಗಳಲ್ಲಿ ಬಳಸಲಾದ ಉಡುಪುಗಳು ಸಂಗ್ರಹಿಸಿದ್ದು, ಅದನ್ನು ಧರಿಸುವ ಅವಕಾಶಕೊಟ್ಟರು. ಒಂದು ರೀತಿಯಲ್ಲಿ ವಿಸ್ಮಯಕಾರಿ ಹಾಗು ಮುದ ನೀಡುವ ಜಾಗ ಅಂದರೆ ತಪ್ಪಾಗಲಾರದು. ಅಲ್ಲಿಂದ ಮುಂಬೈ ಕೋಸ್ಟಲ್ ಅಂಡರ್ ಗ್ರೌಂಡ್‌ನಲ್ಲಿ ಹೋದಾಗ Engineering Marvel ಅಂತಾನೇ ಹೇಳಬಹುದು. ಒಂದೆಡೆ ಉದ್ದಗಲದ ಅರಬ್ಬಿ ಸಮುದ್ರ ಅಂತಹ ಸ್ಥಳದಲ್ಲಿ ನಿಂತು ಸೂರ್ಯನ ಉದಯ ಮತ್ತು ಅಸ್ತ ನೋಡಲು ಎರಡು ಕಣ್ಣು ಸಾಲದು. ಇತ್ತೀಚೆಗೆ ಶುರು ಮಾಡಿದ Worli-Bandra Sea Link ಮೈ ನವಿರೇಳಿಸುತ್ತದೆ. Goregaon Chowpatty Mumbai ನಲ್ಲಿ ಗಣೇಶನನ್ನು ವಿಸರ್ಜನೆ ಮಾಡುವ ಜಾಗ, ಅದರ ದಡದಲ್ಲಿ ಆರಾಮವಾಗಿ ಚಾರಪಾಯಿ ಹಾಸಿ, ಕೈಯಲ್ಲಿ ಚಹಾ ಕುಡಿಯುತ್ತಾ ಸಮುದ್ರ ನೋಡುವ ಮಜಾನೇ ಬೇರೆ.

Haji Ali ಇನ್ನೊಂದು ಪ್ರಕೃತಿಯ ವಿಸ್ಮಯ, ಸುಮಾರು ಸಮುದ್ರ ಮಧ್ಯದ ತನಕ ಸೇತುವೆ ಮೇಲೆ ನಡೆದುಕೊಂಡು ಹೋಗಬೇಕು, ಎರಡೂ ಕಡೆಯಿಂದ ಸಮುದ್ರದ ಅಲೆಯು ಸೇತುವೆಗೆ ಹೊಡೆದು ನಮ್ಮ ಮೇಲೆ ಬೀಳುವುದನ್ನು ಅನುಭವಿಸಿ ನೋಡಬೇಕು. ಗೇಟ್ ವೇ ಆಫ್ ಇಂಡಿಯಾ ನೋಡಿದಾಗ ಆಶ್ಚರ್ಯವೆನಿಸಿದರೂ ಬ್ರಿಟೀಷರು ಮಾಡಿದ ದಬ್ಬಾಳಿಕೆಯು ಕಣ್ಣ ಮುಂದೆ ಬರುತ್ತೆ. ಈಗ ನಮ್ಮ ಸ್ವತಂತ್ರ ಭಾರತದಲ್ಲಿರುವುದರಿಂದ ಅದರ ಸುಂದರತೆ ಸವಿಯಬೇಕು. ಗೇಟ್ ವೇ ಆಫ್ ಇಂಡಿಯಾ ಹಿಂದೆ ನಿಂತಿರುವ ಬೃಹತ್ ತಾಜ್ ಹೋಟೆಲ್ ನೋಡಿದಾಗ ಹೆಮ್ಮೆ ಆಗುತ್ತದೆ. ಅಂತಹ ಸುಂದರ ಕಟ್ಟಡವನ್ನು ಹಾಳು ಮಾಡಲು ಹೊರಟಿದ್ದ ಆತಂಕವಾದಿಗಳ ಮೇಲೆ ಕೋಪವು ಬರುತ್ತದೆ. ರಿಲಯನ್ಸ್ ಕಂಪನಿಯ ಜಿಯೋ ಮಾರ್ಟ್, JIO Connection Outlet ನ ಆಧುನಿಕತೆ ನೋಡಿದಾಗ ನಮ್ಮ ದೇಶ ಎಷ್ಟು ಮುಂದುವರಿಯುತ್ತಿದೆ ಎಂದು ಹೆಮ್ಮೆ ಪಡಬೇಕಾಗುತ್ತದೆ.

ಪಯಣದ ಮೂರನೆಯ ದಿವಸ ನಾರಿಮನ್ ಪಾಯಿಂಟ್ ಮೆರಿನ್ ಡ್ರೈವ್ ಆಗಿತ್ತು. ಜೀವನದ



ತೊಂದರೆಗಳು, ಆತಂಕಗಳು ಎಲ್ಲವನ್ನು ತೊರೆದು ದಡದ ಮೇಲೆ ಕುಳಿತು ಜೀವನ ಆನಂದಿಸುತ್ತಿದ್ದ ನೂರಾರು ಜನಗಳ ನಡುವೆ ನಾವು ಇದ್ದೆವು. ದೆಹಲಿಯಲ್ಲಿ ವಾಸಿಸುವ ನಮ್ಮಂತವರಿಗೆ ಸಮುದ್ರದ ಪರಿಚಯವೇ ಇಲ್ಲದಿರುವಾಗ ವಿಶಾಲ ಸಮುದ್ರ ನೋಡಿದಾಗ ಅಹ್ಲಾದಕರ ಅನುಭವ ನೀಡುತ್ತದೆ. ಮುಂಬೈಯಲ್ಲಿನ ವೇಷಭೂಷಣ ಜನಗಳ ಸಂಸ್ಕೃತಿ ಎಷ್ಟೋ ವಿಧದಲ್ಲಿ ಕರ್ನಾಟಕ ಶೈಲಿಯನ್ನು ಪ್ರತಿಬಿಂಬಿಸುತ್ತದೆ. ಮುಂಬೈ ಗಣಪತಿಗಳಲ್ಲಿ ಲಾಲ್‌ಬಾಗ್ ಗಣಪತಿ ಪ್ರಮುಖ ಸ್ಥಾನ ಹೊಂದಿದೆ. ಅದನ್ನು ಸ್ಥಾಪಿಸುವ ಜಾಗವನ್ನು ನೋಡುವ ಪುಣ್ಯ ನಮ್ಮದಾಗಿತ್ತು. 2025ರ ಗಣಪತಿ ಪೂಜೆಯ ತಯಾರಿ ನಾವು ಹೋಗಿದ್ದ ದಿನವಾದ್ದರಿಂದ ಆ ಪೂಜೆಯ ಭಾಗ್ಯವು ನಮ್ಮದಾಗಿತ್ತು. ಕೇವಲ ನಾಲ್ಕು ದಿನಗಳ ನಮ್ಮ ಮುಂಬೈ ಪ್ರವಾಸ ಮುಗಿದಿದ್ದೇ ಗೊತ್ತಾಗಲಿಲ್ಲ.

**ಗೋವಾ ಪ್ರವಾಸ:**

ಮುಂಬೈನ ಛತ್ರಪತಿ ಶಿವಾಜಿ ಮಹಾರಾಜ್ ಟರ್ಮಿನಲ್ (CSMT) ನಿಂದ ಬೆಳಿಗ್ಗೆ 5.30 ಕ್ಕೆ ವಂದೇ ಭಾರತ್ ಎಕ್ಸ್‌ಪ್ರೆಸ್‌ನಲ್ಲಿ ನಮ್ಮ ಗೋವಾ ಪ್ರಯಾಣ ಶುರು ಆಯ್ತು. ಬಹು ಚರ್ಚಿತ ಈ ಟ್ರೈನ್ ಹೆಸರಿಗೆ ತಕ್ಕಂತೆ ಉತ್ತಮವಾಗಿದೆ. ರಿವಾಲ್ವಿಂಗ್ ಚೇರ್ಸ್ ಸಹ ಇರುವುದರಿಂದ ಎಲ್ಲಿ ಬೇಕಾದರೂ ಕುಳಿತಲ್ಲೇ ತಿರುಗಬಹುದು. ಕೊಂಕಣ್ ರೈಲ್ವೇ ಕೋರಿಡೋರ್ ವಿಶ್ವ ಪ್ರಸಿದ್ಧವಾದದ್ದು. ಚಲಿಸುವ ಟ್ರೈನ್ ಕಿಟಕಿಯಿಂದ ನೋಡುವಾಗ ನಿಸರ್ಗದ ನವರಸಗಳು ಕಾಣುತ್ತವೆ. ಸುಂದರವಾದ ಕಂಟ್ರಿಸೈಡ್ ದರ್ಶನ, ನದಿ, ಸಮುದ್ರ, ಫಾಲ್ಸ್‌ಗಳು, ಬೆಟ್ಟ, ಹಲವಾರು ಚಿಕ್ಕ, ದೊಡ್ಡ ಟನೆಲ್‌ಗಳು ನೋಡಿದಾದ ಸ್ವರ್ಗ ದರ್ಶನ ಅಂದರೆ ತಪ್ಪಾಗದು. ನಮ್ಮ ಭಾರತದಲ್ಲಿ ಇರುವಷ್ಟು ನಿಸರ್ಗ ಸೌಂದರ್ಯ ಎಲ್ಲೂ ಸಿಗದು. ಮಧ್ಯಾಹ್ನದ ಹೊತ್ತಿಗೆ ಗೋವಾ ಮಡ್‌ಗಾಂವ್ ಸ್ಟೇಶನ್ ತಲುಪಿದೆವು. ಮಳೆಯೊಂದಿಗೆ ನಮ್ಮ ಸ್ವಾಗತ, ರೋಚಕ ಅನುಭವ, ಗೋವಾ ಕೇವಲ 40 ಚದರ ಕಿ.ಮೀ ನಲ್ಲಿದ್ದರೂ ಸಹ, ರಸ್ತೆಗಳನ್ನು ತುಂಬಾ ಸ್ವಚ್ಛವಾಗಿ ಮೆಯಿನ್‌ಟೇನ್ ಮಾಡಿದ್ದಾರೆ.

ಗೋವಾದಲ್ಲಿ ಸುಮಾರು 35 ವಿಶಿಷ್ಟ ಬೀಚ್‌ಗಳನ್ನು ನೋಡಬಹುದು. ಕೇವಲ ಸಮುದ್ರದ ಆನಂದ ಪಡೆಯಬೇಕೆಂದರೆ ಸೌತ್ ಗೋವಾ ಪ್ರಸಿದ್ಧಿ ಹೊಂದಿದೆ. Palolem, Majorda, Colva, Varca, Benaulim, Cavelossim ಕೆಲವು ಪ್ರಸಿದ್ಧ ಸೌತ್ ಗೋವಾ ಬೀಚ್‌ಗಳು. ಇಡೀ ಗೋವಾ ನೋಡಬೇಕೂ, ಆನಂದಿಸಬೇಕು ಅಂದರೆ ಒಂದು ವಾರ ಕನಿಷ್ಠ ಬೇಕಾಗುತ್ತದೆ. ಡಾನ್ಸ್, ಮ್ಯೂಸಿಕ್ ಜನಗಳ ಸಂಗಡ ಎಂಜಾಯ್ ಮಾಡಬೇಕೆಂದರೆ ನಾರ್ತ್ ಗೋವಾ ಬೀಚ್‌ಗಳು ಪ್ರಸಿದ್ಧವಾಗಿದೆ. Calangute, Baga,





Anjuna Beach ಗಳು ಹೆಸರು ಪಡೆದಿವೆ. ಗೋವಾದಲ್ಲಿ ಅತಿ ದೊಡ್ಡ ಬೀಚ್ Calangute ಬೀಚ್. ಅದರ ದಡದಲ್ಲೇ ರೂಮ್ ಮಾಡಿಕೊಂಡು ತಂಗುವ ಭಾಗ್ಯ ನಮ್ಮದಾಗಿತ್ತು. ಅಲೆಗಳ ಶಬ್ಧ, ತೆಂಗಿನ ಮರಗಳ ಸಾಲುಗಳ ಮಧ್ಯೆ ಗೋವಾ ಉಡುಪುಗಳಾದ ಶಾರ್ಟ್ಸ್, ಟಿ-ಶರ್ಟ್, ಚಪ್ಪಲಿ ಹಾಕಿಕೊಂಡು ಸಮುದ್ರ ದಡಕ್ಕೆ ಹೋದಾಗ ಮೈ ನವಿರೇಳಿಸುವ ಅನುಭವ, ನಿರಂತರವಾಗಿ ಆಯಾಸವಿಲ್ಲದೆ ಬರುವ ಅಲೆಗಳು, ನೋಡಿದಷ್ಟೂ ಉದ್ದಕ್ಕೂ ಕಾಣುವ ಸಮುದ್ರ, ಮಕ್ಕಳು ಅನೇಕ ಆಕಾರಗಳನ್ನು ಮರಳಿನಲ್ಲಿ ಮಾಡುತ್ತಿದ್ದರು. ಚಹ, ಭೇಲ್‌ಪುರಿ ಮಾರುವವರು ತಿರುಗಾಡುತ್ತಿದ್ದರು. ಸಮುದ್ರದ ದಡ ಬಿಟ್ಟು ನೀರಿನ ಮಧ್ಯೆ ಹೋಗಲು ಪ್ರಯತ್ನಿಸುವ ಜನರನ್ನು ನಿಯಂತ್ರಣಗೊಳಿಸುತ್ತಿದ್ದ ಆರಕ್ಷಕರನ್ನು ನೋಡಿದಾಗ ಮಾತ್ರ ಅದರ ಅನುಭವ.

ಸಂಜೆ ಆಗುತ್ತಿದ್ದಂತೆ ದಡದ ಮೇಲಿನ ಹೋಟೆಲ್‌ಗಳಲ್ಲಿ ರಂಗು ರಂಗಿನ ದೀಪಗಳು ಬೆಳಗುತ್ತದೆ. ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾರೆ. ದೇಶ, ವಿದೇಶಗಳ ಪ್ರವಾಸಿಗರು ಮೈಮರೆತು ಅದರಲ್ಲಿ ಪಾಲ್ಗೊಂಡು ಹರ್ಷ ಪಡೆಯುತ್ತಾರೆ. ರಾತ್ರಿ ಮಲಗಿದ್ದರೂ ಸಹ ಅಲೆಯ ಸಪ್ಪಳ, ಮರಗಳ ಹಿತಕರವಾದ ಗಾಳಿ ತುಂಬಾ ಮುದ ನೀಡುತ್ತದೆ. ಗೋವಾದಲ್ಲಿ ವಿಶಿಷ್ಟವೆಂದರೆ ಚರ್ಚ್‌ಗಳು, ಪೋರ್ಚ್‌ಗೀಸರಿಂದ ಸ್ವಾತಂತ್ರ್ಯ ಪಡೆದಿದ್ದರೂ ಸಹಾ ಪೋರ್ಚುಗಲ್ ಸಂಸ್ಕೃತಿ ಈಗಲೂ ಕಾಣಬಹುದು. ಪೋರ್ಚುಗೀಸರ ವ್ಯಂಜನ ಇಷ್ಟ ಪಡುವವರಿಗೆ ಅನೇಕ ಪೋರ್ಚುಗೀಸ್ ರೆಸ್ಟೋರೆಂಟ್ ಸಿಗುತ್ತದೆ.

ಗೋವಾದಲ್ಲಿ Aguada Fort ನೋಡಲೇಬೇಕಾದ ಜಾಗ. ಅಷ್ಟು ಎತ್ತರದ ಗೋಡೆಯ ಮೇಲೆ ನಿಂತಿದ್ದರೂ ಸಹ ಸಮುದ್ರದ ಅಲೆಗಳು ಗೋಡೆಗೆ ಅಪ್ಪಳಿಸಿ ಸುಮಾರು 100 ಮೀ. ಗೋಡೆಯನ್ನು ದಾಟಿ ಜನಗಳ ಮೇಲೆ ಸಮುದ್ರದ ನೀರು ಬೀಳುತ್ತದೆ. ಯುನೆಸ್ಕೋದಿಂದ ಮಾನ್ಯತೆ ಪಡೆದಿರುವ ಒಂದು ಜಾಗ ರಾಜಧಾನಿ Panjimನ Fountainhas ಅನ್ನುವ ಸ್ಥಳ. ಇಡೀ ಜಾಗ ವರ್ಣ ರಂಜಿತ ಮನೆಗಳಿಂದ ಅಲಂಕರಿಸಿದೆ. ದೀಪಾವಳಿ ಹಬ್ಬದ ಅನುಭವ ಆಗುತ್ತದೆ. ಪೋರ್ಚುಗೀಸ್ ಕಲ್ಚರ್ ಎದ್ದು ಕಾಣಿಸುತ್ತದೆ. ಗೋವಾದಲ್ಲಿ ಪ್ರಸಿದ್ಧವಾದ ವಸ್ತುವೆಂದರೆ ಡ್ರೈ ಫ್ರೂಟ್ಸ್. ಇಡೀ ನಗರದಲ್ಲಿ ಎಲ್ಲಾ ರಸ್ತೆಗಳಲ್ಲೂ ಸಿಗಬಹುದಾದ ವಸ್ತುವೆಂದರೆ ಡ್ರೈ ಫ್ರೂಟ್ಸ್. ಅದರಲ್ಲೂ ಸಹ ಖಾಜು ಫ್ಯಾಕ್ಟರಿಗಳು ತುಂಬಾ ಇವೆ. ಸಂಜೆಯ ಹೊತ್ತು CRUISE RIDE ಮಾಡಲು



ಇಚ್ಛಿಸುವವರಿಗೆ ಸುಮಾರು ಅವಕಾಶಗಳು ಸಿಗುತ್ತದೆ. ರೂ 1200 per head ಅಂತೆ ಹೋದರೆ, ಹಡಗಿನಲ್ಲಿ ಸುತ್ತಬಹುದು. ಊಟ ಸಿಗುತ್ತದೆ. ಅಲ್ಲಿಯೂ ಸಹ ಹಾಡು, ಕುಣಿತದಲ್ಲಿ ಪಾಲ್ಗೊಳ್ಳಬಹುದು, ಕ್ಯಾಸಿನೋ ಪ್ರಿಯರಿಗೆ ಸಹ ಎಲ್ಲಾ ಸೌಲಭ್ಯಗಳು ಇವೆ.

ಗೋವಾವನ್ನು ತಲುಪಲು ಎರಡು ಏರ್‌ಪೋರ್ಟ್‌ಗಳಿವೆ. ಮಾಪದಲ್ಲಿರುವ ಮನೋಹರ್ ಇಂಟರ್‌ನ್ಯಾಷನಲ್ ಏರ್‌ಪೋರ್ಟ್ ಮತ್ತು ದಬೋಲಿಮ್‌ನಲ್ಲಿರುವ ಗೋವಾ ಇಂಟರ್‌ನ್ಯಾಷನಲ್ ಏರ್‌ಪೋರ್ಟ್, ಟ್ರೈನ್‌ನಲ್ಲಿ ಬರುವವರಿಗೆ ಮಡಗಾಂವ್ ಮತ್ತು ವಾಸ್ಕೋ (ಸೌತ್ ಗೋವಾ) ಮತ್ತು ಕರ್ಮಾಲಿ (ನಾರ್ತ್ ಗೋವಾ) ರೈಲ್ವೇ ಸ್ಟೇಶನ್‌ಗಳಿವೆ. ಹಾಗೆಯೇ ದೊಡ್ಡ ಬಂದರು Mormugoa Port ಇದೆ ಮುಂಬೈ ನಿಂದ Cruise Shipನಲ್ಲಿ ಮಾರ್ಮಗೋವ ಸೀ ಪೋರ್ಟ್‌ಗೆ ಬಂದಿಳಿಯಬಹುದು. ಸುಂದರ ಪ್ರದೇಶ ಗೋವಾದಲ್ಲಿ ಮೂರು ದಿನಗಳು ಕಳೆದದ್ದು ತಿಳಿಯಲೇ ಇಲ್ಲ, ಗೋವಾದಿಂದ ಮರು ಪ್ರಯಾಣ ವಿಮಾನದಲ್ಲಿ ಹೊರಟು ದೆಹಲಿ ಏರ್‌ಪೋರ್ಟ್‌ನಲ್ಲಿ ಲ್ಯಾಂಡ್ ಆದಾಗ ಒಂದು ರೀತಿಯ ಡಿಪ್ರೆಶನ್ ಕಾಡಿತು. ಜೀವನದ ಹಿಗ್ಗಾಟ, ಮುಗ್ಗಾಟ, ಎಲ್ಲವನ್ನು ತೊರೆದು, ವಿಶಾಲ ಸಮುದ್ರ ದಡದಲ್ಲಿ ಅಲೆಗಳ ಜೊತೆಗೆ ಆಟ ಆಡಿಕೊಂಡು ಜೀವನ ಕಳೆದರೆ ಎಷ್ಟು ಸೊಗಸು ಅನಿಸುತ್ತಿದೆ. ❑


***ವೆಂಕಟೇಶ್ ಎಂ.ವಿ.***

# ತಲೆ ಹಾಗೂ ಗಂಟಲಿನ ಕ್ಯಾನ್ಸರ್ ಬಗ್ಗೆ ಜಾಗೃತಿ

**1. ಪರಿಚಯ**–ತಲೆ ಹಾಗೂ ಗಂಟಲಿನ ಕ್ಯಾನ್ಸರ್‌ಗಳು (Head & Neck Cancers-HNCs) ಬಾಯಿಯ ಕುಹರ (ಓರಲ್ ಕ್ಯಾವಿಟಿ), ಗಂಟಲಕುಳಿ (ಫ್ಯಾರಿಂಜ್), ಧ್ವನಿಪೆಟ್ಟಿಗೆ (ಲಾರಿಂಜ್), ಮೂಗಿನ ಕುಹರ (ನಾಸಲ್ ಕ್ಯಾವಿಟಿ), ಲಾಲಾರಸ ಗ್ರಂಥಿಗಳು ಮತ್ತು ಥೈರಾಯ್ಡ್ ಪ್ರದೇಶದ ಅಂಗಾಂಶಗಳಲ್ಲಿ ಉದ್ಭವಿಸುವ ವೈವಿಧ್ಯಮಯ ಮಾರಕ ಕ್ಯಾನ್ಸರುಗಳ ಗುಂಪನ್ನು ಉಲ್ಲೇಖಿಸುತ್ತವೆ. ಭಾರತದಲ್ಲಿ, ಜೀವನಶೈಲಿ ಅಭ್ಯಾಸಗಳು, ಸಾಂಸ್ಕೃತಿಕ ಅಭ್ಯಾಸಗಳು ಮತ್ತು ಆರೋಗ್ಯದ ಸಾಮಾಜಿಕ ನಿರ್ಣಾಯಕ ಅಂಶಗಳ ಪರಸ್ಪರ ಕ್ರಿಯೆಯಿಂದಾಗಿ ಈ ಕ್ಯಾನ್ಸರ್‌ಗಳು ಸಾರ್ವಜನಿಕ ಆರೋಗ್ಯಕ್ಕೆ ಗಮನಾರ್ಹ ಸವಾಲನ್ನು ಒಡ್ಡುತ್ತವೆ. ಈ ಸನ್ನಿವೇಶವು ವಿಶೇಷವಾಗಿ ಸಂಕೀರ್ಣವಾಗಿದೆ. ಏಕೆಂದರೆ HNC ಗಳು ಹೆಚ್ಚಾಗಿ ಸ್ಕ್ವಾಮಸ್ ಸೆಲ್ ಕಾರ್ಸಿನೋಮದ ತೀವ್ರ ಮತ್ತು ಆಕ್ರಮಣಕಾರಿ ರೂಪಗಳನ್ನು ಒಳಗೊಂಡಿರುತ್ತವೆ ಮತ್ತು ಸಾಮಾನ್ಯವಾಗಿ ತಡವಾಗಿ ಪತ್ತೆಯಾದ ಪರಿಣಾಮದಿಂದಾಗಿ ದೊಡ್ಡ ಸಮಸ್ಯೆ ಆಗುತ್ತದೆ. ದೇಶವು ಹೆಚ್ಚುತ್ತಿರುವ ಕ್ಯಾನ್ಸರ್ ಭಾರವನ್ನು ಎದುರಿಸುತ್ತಿರುವ ಸಂದರ್ಭದಲ್ಲಿ, ಸಾಂಕ್ರಾಮಿಕ ರೋಗಶಾಸ್ತ್ರ (ಎಪಿಡೆಮಿಯಾಲಜಿ) ಮತ್ತು ರೋಗದ ಚಿಕಿತ್ಸಾ ವಿಧಾನಗಳಲ್ಲಿನ ಹೊಸತನವನ್ನು ಅರ್ಥಮಾಡಿಕೊಳ್ಳುವುದು ಆರೋಗ್ಯ ಸೇವಾ ಒದಗಿಸುವವರು ಮತ್ತು ನೀತಿ ರೂಪಿಸುವವರಿಗೆ ನಿರ್ಣಾಯಕವಾಗುತ್ತದೆ ಮತ್ತು ಅತ್ಯವಶ್ಯಕವಾಗಿದೆ.

**2. ಘಟನೆ/ ಸಂಭಾವ್ಯತೆ:** ಭಾರತವು ಜಾಗತಿಕವಾಗಿ ತಲೆ ಮತ್ತು ಕಂಠ ಕ್ಯಾನ್ಸರುಗಳಲ್ಲಿನ ಅತ್ಯಧಿಕ ಭಾರವನ್ನು ಹೊಂದಿದೆ. ಗ್ಲೋಬೊಕನ್ (GLOBOCAN) ಸೇರಿದಂತೆ ವಿವಿಧ ಅಂಕಿಅಂಶಗಳಿಂದ ತಿಳಿಯುವಂತೆ, ಈ ಕ್ಯಾನ್ಸರುಗಳ ಸಂಭವನ ಪ್ರಮಾಣ ಗಮನಾರ್ಹವಾಗಿ ಹೆಚ್ಚಾಗಿದೆ ಎಂದು ಸೂಚಿಸುತ್ತದೆ, ಇದರಲ್ಲಿ ತುಟಿ ಮತ್ತು ಬಾಯಿಯ ಕುಹರದ ಕ್ಯಾನ್ಸರ್‌ಗಳು ಹೆಚ್ಚು ಪ್ರಚಲಿತ ಉಪವಿಭಾಗವಾಗಿವೆ. ಈ ಕ್ಯಾನ್ಸರ್‌ಗಳ ವಯಸ್ಸು-ನಿರ್ಣಯಿತ ಪ್ರಮಾಣಗಳು (ASR) ಮಹಿಳೆಯರಿಗಿಂತ ಪುರುಷರಲ್ಲಿ ಗಮನಾರ್ಹವಾಗಿ ಹೆಚ್ಚಿವೆ. ಇದು ತಂಬಾಕು ಬಳಕೆಯಲ್ಲಿನ ಸಾಮಾಜಿಕ ಮಾದರಿಗಳು ಮತ್ತು ಇತರ ಅಪಾಯಕಾರಿ ನಡವಳಿಕೆಗಳನ್ನು ಪ್ರತಿಬಿಂಬಿಸುತ್ತದೆ. ಇತ್ತೀಚಿನ ವಿಶ್ಲೇಷಣೆಗಳು ಈ ಮಾರಕ ಕಾಯಿಲೆಗಳ ಸಂಭವ ಪ್ರಮಾಣವು ಸತತವಾಗಿ ಹೆಚ್ಚುತ್ತಿದೆ ಮತ್ತು ಪರಿಣಾಮಕಾರಿ ಹಸ್ತಕ್ಷೇಪವಿಲ್ಲದೆ, ಮುಂಬರುವ ದಶಕಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಬಹಳಷ್ಟು ಹೆಚ್ಚಾಗಬಹುದು ಎಂಬ ಮುನ್ಸೂಚನೆ ನೀಡಿವೆ.



**ಲೇಖಕರು : ಡಾ. ನಿರಂಜನ್ ನಾಯ್ಕ್**
**ಎಂಬಿಬಿಎಸ್, ಎಂಎಸ್ (ಜನರಲ್ ಸರ್ಜರಿ)**
**ಸರ್ಜಿಕಲ್ ಒಂಕಾಲಜಿ** (BRAIRCH, AIIMS)
**ಸೀನಿಯರ್ ಡೈರೆಕ್ಟರ್-ಸರ್ಜಿಕಲ್ ಒಂಕಾಲಜಿ ಮತ್ತು ರೋಬೋಟಿಕ್ ಸರ್ಜನ್**
**ಫೋರ್ಟಿಸ್ ಮೆಮೋರಿಯಲ್ ರಿಸರ್ಚ್ ಇನ್ಸ್ಟಿಟ್ಯೂಟ್** (FMRI), **ಗುರುಗ್ರಾಮ, ಹರಿಯಾಣ**
(**ಮೊ.**) 9810203273
**ಇಮೇಲ್ :** bniranjan29@gmail.com

**3. ಕಾರಣಗಳು:** ಭಾರತದಲ್ಲಿ ತಲೆ ಮತ್ತು ಕುತ್ತಿಗೆ ಕ್ಯಾನ್ಸರ್‌ಗಳಿಗೆ ಪ್ರಮುಖ ಕಾರಣಗಳು ಜೀವನಶೈಲಿ ಮತ್ತು ಪರಿಸರ ಸಂಬಂಧಿ ಅಂಶಗಳಲ್ಲಿ ಆಳವಾಗಿ ಬೇರೂರಿವೆ. ತಂಬಾಕು ಬಳಕೆ ವಿಶೇಷವಾಗಿ ಧೂಮಪಾನ ಹಾಗು ಗುಟ್ಕಾ ಮತ್ತು ಪಾನ್ ಮಸಾಲಾದಂತಹ ಹೊಗೆರಹಿತ ತಂಬಾಕಿನ ರೂಪದಲ್ಲಿ ಅತ್ಯಂತ ಪ್ರಮುಖ ಅಪಾಯಕಾರಿ ಅಂಶವಾಗಿದ್ದು, ಅಧ್ಯಯನಗಳ ಪ್ರಕಾರ ಬಾಯಿ ಕ್ಯಾನ್ಸರುಗಳಲ್ಲಿ 80% ರಿಂದ 90% ರೋಗಿಗಳಲ್ಲಿ ಇದರ ಹಿಂದಿನ ಸಂಬಂಧವನ್ನು ವರದಿಮಾಡಲಾಗಿದೆ. ಮದ್ಯ ಸೇವನೆಯು ತಂಬಾಕಿನೊಂದಿಗೆ ಸಹಕರಿಸಿ ಅಪಾಯವನ್ನು ಘಾತೀಯವಾಗಿ ಹೆಚ್ಚಿಸುತ್ತದೆ. ಮತ್ತು ಮಾನವ ಪ್ಯಾಪಿಲೋಮ ವೈರಸ್ (HPV) ನಂತಹ ಸೋಂಕುಗಳು ಓರೋಫಾರ್ಂಜಿಯಲ್ ಕ್ಯಾನ್ಸರ್‌ಗಳಿಗೆ ಗಮನಾರ್ಹ ಕೊಡುಗೆಯಾಗಿ ಹೊರಹೊಮ್ಮಿವೆ. ರಾಸಾಯನಿಕ ಮಾನ್ಯತೆಗಳು ಮತ್ತು ಪರಿಸರ ಮಾಲಿನ್ಯಕಾರಕಗಳು ಈ ಅಪಾಯವನ್ನು ಮತ್ತಷ್ಟು ಹೆಚ್ಚಿಸುತ್ತವೆ ಮತ್ತು ಪರಿಣಾಮಕಾರಿ ತಡೆಗಟ್ಟುವಿಕೆ ತಂತ್ರಗಳನ್ನು ರೂಪಿಸುವಲ್ಲಿ ಬಹುಮುಖಿ ಸವಾಲುಗಳನ್ನು ಎದುರಿಸಬೇಕಾಗುತ್ತದೆ.

**4. ಲಕ್ಷಣಗಳು ಮತ್ತು ಸಂಕೇತಗಳು :** ತಲೆ ಮತ್ತು ಕಂಠ ಕ್ಯಾನ್ಸರ್‌ಗಳು ಸಂಬಂಧಪಟ್ಟ ದೇಹಾಂಗಗಳ ಮೇಲೆ ಅವಲಂಬಿಸಿ ವಿಭಿನ್ನ ರೋಗಲಕ್ಷಣಗಳೊಂದಿಗೆ ಪ್ರಕಟವಾಗುತ್ತವೆ. ಕೆಳಗಿನ ಸಾಮಾನ್ಯ ಚಿಹ್ನೆಗಳು ಇವುಗಳನ್ನು ಒಳಗೊಂಡಿವೆ:

- ಬಾಯಿಯ ಕುಹರ ಅಥವಾ ಕುತ್ತಿಗೆಯಲ್ಲಿ ಗುಣವಾಗದ ಗಡ್ಡೆ ಅಥವಾ ಹುಣ್ಣು.
- ಶ್ವಾಸನಾಳದ ಒಳಗೊಳ್ಳುವಿಕೆಯನ್ನು ಸೂಚಿಸುವ ನಿರಂತರ ಗಂಟಲು ನೋವು ಅಥವಾ ಗಡಸು ಧ್ವನಿ.
- ಹೆಚ್ಚಾಗಿ ಗಂಟಲು ಅಥವಾ ಬಾಯಿಯ ಕ್ಯಾನ್ಸರ್‌ಗಳಲ್ಲಿ ಕಾಣಬಹುದಾದ ನುಂಗಲು ಮತ್ತು ಮಾತನಾಡಲು ಕಷ್ಟ ಪಡುವ ಲಕ್ಷಣ.
- ಮುಖದ ಭಾಗದಲ್ಲಿ ಅಸಂವೇದನೆ ಅಥವಾ ದುರ್ಬಲತೆ.
- ಕಿವಿ ನೋವು ಅಥವಾ ಕಿವಿಗಳಲ್ಲಿ ಗಂಟುವಿಕೆಯು (ರಿಂಗಿಂಗ್ ಶಬ್ದ) ಆಳವಾದ ಹರಡುವಿಕೆಯನ್ನು ಸೂಚಿಸುತ್ತದೆ.

ಪ್ರಾರಂಭಿಕ ಹಂತದಲ್ಲಿ ಈ ಕ್ಯಾನ್ಸರುಗಳು ಸಾಮಾನ್ಯ, ಕಡಿಮೆ ತೀವ್ರತೆಯ ಕಾಯಿಲೆಗಳಿಗೆ ತೋರುವ ಸ್ಥಿತಿಯನ್ನು ಅನುಸರಿಸಬಹುದಾದ್ದರಿಂದ, ಸಮಯೋಚಿತ ತಪಾಸಣೆ, ಸಕಾಲಿಕ ಉಲ್ಲೇಖಗಳು ಮತ್ತು ರೋಗನಿರ್ಣಯವನ್ನು ತ್ವರಿತಗೊಳಿಸಲು ಸಾರ್ವಜನಿಕರು ಮತ್ತು ಪ್ರಾಥಮಿಕ ಆರೋಗ್ಯ ವೃತ್ತಿಪರರಲ್ಲಿ ಹೆಚ್ಚಿನ ಜಾಗೃತಿ ಮೂಡಿಸುವುದು ಅತ್ಯಗತ್ಯ.

**5. ಚಿಕಿತ್ಸೆ :** ಭಾರತದಲ್ಲಿ ತಲೆ ಮತ್ತು ಕುತ್ತಿಗೆ ಕ್ಯಾನ್ಸರ್ ಚಿಕಿತ್ಸೆಯು ಸಾಂಪ್ರದಾಯಿಕ ವಿಧಾನಗಳು ಮತ್ತು ನವೀನ ಪ್ರಗತಿಗಳನ್ನು ಸಂಯೋಜಿಸಲು ವಿಕಸನಗೊಳ್ಳುತ್ತಿದೆ. ಸಾಂಪ್ರದಾಯಿಕವಾಗಿ, ಶಸ್ತ್ರಚಿಕಿತ್ಸೆ, ರೇಡಿಯೊಥೆರಪಿ ಮತ್ತು ಕಿಮೊಥೆರಪಿಗಳು ನಿರ್ವಹಣೆಯ ಮೂಲಾಧಾರವಾಗಿವೆ. ಆದಾಗ್ಯೂ, ಇತ್ತೀಚಿನ ವರ್ಷಗಳಲ್ಲಿ ನಿಖರವಾದ ಔಷಧ (Precision Medicine) ಮತ್ತು ಇಮ್ಯುನೊಥೆರಪಿ ತಂತ್ರಜ್ಞಾನಗಳ ಆಗಮನದೊಂದಿಗೆ ಒಂದು ಮಹತ್ವಪೂರ್ಣ ಪರಿವರ್ತನೆಯನ್ನು ತರುತ್ತಿದೆ. ವೈದ್ಯರು ಈಗ ನಿರ್ದಿಷ್ಟ ಆನುವಂಶಿಕ ರೂಪಾಂತರಗಳನ್ನು ಗುರಿಯಾಗಿಸುವ ರೋಗಿಯ ಕುರಿತು ನೀಡುವ ಚಿಕಿತ್ಸೆಗಳನ್ನು ವೈಯಕ್ತಿಕ (ಕಸ್ಟಮೈಸ್)ಗೊಳಿಸಲು ಆಣ್ವಿಕ ಪ್ರೊಫೈಲಿಂಗ್ ಅನ್ನು ಬಳಸುತ್ತಾರೆ. ಇದು ಥೆರಪಿಯ ಪರಿಣಾಮಕಾರಿತೆಯನ್ನು ಹೆಚ್ಚಿಸುವ ಜೊತೆಗೆ, ದೋಷಪೂರಿತ ಪರಿಣಾಮಗಳನ್ನು ಕಡಿಮೆ ಮಾಡುತ್ತದೆ. ಕಡಿಮೆ ಪ್ರಮಾಣದ ವಿಕಿರಣ ಚಿಕಿತ್ಸೆ ನಿಯಮಾವಳಿಗಳು ಮತ್ತು ಗುರಿತ್ವ ಫೋಕಸ್ ಇಮ್ಯುನೋಥೆರಪಿ, ವಿಶೇಷವಾಗಿ HPV-ಸಂಬಂಧಿತ ಕ್ಯಾನ್ಸರುಗಳಿಗೆ ಮತ್ತು ಉಚ್ಚ ಪ್ರಮಾಣದ ಕಿರಣ ಚಿಕಿತ್ಸೆಯಿಂದಾದ ತೀವ್ರ ದೋಷ ಪರಿಣಾಮಗಳಿಗೆ ಪರಿಣಾಮಕಾರಿ ಪರ್ಯಾಯಗಳಾಗಿ ಹೊರಬರುತ್ತಿವೆ. ಆದರೂ ಕೂಡ, ತಡವಾಗಿ ಪತ್ತೆಯಾಗುವ ರೋಗ ಲಕ್ಷಣಗಳು ಮತ್ತು ದೂರದ ಪ್ರದೇಶಗಳ ಸಂಪನ್ಮೂಲ ಕೊರತೆಗಳು ನವೀನ ಚಿಕಿತ್ಸೆ ಪದ್ಧತಿಗಳ ಕಾರ್ಯಕ್ಷಮತೆಯನ್ನು ನಿಭಾಯಿಸುವಲ್ಲಿ ಸವಾಲು ಒಡ್ಡುತ್ತವೆ.

**6. ತಡೆಗಟ್ಟುವಿಕೆ :** ತಲೆ ಮತ್ತು ಕಂಠ ಕ್ಯಾನ್ಸರುಗಳ ಮಹತ್ವದ ಭಾರವನ್ನು ಕಡಿಮೆ ಮಾಡುವಲ್ಲಿ ರೋಗ ತಡೆಗಟ್ಟುವಿಕೆ ಅತ್ಯಂತ ಪರಿಣಾಮಕಾರಿ ತಂತ್ರವಾಗಿದೆ. ತಡೆಗಟ್ಟುವ ಪ್ರಮುಖ ಕ್ರಮಗಳು:

- **ತಂಬಾಕು ನಿಯಂತ್ರಣ :** ಧೂಮಪಾನ ಹಾಗೂ ಹೊಗೆ ರಹಿತ ತಂಬಾಕು ಬಳಕೆಯನ್ನು ವಿರೋಧಿಸುವ ಸಮಗ್ರ ತಂಬಾಕು ಮುಕ್ತ ಕಾರ್ಯಕ್ರಮಗಳನ್ನು ಮತ್ತು ಕಾನೂನು ಬಲವನ್ನು ಅನುಷ್ಠಾನಗೊಳಿಸುವುದು.
- **ಅಲ್ಕೋಹಾಲ್ ನಿಯಂತ್ರಣ:** ಅಲ್ಕೋಹಾಲ್ ಸೇವನೆಯೊಂದಿಗೆ ಸಂಯೋಜಿತ ಅಪಾಯಗಳ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವುದು.
- **HPV ಲಸಿಕೆ:** HPV ಸಂಬಂಧಿತ ಓರೋಫಾರಿಂಜಿಯ ಕ್ಯಾನ್ಸರುಗಳನ್ನು ತಡೆಯಲು, ಸಾರ್ವಜನಿಕ ಆರೋಗ್ಯ ಕಾರ್ಯಕ್ರಮಗಳಲ್ಲಿ HPV ಲಸಿಕೆಯ ಅಳವಡಿಕೆಯನ್ನು ಖಚಿತಪಡಿಸಬೇಕು.

-**ಆರೋಗ್ಯಕರ ಆಹಾರ ಮತ್ತು ಜೀವನಶೈಲಿ:** ಹಣ್ಣು, ತರಕಾರಿ ಹಾಗೂ ಅಗತ್ಯ ಮೈಕ್ರೋನ್ಯೂಟ್ರಿಯೆಂಟ್‌ಗಳಿಂದ ಸಮೃದ್ಧವಾದ ಆಹಾರವನ್ನು ಸೇವಿಸಲು ಉತ್ತೇಜಿಸುವ ಜೊತೆಗೆ, ಉತ್ತಮ ದಂತ ಸ್ವಚ್ಛತೆಯನ್ನು ಹೊಂದಲು ಒತ್ತು ನೀಡುವುದು.

-**ಸಾರ್ವಜನಿಕ ಜಾಗೃತಿ ಮತ್ತು ಆರಂಭಿಕ ತಪಾಸಣೆ:** ಸಮುದಾಯ ಆಧಾರಿತ ಕಾರ್ಯಕ್ರಮಗಳ ಮೂಲಕ ಜನರಲ್ಲಿ ಜಾಗೃತಿಯನ್ನು ಹೆಚ್ಚಿಸಿ, ರೋಗದ ಆರಂಭಿಕ ಲಕ್ಷಣಗಳನ್ನು ಬೇಗನೆ ಪತ್ತೆಮಾಡುವಂತೆ ಮಾಡುವುದೇ ಅತ್ಯಂತ ಮುಖ್ಯವಾಗಿದೆ.

ಈ ತಡೆಗಟ್ಟುವ ಕ್ರಮಗಳೆಲ್ಲವಕ್ಕೂ ಆದ್ಯತೆ ನೀಡಿ, ಆರೋಗ್ಯ ವ್ಯವಸ್ಥೆಗಳು ಹೊಸ ಪ್ರಕರಣಗಳ ಸಂಖ್ಯೆಯನ್ನು ಕಡಿಮೆ ಮಾಡುವ ಜೊತೆಗೆ, ಪೂರ್ವ ರೋಗನಿರ್ಣಯ ವಿಧಾನ ಮತ್ತು ಸಮರ್ಪಕ ಚಿಕಿತ್ಸೆಯಿಂದ ಒಟ್ಟಾರೆ ಬದುಕು ಉಳಿಸುವ ದರವನ್ನು ವೃದ್ಧಿಗೊಳಿಸಬಹುದು.


ಹೆಚ್ಚುವರಿ ಆಳವಾದ ವಿಷಯಗಳು ಹಾಗು ಭವಿಷ್ಯವನ್ನು ಗಮನದಲ್ಲಿರಿಸಿಕೊಂಡು, ನೀತಿ ರೂಪಿಸುವವರು ಸಂಶೋಧನೆ ಮತ್ತು ಸಮಗ್ರ ತಪಾಸಣಾ ಕಾರ್ಯಕ್ರಮಗಳಿಗೆ ಹೆಚ್ಚಿನ ಸಂಪನ್ಮೂಲ ಹೂಡಿಕೆ/ಅನುದಾನ ನೀಡುವುದು ಅತ್ಯಗತ್ಯ. ವೈಯಕ್ತಿಕ ಔಷಧ ಪದ್ಧತಿಯನ್ನು ಸಾಮಾನ್ಯ ಚಿಕಿತ್ಸೆ ವ್ಯವಸ್ಥೆಯೊಂದಿಗೆ ಸಂಯೋಜಿಸುವುದು ಮತ್ತು ಗ್ರಾಮೀಣ ಪ್ರದೇಶಗಳಿಗೆ ಸುಧಾರಿತ ಚಿಕಿತ್ಸಾ ತಂತ್ರಜ್ಞಾನಗಳನ್ನು ತರುವ ಮೂಲಕ, ತಲೆ ಮತ್ತು ಕಂಠ ಕ್ಯಾನ್ಸರುಗಳ ಪ್ರಮುಖ ಸಮಸ್ಯೆಗಳ




ಮೇಲೆ ಪರಿಣಾಮಕಾರಿ ಪರಿಹಾರವನ್ನು ಕಂಡುಹಿಡಿಯಬಹುದು. ಸಂಸ್ಕೃತಿಗೆ ಹೊಂದಿರುವ ಸಾರ್ವಜನಿಕ ಆರೋಗ್ಯ ಅಭಿಯಾನಗಳು ಜಾಗೃತಿಯನ್ನು ಬೆಳಸುವುದರ ಜೊತೆಗೆ, ಸಕಾಲದಲ್ಲಿ ರೋಗ ಪತ್ತೆ ಮಾಡುವಲ್ಲಿ ಹಾಗೂ ಸಮರ್ಪಕ ಚಿಕಿತ್ಸೆ ಸಾಧಿಸುವಲ್ಲಿ ನಿರ್ಣಾಯಕವಾಗಿವೆ. ❑

ಯೋಗ ಕುರಿತ ವಿಶೇಷ ಲೇಖನ

# ರೋಗ ನಿಧಾನದಲ್ಲಿ ಮನಸ್ಸಿನ ಪಾತ್ರ



"ಮನ ಏವ ಮನುಷ್ಯಾ ನಾಂ ಕಾರಣಂ ಬಂಧ ಮೋಕ್ಷಯೋ।
ಬಂಧಾಯ ವಿಷಯಾಸಕ್ತಂ ಮುಕ್ತ್ಯೈ ನಿರ್ವಿಷಯಂ ಸ್ಮೃತಂ॥"

ಮಾನವನ ಬಂಧನ (ದುಃಖ) ಮತ್ತು ಮುಕ್ತಿಗೆ (ಸುಖ) ಅವನ ಮನಸ್ಸೇ ಮೂಲ ಕಾರಣ. ಇಂದ್ರಿಯ ಭೋಗಗಳ ಸಾಂಗತ್ಯ ಹೊಂದಿದ ಮನಸ್ಸು ಬಂಧನಕ್ಕೆ ದುಃಖ ಮತ್ತು ದುರ್ವಾಸನೆಗಳಿಗೆ ಕಾರಣವಾದರೆ, ಇಂದ್ರಿಯಗಳ ವಿಷಯಾಸಕ್ತಿಗಳಿಂದ ಮುಕ್ತವಾದ ಮನಸ್ಸು ಮಾನವನ ಸುಖ, ಶಾಂತಿ ಮತ್ತು ಮುಕ್ತಿಗೆ ಕಾರಕವಾಗುತ್ತದೆ. "ಮನಸ್ಸು ಹೇಗೋ ಮನುಷ್ಯ ಹಾಗೆ" ಅಂತಹ ಮನುಷ್ಯನ ಮನಸ್ಸನ್ನು ಅರಿತುಕೊಳ್ಳುವ, ಪ್ರಶಮನಗೊಳಿಸುವ, ಶಾಂತತೆಯ ಮತ್ತು ಆನಂದದ ಉತ್ತುಂಗಕ್ಕೆ ಕರೆದೊಯ್ಯುವ ಸರಳ ಸಹಜ, ಉಪಾಯ ಮತ್ತು ವಿಧಾನವೇ "ಯೋಗ". ಮನಸ್ಸಿನ ಒಂದು ಕೊಂಡಿ ರಜೋಪ್ರಭಾವದ ಇಂದ್ರಿಯಗಳ ಆಧೀನದಲ್ಲಿದ್ದರೆ, ಅದರ ಇನ್ನೊಂದು ಕೊಂಡಿ ವಿವೇಕದ (ಬುದ್ಧಿ) ಆಧೀನವಾಗಿರುತ್ತದೆ. ಚಂಚಲ ಮನಸ್ಸು ಇಂದ್ರಿಯ ಭೋಗದಲ್ಲಿ ಸಂತೋಷ ಕಂಡರೆ; ವಿವೇಕಮಯಿ ಮತ್ತು ಮನಸ್ಸು ವಿಷಯಾಸಕ್ತಿಗಳಿಂದ ಮುಕ್ತವಾದ ಆನಂದ ಹೊಂದಿರುತ್ತದೆ. ಒಂದು ಭೋಗ-ರೋಗ-ದುಃಖಕರವಾದರೆ, ಇನ್ನೊಂದು ಆರೋಗ್ಯ-ಯೋಗ-ಆನಂದದಾಯಕವಾಗಿರುತ್ತದೆ. ಆಯ್ಕೆ ನಮಗೆ ಬಿಟ್ಟದ್ದು. ಸಾಮಾನ್ಯ ಮನುಷ್ಯರಾದ ನಮಗೆ ಈ ಭೋಗ ಮತ್ತು ಯೋಗದಲ್ಲಿ ಸಮನ್ವಯ ಸಾಧಿಸುವುದೇ ಆರೋಗ್ಯ ಮತ್ತು ಜೀವನದ ಯಶೋಗಾಥೆಯ ಒಳಗುಟ್ಟು, ಅದಕ್ಕೆ ಗೀತೆಯಲ್ಲಿ "ಸಮತ್ವಂ ಯೋಗ ಉಚ್ಯತೇ" ಎಂದು ಹೇಳಿದ್ದು. ನಿಜವಾದ ಯೋಗಾಭ್ಯಾಸಿಯ ಮನಸ್ಸು ಭೋಗ-ಯೋಗ ಸಮನ್ವಯದಿಂದ, ಸುಖ, ಶಾಂತಿ ಮತ್ತು ಆನಂದದಾಯಕ ಜೀವನದ ಹಾದಿಯಲ್ಲಿ ಸಾಗಿದರೆ, ಇಂದ್ರಿಯಗಳ ದಾಸನಾಗಿ ಭೋಗದಲ್ಲೇ ಉಪ್ತವಾದ ಮನಸ್ಸು ಅನೇಕ ರೋಗ ರುಜಿನಗಳಿಗೆ, ಅಶಾಂತಿ ಮತ್ತು ದುಃಖಕ್ಕೆ ಕಾರಣವಾಗುತ್ತದೆ.

ಏನಿದು ಮನಸ್ಸು? : ನಮ್ಮ ಭೌತಿಕ ಶರೀರವು ಸ್ಥೂಲ, ಗೋಚರವಾದುದು ಮತ್ತು ಪಂಚ ಮಹಾಭೂತಗಳಿಂದ (ಪೃಥ್ವಿ, ಆಕಾಶ, ಗಾಳಿ, ನೀರು ಮತ್ತು ಅಗ್ನಿ) ಇವುಗಳಿಂದ ಉತ್ಪನ್ನವಾದುದು. ಈ ಪಂಚ ಮಹಾಭೂತಗಳಲ್ಲಿ ಆಗುವ ಯಾವುದೇ ಬದಲಾವಣೆಗಳು ನಮ್ಮ ಶರೀರ ಅಥವಾ ಸ್ಥೂಲ ಶರೀರದ (Physical Body) ಮೇಲೆ ಪರಿಣಾಮ ಬೀರುತ್ತವೆ. ಈ ಸ್ಥೂಲ ಶರೀರದ ಚಾಲನೆಗೆ ಸೂಕ್ಷ್ಮವಾದ ಪ್ರಾಣದ ಅವಶ್ಯಕತೆ ಇದೆ. ಅದು ನಮ್ಮ ಉಸಿರಿನ (ಶ್ವಾಸ-ಪ್ರಶ್ವಾಸ) ಮುಖಾಂತರ ಪ್ರವೇಶಿಸಿ ಶರೀರಕ್ಕೆ ಅವಶ್ಯವಾದ ಚಲನೆ ಮತ್ತು ಚೇತನಗಳನ್ನು ನೀಡುತ್ತದೆ. ಈ ಉಸಿರಿನಲ್ಲಿ (Breathing) ಉಂಟಾಗುವ ಏರು-ಪೇರುಗಳು ಶರೀರದ ಮೇಲೆ ಪ್ರಭಾವವನ್ನು ಬೀರುತ್ತವೆ. ಯೋಗಾಭ್ಯಾಸದಲ್ಲಿ ಈ ಶ್ವಾಸ-ಪ್ರಶ್ವಾಸದ ವಿಸ್ತಾರಕ್ಕೆ, ಸಮನ್ವಯಕ್ಕೆ ಹೆಚ್ಚು ಪ್ರಾಧಾನ್ಯತೆ ನೀಡುವುದೇ ಇದಕ್ಕೆ ಕಾರಣ. ದೀರ್ಘ, ಸಮತೋಲಿತ ಮತ್ತು ನಿಯಂತ್ರಿತ ಶ್ವಾಸ-ಪ್ರಶ್ವಾಸವು ಆರೋಗ್ಯಕ್ಕೆ, ಮನಃಶಾಂತಿಗೆ ಕಾರಣವಾದರೆ, ಅಸಮತೋಲಿತ, ಅನಿಯಂತ್ರಿತ ಮತ್ತು ಆಳವಿಲ್ಲದ-ತ್ವರಿತ ಉಸಿರಾಟವು (Shallow Breathing) ಅನಾರೋಗ್ಯ ಮತ್ತು ಅಶಾಂತಿಗೆ ಕಾರಣವಾಗುತ್ತದೆ.

ಉಸಿರಾಟವು ಶರೀರದ ಮೇಲೆ ಹೇಗೆ ಪ್ರಭಾವವನ್ನು ಬೀರುತ್ತದೆಯೋ ಹಾಗೆಯೇ ಮನಸ್ಸಿನ ಸ್ವಭಾವವನ್ನು ಪರಿಚಯಿಸುತ್ತದೆ. "ಉಸಿರಾಟವು ಶರೀರ ಮತ್ತು ಮನಸ್ಸುಗಳನ್ನು ಬೆಸೆಯುವ ಸೇತುವೆ" ಎಂಬ ಉಕ್ತಿಯಿದೆ. ಆದ್ದರಿಂದ ಅತೀ ಸೂಕ್ಷ್ಮವಾದ ಮನಸ್ಸನ್ನು ಅರಿಯಲು, ಪ್ರಶಮನಗೊಳಿಸಲು, ಶರೀರ-ಮನಸ್ಸುಗಳನ್ನು ಬೆಸೆಯಲು ಯೋಗದಲ್ಲಿ ಉಸಿರಾಟವನ್ನು ಮಾಧ್ಯಮವಾಗಿ ಉಪಯೋಗಿಸಲಾಗುತ್ತದೆ.

ಪ್ರಶಾಂತವಾದ ಮನಸ್ಸು ಆರೋಗ್ಯವನ್ನು ಸೂಚಿಸಿದರೆ. ಚಂಚಲವಾದ ಮನಸ್ಸು ಅನಾರೋಗ್ಯಕ್ಕೆ ಕಾರಣವಾಗುತ್ತದೆ. ಯೋಗದ ಸಿದ್ಧಾಂತಗಳು ಶರೀರ-ಉಸಿರಾಟ (ಪ್ರಾಣವಾಹಕ)-ಮನಸ್ಸು ಈ ಮೂರು ಒಂದಕ್ಕೊಂದು ಅವಿನಾಭಾವ ಸಂಬಂಧ ಮತ್ತು ಪ್ರಭಾವವನ್ನು ಹೊಂದಿವೆಯೆಂದು ಗುರುತಿಸಿವೆ. ಒಂದರಲ್ಲಾದ ಬದಲಾವಣೆಯು ಉಳಿದೆರಡರ ಮೇಲೆ ಪ್ರಭಾವ ಮತ್ತು ಪರಿಣಾಮಗಳನ್ನು ಬೀರುತ್ತದೆ. ಆದ್ದರಿಂದಲೇ-ಜೀವ ವಿಜ್ಞಾನಿಗಳು ಈ ಸಂಬಂಧವನ್ನು Mind-Body relations ಎನ್ನುವುದರ ಜೊತೆಗೆ ಯೋಗವನ್ನು Mind-Body medicine ಎಂದು ಸ್ವೀಕರಿಸುತ್ತಿದ್ದಾರೆ. ಇಂದಿನ 78% ಕ್ಕಿಂತ ಹೆಚ್ಚು ವ್ಯಾಧಿಗಳು ಮನೋದೈಹಿಕ ವ್ಯಾಧಿಗಳೆಂದು ಗುರುತಿಸಿದ್ದಾರೆ. ಆಧುನಿಕ ವೈದ್ಯಶಾಸ್ತ್ರವು ದೇಹಕ್ಕೆ ಔಷಧಿಯನ್ನು ನೀಡಿದರೆ, ಯೋಗದ ಹಲವು ಆಯಾಮಗಳನ್ನು, ಸಾಧನೆಗಳನ್ನು, ಮನಸ್ಸನ್ನು ಪ್ರಶಮನಗೊಳಿಸಲು ಅನೇಕ ಮನೋದೈಹಿಕ ಕಾಯಿಲೆಗಳಾದ, ಡಯಾಬಿಟಿಸ್, ಅಸ್ತಮಾ, ಹೃದಯ ಕಾಯಿಲೆಗಳು ಅಜೀರ್ಣತೆ, ಮಲಬದ್ಧತೆ, ಲಿವರ್ ಕಾಯಿಲೆಗಳು, ಕ್ಯಾನ್ಸರ್ ಇತ್ಯಾದಿಗಳ ಶಮನಕ್ಕೆ ಔಷಧಿಗಳ ಜೊತೆ ಜೊತೆಗೆ ಬಳಸುತ್ತಿದ್ದಾರೆ.

ಮನಸ್ಸಿನ ವಿಕಾರಗಳನ್ನು ದೂರಗೊಳಿಸಿ ಅದರಿಂದ ಶರೀರದ ಮೇಲಾಗುವ ದುಷ್ಪರಿಣಾಮಗಳನ್ನು ನಿವಾರಿಸಿ ಮನೋದೈಹಿಕ ಆರೋಗ್ಯಕ್ಕೆ ಯೋಗವನ್ನು ಪ್ರಭಾವಶಾಲಿಯಾಗಿ ಬಳಸಲಾಗುತ್ತಿದೆ. ಆದ್ದರಿಂದಲೇ ಇಂದು ಯೋಗ ಚಿಕಿತ್ಸೆ ಮತ್ತು ವೈದ್ಯಕೀಯ ಸಂಬಂಧಗಳು ಗಟ್ಟಿಯಾಗುತ್ತ ಹೋಗುತ್ತಿವೆ. ಅನೇಕ ಸಂಶೋಧನೆಗಳು ಈ ಸಂಬಂಧಗಳನ್ನು ಮತ್ತಷ್ಟು ಗಟ್ಟಿಗೊಳಿಸುವುದರ ಜೊತೆ ಜೊತೆಗೆ ಆಧುನಿಕ ಜೀವನ ಶೈಲಿಯಿಂದ ಉತ್ಪನ್ನವಾಗುತ್ತಿರುವ ಅನೇಕ ಕಾಯಿಲೆಗಳಿಗೆ ಯೋಗ ಚಿಕಿತ್ಸೆಯು ಪೂರಕ ಚಿಕಿತ್ಸೆಯಾಗಿ ಪ್ರಪಂಚದಾದ್ಯಂತ ಪ್ರಚಲಿತವಾಗುತ್ತಿದೆ. ರೋಗ ನಿಧಾನಕ್ಕೆ ಮನದ ಪ್ರಶಾಂತತೆಗೆ ಏಕೆ ಮತ್ತು ಹೇಗೆ ಇದು ಅವಶ್ಯ ಕಾರಣವಾಗುತ್ತದೆ? ಎಂಬುದನ್ನು ಮುಂದಿನ ಲೇಖನದಲ್ಲಿ ನೋಡೋಣ. ❑

**ಡಾ. ಈಶ್ವರ ವೀ.ಬಸವರಡ್ಡಿ**
ಯೋಗ ವಿಜ್ಞಾನಿ ಮತ್ತು ಯೋಗ ಗುರುಗಳು ಹಾಗು ನಿರ್ದೇಶಕರು ಮತ್ತು ಪ್ರಾಧ್ಯಾಪಕರು, ಸಿ.ವೈ.ವೆ.ಇಂ.ಮೆ. ಎಂ.ಜಿ.ಎಂ.ಟಿ. ವಿ.ವಿ. ಜೈಪುರ



# ಶ್ರೀಮತಿ ಜಮುನಾ ಸಿ. ಮಠದ

ಸಾಮಾಜಿಕ ಕಾಳಜಿಗಾಗಿಯೋ, ಕಲೆ, ಭಾಷೆ ಸಂಸ್ಕೃತಿಯ ಮೇಲಿನ ಪ್ರೀತಿಗಾಗಿಯೋ, ಮನ್ನಣೆಯ ದಾಹಕ್ಕಾಗಿಯೋ ಸಂಘ ಸಂಸ್ಥೆಗಳಲ್ಲಿ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ತೊಡಗಿಸಿಕೊಳ್ಳುವ ಜನರು ಒಂದೆಡೆಯಾದರೆ, ಸಂಘ ಸಂಸ್ಥೆಗಳ ಫಲಾನುಭವಿಗಳಾಗಿ, ಅದರ ಸೇವೆಯಲ್ಲಿ ತಮ್ಮನ್ನು ತಾವು ಸವೆಸಿ, ಸಂಘ ಸಂಸ್ಥೆಗಳನ್ನು ಕಾಪಿಟ್ಟುಕೊಳ್ಳುವ ಬಹಳ ಪ್ರಮುಖವಾದ ಇನ್ನೊಂದು ವರ್ಗವಿದೆ. ಸಂಘ ಸಂಸ್ಥೆಗಳ ಒಳಗನ್ನು ನೋಡಿದ ನನಗೆ, ಹಲವು ಅನುಭವಗಳಾಗಿವೆ. ದೆಹಲಿ ಕರ್ನಾಟಕ ಸಂಘದ ಕಾರ್ಯಕ್ರಮಗಳ ಫಲಾನುಭವಿಯಾಗಿ, ಸಂಘಕ್ಕಾಗಿ ಅಪಾರ ಸಮಯ ನೀಡಿ, ಸಂಘವನ್ನು ಪೋಷಿಸಿ, ಸಮರ್ಥಿಸಿ, ಸಂಘವನ್ನು ತಮ್ಮ ಬದುಕಿನ ಅವಿಭಾಜ್ಯ ಅಂಗವಾಗಿಸಿದ ಕೆಲವೇ ವ್ಯಕ್ತಿಗಳಲ್ಲಿ ಎದ್ದು ಕಾಣುತ್ತಿದ್ದವರು ನಮ್ಮ ಜಮುನಕ್ಕ. ಹೌದು. ಶ್ರೀಮತಿ ಜಮುನಾ ಸಿ. ಮಠದ ಅವರು ಪ್ರಾರಂಭದಲ್ಲಿ ಅನೇಕ ವರ್ಷಗಳ ಕಾಲ ತಮ್ಮ ಪುಟ್ಟ ಮಕ್ಕಳಿಬ್ಬರನ್ನೂ ಸಂಘದ ಕಾರ್ಯಕ್ರಮಗಳಿಗೆ ಕರೆತರುತ್ತಿದ್ದರು. ಎಲ್ಲಾ ಸ್ಪರ್ಧೆ, ಚಟುವಟಿಕೆಗಳಲ್ಲಿ ಭಾಗವಹಿಸುತ್ತಿದ್ದರು. ನಂತರದ ದಿನಗಳಲ್ಲಿ ಸಂಘದ ಕಾರ್ಯಕಾರೀ ಸಮಿತಿಯ ಜಂಟಿ ಕಾರ್ಯದರ್ಶಿಯಾಗಿ, ಉಪಾಧ್ಯಕ್ಷೆಯಾಗಿ, ಉಪಸಮಿತಿಗಳಲ್ಲಿ ಸದಸ್ಯರಾಗಿದ್ದು ಸಂಘದ ಆಡಳಿತದಲ್ಲಿ ಶ್ರೀಮತಿ ಜಮುನಾ ಮಠದ, ನಮ್ಮ ಪಾಲಿನ ಜಮುನಕ್ಕ.



1992 ರಿಂದಲೇ ಪರಿಚಯ. ದೆಹಲಿಯ ಕನ್ನಡದ ಹೆಚ್ಚಿನ ಚಟುವಟಿಕೆಗಳಲ್ಲಿ ಸದಾ ಇದ್ದ ಚೆನ್ನು ಎಸ್. ಮಠದ ಅವರ ಪತ್ನಿ ಅನ್ನುವುದಕ್ಕಿಂತಲೂ, ಪುಟಾಣಿಗಳಾದ ನಂದಿನಿ ಮಠದ ಹಾಗೂ ವಿನಯ್ ಮಠದ ಅವರ ಅಮ್ಮ ಎಂದೇ ಪರಿಚಿತರಾದವರು ಜಮುನಾ ಮಠದ. ಧ್ವನಿ ಏರದ ನಿಧಾನ ಮಾತು. ಮಿತವಾದ ಮಾತು. ಬೇಕು ಅಂದರೆ ಖಾರವಾಗಿ ಇರುತ್ತಿತ್ತು. ಸಭೆಯಲ್ಲಿ ಭಾಷಣ ಮಾಡಿ ಜನಭಾವನೆ ಮೂಡಿಸಿದವರಲ್ಲವಾದರೂ, ಸಂಘದ ಕುರಿತಂತೆ ಜನಾಭಿಪ್ರಾಯ ಮೂಡಿಸುವಲ್ಲಿ ಅವರ ಕಿವಿಮಾತು, ಅಭಿಪ್ರಾಯ ಹಾಗೂ ಪ್ರತಿಪಾದನೆ ಪರಿಣಾಮಕಾರಿ ಆಗುತ್ತಿತ್ತು. ಅನೇಕ ವರ್ಷಗಳ ಕಾಲ, ಚೆನ್ನು ಮಠದ ಅವರ ಮನೆ ಸಂಘದ ಪಕ್ಕದಲ್ಲೇ ಇದ್ದುದರಿಂದ ಚೆನ್ನು ಕುಟುಂಬದ ಜೊತೆಗಿನ ಸಂಪರ್ಕ ಚೆನ್ನಾಗಿತ್ತು. ಪ್ರಾರಂಭದಿಂದಲೂ ಸಂಘದ ಚಟುವಟಿಕೆಗಳಲ್ಲಿ ಜೊತೆಯಾಗಿಯೇ ಕೆಲಸ ಮಾಡುತ್ತಿದ್ದುದರಿಂದ ಆಯೋಜನೆಯ ರೂಪರೇಷೆ, ಕಾರ್ಯಕ್ರಮಕ್ಕೊಂದು ಲೋಗೋ, ಸ್ಪರ್ಧೆಗಳ ಷರತ್ತುಗಳು, ಬ್ರೋಶರ್, ಸಾಧಕ-ಬಾಧಕಗಳ ಕುರಿತು ಚೆನ್ನು ಮಠದ ಅವರ ಜೊತೆ ಆತ್ಮೀಯವಾಗಿ ಅವರ ಮನೆಯಲ್ಲೇ ಕುಳಿತು ಗಂಟೆಗಳ ಕಾಲ ಚರ್ಚಿಸುತ್ತಿದ್ದ ದಿನಗಳನ್ನು ನಾನು ಎಂದೂ ಮರೆಯುವಂತಿಲ್ಲ. ಚೆನ್ನು ಮಠದ ಜೊತೆ ಚರ್ಚಿಸುತ್ತಿದ್ದಾಗೆಲ್ಲ ನಮ್ಮ ಸಂಭಾಷಣೆಯನ್ನು ಅವರು ಕೇಳಿಸಿಕೊಳ್ಳುತ್ತಿದ್ದರು. ನಮ್ಮ ಚರ್ಚೆ, ಸಂಭಾಷಣೆಗಳಿಗೆ ಜಮುನಕ್ಕ ಕೊಡುತ್ತಿದ್ದ ಸಾಥ್, ಚಹಾ ಉಪ್ಪಿಟ್ಟಿಗಷ್ಟೇ ಸೀಮಿತವಾಗಿ ಇರುತ್ತಿರಲಿಲ್ಲ. ಕಣ್ಣು ಕೂರುವ ತನಕ, ತಮ್ಮ ಅನಿಸಿಕೆಗಳನ್ನು ಹೇಳಿ, ಕೊನೆಗೆ "ಸರಿ ನೀವಿಬ್ರು ಮಾತಾಡ್ಕೊಳ್ಳಪ್ಪ, ನನಗೆ ನಿದ್ದೆ ಬರುತ್ತೆ, ನಾನು ಮಲ್ಕೋತೀನಿ" ಎಂದು ಹೋಗುತ್ತಿದ್ದರು. ಏಕೆಂದರೆ, ಸಂಘದ ಕೆಲಸ ಮುಗಿಸಿ, ಸುಮಾರು ರಾತ್ರಿ 8 ಗಂಟೆಗೆ ಚೆನ್ನು ಮಠದ ಅವರ ಮನೆಗೆ ಹೋದರೆ, ರಾತ್ರಿ 12 ಗಂಟೆಗಳ ತನಕ ಕುಳಿತು ಮಾತನಾಡಿದ ದಿನಗಳು ಹಲವಾರು. 2004ರ ಚುನಾವಣೆಯ ಸಂದರ್ಭದಲ್ಲಿ ರಾತ್ರಿ 12 ಗಂಟೆಗೆ ಚೆನ್ನು ಅವರನ್ನು ಭೇಟಿಯಾಗಿ ಬೆಳಗಿನ ಜಾವ ಮೂರರ ತನಕ ಅವರಿಬ್ಬರ ನಿದ್ದೆಗೆಡಿಸಿದ್ದರೂ, ಸಂಘದ ಒಳಿತಿಗಾಗಿ, ತಮ್ಮ ನಿದ್ದೆ ಬಿಡುವುದು ಕರ್ತವ್ಯ ಎಂದೇ ಭಾವಿಸಿದ್ದ ಜಮುನಕ್ಕ ಹಾಗೂ ಚೆನ್ನು ಮಠದವರನ್ನು ಎಂದೂ ಮರೆಯುವಂತಿಲ್ಲ.

ಅವರು ಕೊಡುವ ಸಲಹೆಗಳು ಆಯೋಜನೆಯ ದೃಷ್ಟಿಯಿಂದ ಎಷ್ಟು ಫಲಕಾರಿ ಅನ್ನುವುದಕ್ಕಿಂತಲೂ ಜನಾಭಿಪ್ರಾಯಗಳೇನು ಎಂಬುದನ್ನು ತಿಳಿಯಲು ಅನುಕೂಲವಾಗುತ್ತಿತ್ತು. ದೊಡ್ಡ-ದೊಡ್ಡ ಸಂಘ ಸಂಸ್ಥೆಗಳನ್ನು ನಡೆಸುವಾಗ, ಜನರ ಅನಿಸಿಕೆ, ಭಾಗವಹಿಸುವಿಕೆ, ಅವರ ಭಾವನೆಗಳನ್ನು ಅರ್ಥ ಮಾಡಿಕೊಳ್ಳುವುದು ಮುಖ್ಯ. ಗುರಿ ತಲುಪುವ ಹಾದಿ ಹುಡುಕಲು ಸುಲಭವಾಗುತ್ತದೆ.

90ರ ದಶಕದಲ್ಲಿ ಸಂಘವಿನ್ನೂ ಔಪಚಾರಿಕವಾಗಿ ಗಟ್ಟಿಗೊಳ್ಳುತ್ತಿರುವ ಕಾಲಘಟ್ಟದಲ್ಲೂ, ಸಾಂಸ್ಕೃತಿಕ ಸ್ಪರ್ಧೆಗಳ ಆಯಾಮದ ಕುರಿತ ಚಿಂತನೆಗೆ ಜಮುನಕ್ಕ ಅವರ ಕೊಡುಗೆ, ಮಾನವ ಸಂಪನ್ಮೂಲ ಬೆಳವಣಿಗೆಗೆ ಮೊದಲ ಸೋಪಾನ ಎಂಬುದು ಒಪ್ಪತಕ್ಕ ಮಾತು. ಸ್ಪರ್ಧೆ ಎಂದರೆ, ಮೊದಲ ಬಹುಮಾನ, ದ್ವಿತೀಯ ಬಹುಮಾನ, ತೃತೀಯ ಬಹುಮಾನ-ಅಲ್ಲಿಗೆ ಮುಗಿದು ಹೋಯಿತು. ಎಲ್ಲಾ ಸ್ಪರ್ಧೆಗಳಲ್ಲಿ ನಾವು ನೋಡುವುದು ಅದನ್ನೇ. ಆದರೆ ದೆಹಲಿ ಕರ್ನಾಟಕ ಸಂಘ ಅದಕ್ಕಾಗಿಯೇ ಇರುವ ಸಂಸ್ಥೆಯಲ್ಲ, ಸ್ಪರ್ಧೆಯಲ್ಲಿ ಹೆಚ್ಚು ಮಕ್ಕಳು ಭಾಗವಹಿಸಬೇಕು, ಅವರಲ್ಲಿರುವ ಅಳುಕು ದೂರವಾಗಬೇಕು, ಅವರ ಪ್ರತಿಭೆಗೆ ಪ್ರೋತ್ಸಾಹ ಸಿಗಬೇಕು. ಇದು ಜಮುನಾ ಮಠದ ಅವರ ವಾದವಾಗಿತ್ತು. ಅದು ನಿಜ. ಈ ಮೂರೂ ಅಂಶಗಳನ್ನು ಗಮನಿಸಿ ಮಾಡಿದ ಆಯೋಜನೆಗಳಿಂದಾಗಿ ದೆಹಲಿ ಕನ್ನಡಿಗರ ಮಕ್ಕಳು ವೇದಿಕೆ ಏರಲು, ವೇದಿಕೆ ಬಳಸಲು ಮತ್ತು ಅದರಿಂದ ತಮ್ಮ ವ್ಯಕ್ತಿತ್ವ ವಿಕಸನಗೊಳಿಸಲು ಸಾಧ್ಯವಾಗಿದೆ. ತಮ್ಮಿಬ್ಬರೂ ಮಕ್ಕಳಲ್ಲಿ ಮಗಳಾದ ನಂದಿನಿ ಮಠದಳನ್ನು ತಪ್ಪದೇ ಸಂಘಕ್ಕೆ ಕರೆತಂದು, ಚಟುವಟಿಕೆಗಳಲ್ಲಿ ತೊಡಗಿಸಿ, ಸಂಘವನ್ನು ತಮ್ಮ ಎಕ್ಸ್‌ಟೆಂಡೆಡ್ ಫ್ಯಾಮಿಲೀ ಎನ್ನುವ ರೀತಿಯಲ್ಲಿ ತೊಡಗಿಸಿಕೊಂಡ ಜಮುನಕ್ಕ ಸದಾ ಸ್ಮರಣೀಯರು. ದೆಹಲಿ ಕರ್ನಾಟಕ ಸಂಘ ಪುಟ್ಟ ಮಕ್ಕಳಿಗಾಗಿ ಚಿತ್ರ-ಹಾಡು-ಛದ್ಮವೇಷ ಸ್ಪರ್ಧೆ ಆಯೋಜಿಸುವಾಗ ಜಮುನಾ ಮಠದ ಅವರನ್ನು ನೆನಪಿಸಿಕೊಳ್ಳುವಂತಾದರೆ ಎಷ್ಟು ಚೆನ್ನ!


ಸಂಘದ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಅವರ ಲವಲವಿಕೆ ಕೊನೆ ತನಕವೂ ಇತ್ತು. ಸಂಘದಲ್ಲಿ ಕನ್ನಡ ಕಲಿಸುವ ಕಾರ್ಯಕ್ರಮವಾದರೂ ತಾವು ತೊಡಗಿಸಿಕೊಂಡವರು. ಸಂಘದ ಎಲ್ಲಾ ಕಾರ್ಯಾಗಾರಗಳಲ್ಲಿ ಭಾಗವಹಿಸಿದವರು. ದೆಹಲಿ ಕರ್ನಾಟಕ ಸಂಘದ ಸಾಂಸ್ಕೃತಿಕ ವಿನಿಮಯ ಅಂಗವಾಗಿ ಮುಂಬೈ ನಗರದ ಮೈಸೂರು ಅಸೋಸಿಯೇಶನ್‌ನಲ್ಲಿ ನಡೆದ 'ದೇವರು ಎದ್ದು ಬಂದಾಗ' ಎಂಬ ನಾಟಕದಲ್ಲಿ ಇಡೀ ಚೆನ್ನು ಮಠದ ಅವರ ಕುಟುಂಬವೇ ಭಾಗವಹಿಸಿತ್ತು. ನಾನು ಸಹ ಕಲಾವಿದನಾಗಿ ಆ ನಾಟಕದಲ್ಲಿ 'ಕುರುಡ' ಆಗಿದ್ದೆ.

ಕಾಲು ನೋವಿದ್ದರೂ ನಿರಂತರ ನಡೆದಾಡುವ, ಚುನಾವಣೆ ಬಂತೆಂದರೆ ಯುವ ಪೀಳಿಗೆಯಿಂದ ತಾವೇನೂ ಹಿಂದಿಲ್ಲವೆಂದು ಪರಿಶ್ರಮ ಪಡುವ, ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಹುರುಪಿನಿಂದ ಭಾವಹಿಸುವ, ಸ್ಪರ್ಧೆಗಳಲ್ಲಿ ಸಮದಂಡಿಯಾಗಿ ಸ್ಪರ್ಧಿಸಬೇಕು ಅನ್ನುವ ಛಲ, ಅವಕಾಶ ಸಿಗದಿದ್ದರೆ ತುಸು ಕೊರಗುವ, ಕರಗುವ, ಸೊರಗುವ, ಎಲ್ಲವನ್ನೂ ಮರೆತು ಮತ್ತೆ ಭಾಗವಹಿಸುವ ಜಮುನಕ್ಕ, ಜೀವನದಲ್ಲಿ 'ಸೋತೆ ಎಂದೆನಿಸದಿರು' ಅನ್ನುವ ವಿಚಾರಧಾರೆಯನ್ನು ತಾವು ಜೀವಿಸಿದ್ದರು.

ಬೆಂಗಳೂರಲ್ಲಿ ಮನೆಯಿದೆ, ಹುಬ್ಬಳ್ಳಿಯಲ್ಲಿ ಮನೆಯಿದೆ, ದಾವಣಗೆರೆಯಲ್ಲಿದೆ, ಆದರೂ ಸ್ವಂತ ಮನೆಯಿಲ್ಲದ ದೆಹಲಿಯೇ ಅವರಿಗಿಷ್ಟ. ಅದೇಕೆಂದು ಕೇಳಿದರೆ ಥಟ್ಟನೆ ಬರುವ ಉತ್ತರ, "ಸಂಘ ಇದ್ಯಲ್ಲ....". ದೆಹಲಿ ಕರ್ನಾಟಕ ಸಂಘವನ್ನು ಎಷ್ಟೊಂದು ಹಚ್ಚಿಕೊಂಡಿದ್ದಾರೆ ಅನ್ನುವುದನ್ನು ತೋರಿಸುತ್ತದೆ.

ತಮ್ಮ ಧರ್ಮ, ನಂಬುಗೆ, ಚಿಂತನೆಗಳ ಮೇಲೆ ಅಪಾರ ನಂಬಿಕೆ ಇಟ್ಟಿದ್ದ ಜಮುನಾ ಮಠದ, ಯಾರಾನ್ನೂ ಸಹ ದೂರ ಮಾಡಿದವರಲ್ಲ. ಹಳ್ಳಿಯ ಮುಗ್ಧತೆ, ಸರಳತೆಯನ್ನು ಉಳಿಸಿಕೊಂಡೇ ಮಹಾನಗರದಲ್ಲಿ ದಶಕಗಳ ಕಾಲ ಸ್ನೇಹ ಜೀವಿಯಾಗಿ ಬಾಳಿ ಬದುಕಿದವರು, ಅನಿರೀಕ್ಷಿತವಾಗಿ ನಮ್ಮನ್ನೆಲ್ಲಾ ಅಗಲಿದ್ದು ಅತೀವ ದುಃಖ ತಂದಿದೆ.

ಜೀವನದಲ್ಲಿ ಸದಾ ಜೊತೆಗಿರುತ್ತಿದ್ದ ಚೆನ್ನು ಮಠದ, ಇಷ್ಟು ವರ್ಷಗಳ ನಂತರ ಇದೀಗ ಒಂದು ಬಾರಿ ಕೆಲಸದ ನಿಮಿತ್ತ ಬೆಂಗಳೂರಿಗೆ ಬಂದಾಗ, ಇದ್ದಕ್ಕಿದ್ದ ಹಾಗೆ ಜಮುನಕ್ಕನವರ ಆರೋಗ್ಯ ಹದಗೆಟ್ಟಾಗ ಸಂಘದ ಅಧ್ಯಕ್ಷ ಶ್ರೀ ಸಿ.ಎಂ. ನಾಗರಾಜ ಅವರು ಜಮುನಕ್ಕನವರನ್ನು ಆಸ್ಪತ್ರೆಗೆ ಸೇರಿಸಿ, ಎಲ್ಲ ರೀತಿಯ ಕಾಳಜಿ ವಹಿಸಿದ ಆಪದ್ಬಾಂಧವರಾಗಿದ್ದಾರೆ. ಚೆನ್ನು ಮಠದ ಬೆಂಗಳೂರಿನಿಂದ ಹಾಗೂ ಪುತ್ರ ವಿನಯ್ ಮಠದ ಜಪಾನ್‌ನಿಂದ ಧಾವಿಸಿ ಬಂದು ಮಾಡಿದ ಪ್ರಯತ್ನಗಳೆಲ್ಲವೂ ವಿಫಲವಾಗಿ ಕೊನೆಯುಸಿರೆಳೆದ ಜಮುನಕ್ಕ ಅವರ ಪಾರ್ಥಿವ ಶರೀರವನ್ನು ಸಂಘಕ್ಕೆ ತಂದಾಗ ಶ್ರದ್ಧಾಂಜಲಿ ಸಲ್ಲಿಸುವ ಅವಕಾಶವನ್ನು ಅನೇಕ ಮಂದಿ ಕನ್ನಡಿಗರಿಗೆ ಒದಗಿಸಿ ಕೃತಾರ್ಥರಾಗಿದ್ದಾರೆ. ಶ್ರೀ ಸಿ.ಎಂ. ನಾಗರಾಜ ಹಾಗೂ ಅವರ ಜೊತೆಗಿದ್ದ ಸಂಘದ ಸಿಬ್ಬಂದಿ, ಪದಾಧಿಕಾರಿಗಳಿಗೆ ಶರಣು. ❑



ಲೇಖಕರು: ***ಸರವು ಕೃಷ್ಣ ಭಟ್***

# ಸಂತೋಷ ಸಂಭ್ರಮದ ಕರಾಳ ನೆನಪು







"18 ವರ್ಷಗಳ ಬಳಿಕ ಚೊಚ್ಚಲ ಐಪಿಎಲ್ ಟ್ರೋಫಿ ಗೆದ್ದ ಆರ್‌ಸಿಬಿ ತಂಡದ ವಿಜಯೋತ್ಸವದ ವೇಳೆ ಕಾಲು ತುಳಿತ ಸಂಭವಿಸಿ 11 ಅಭಿಮಾನಿಗಳು ಮೃತ ಪಟ್ಟಿದ್ದು ಐವತ್ತಕ್ಕೂ ಹೆಚ್ಚು ಜನ ಗಾಯಗೊಂಡಿದ್ದಾರೆ".–ಪತ್ರಿಕೆಗಳಲ್ಲಿ ರಾರಾಜಿಸಿದ ಈ ಹೃದಯವಿದ್ರಾವಕ ಸುದ್ದಿ ಕೇಳಿ ಕಣ್ಣೀರಿಡದ ಜನರಿಲ್ಲ, ಎಲ್ಲಾ ಮೃತ ದುರ್ದೈವಿಗಳು ಚಿಕ್ಕ ಪ್ರಾಯದವರು, 14 ರಿಂದ 21 ವಯೋಮಿತಿಯವರು ಒಂದು ಕಡೆ ಮೃತರ ತಂದೆ ತಾಯಿಯರ ರೋಧನ ವೇದನೆ ಆಕ್ರಂದನ ಮುಗಿಲು ಮುಟ್ಟಿದರೆ, ಮತ್ತೊಂದು ಕಡೆ ಸರ್ಕಾರ ರಾಜಕಾರಣಿಗಳ ಸಮರ್ಥನೆ ಹಾಗೆಯೇ ಪೊಲೀಸರ ಅಸಹಾಯಕತೆ, ಆರ್‌ಸಿಬಿ ಕಾರ್ಯಕರ್ತರ ಪರಿಸ್ಥಿತಿ, ಮಾಧ್ಯಮದಲ್ಲಿ ಕೆಲವು ವಿಡಿಯೋಗಳನ್ನು ನೋಡಿ ಮನಸ್ಸಿಗೆ ಘಾಸಿ ಉಂಟಾಯಿತು.

ಅಚಾತುರ್ಯ ಸಂಭವಿಸಿತು. ಹೋದ ಜೀವ ಮತ್ತೊಂದು ಬಾರದು. 50ಕ್ಕೂ ಹೆಚ್ಚು ಜನರು ದೈಹಿಕದ ಜೊತೆಗೆ ಮಾನಸಿಕ ಆಘಾತಕ್ಕೆ ಒಳಗಾಗಿ ನರಳಾಡುತ್ತಿದ್ದಾರೆ. ಗುಣಮುಖರಾಗಲು ದಿನ ತಿಂಗಳು ವರ್ಷಗಳೇ ತಗಲಬಹುದು. ಈ ದುರಂತ ಇತರೆ ಯಾವುದೇ ದುರಂತಕ್ಕಿಂತಲೂ ದ್ವಿಗುಣ ನೋವನ್ನು ನೀಡುವಂತಹದು. ಅಪ್ರಾಪ್ತ ವಯಸ್ಕರ ನಾಡಿನ ಮುಂದಿನ ಉಜ್ವಲ ಭವಿಷ್ಯತ್ತಿನ ಕನಸೊತ್ತು ಬಾಳಿ ಬೆಳಗಬೇಕಾದಂತಹ ಯುವಕ ಯುವತಿಯರು ಸಾವಿನ ಮಡಿಲಲ್ಲಿರುವುದು ಕಂಡು ನಾಡು ದೇಶದಾದ್ಯಂತ ಜನರ ಹೃದಯ ತಲ್ಲಣಗೊಳಿಸಿದೆ.

ಸುದ್ದಿ ಮಾಧ್ಯಮದಲ್ಲಿ ಇದು ಚರ್ಚಾ ವಿಷಯವಾಗಿ ಪತ್ರಕರ್ತರು ಪೊಲೀಸರು ಘಟನೆ ನಡೆದ ಸ್ಥಳದಲ್ಲಿ ಇದ್ದ ಜನರ ಸಂದರ್ಶನ ಮಾಡುವುದು ಹಾಗೂ ಕ್ಯಾಮರಾದಲ್ಲಿ ಸೆರೆ ಹಿಡಿದಿದ್ದ ನೇರ ದೃಶ್ಯಾವಳಿಗಳ ಹಲವಾರು ವಿಡಿಯೋಗಳನ್ನು ತೋರಿಸುವುದು ಯಾರಿಂದ ಈ ಘಟನೆ ಸಂಭವಿಸಿರುವುದು ಎಂಬುದರ ತನಿಖೆಗಳು ನಡೆಯುತ್ತಲೇ ಇವೆ. ಘಟನೆಯ ಹೊಣೆಗಾರಿಕೆಯನ್ನು ಒಬ್ಬರಿಂದ ಒಬ್ಬರ ತಲೆಯ ಮೇಲೆ ಹೊರಿಸುವ ಕಾರ್ಯ ಕೂಡ ನಡೆಯುತ್ತಿದೆ.

ಇಲ್ಲಿ ಈ ದುರಂತಕ್ಕೆ ಯಾರೊಬ್ಬರ ಹೊಣೆಗಾರಿಕೆ ಎನ್ನುವುದಕ್ಕಿಂತ ಪ್ರತಿಯೊಬ್ಬರ ಹೊಣೆಗಾರಿಕೆಯು ಗೋಚರಿಸುತ್ತಿದೆ. ಸರ್ಕಾರ ಮುನ್ನೆಚ್ಚರಿಕೆ ಪೂರ್ವ ಸಿದ್ಧತೆ ಮಾಡಿಕೊಂಡು ಸಡಗರ ಸಂಭ್ರಮಾಚರಣೆಯ ಕಾರ್ಯಕ್ರಮವನ್ನು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಗಂಭೀರವಾಗಿ ಚರ್ಚಿಸಿ ಹಮ್ಮಿಕೊಳ್ಳಬೇಕಿತ್ತು. ಆರ್‌ಸಿಬಿ ಯವರು ಸಹ ಅತಿ ಉತ್ಸಾಹಿಗಳಾಗಿ ಹುರುಪಿನಿಂದ ಅದೇ ದಿವಸ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕು ಎಂಬುದರ ಬಗ್ಗೆ ಮತ್ತೊಮ್ಮೆ ಪರಿಶೀಲನೆ ಮಾಡಿ ನಿರ್ಧರಿಸಬೇಕಾಗಿತ್ತು. ರಕ್ಷಣೆ ನೀಡುವಲ್ಲಿ ಆರಕ್ಷಕರ ಸಂಖ್ಯೆ ಬಹಳ ಕಡಿಮೆ ಇದ್ದು ಲಕ್ಷಾಂತರ ಜನರ ಸಂರಕ್ಷಣೆ ಮಾಡುವಲ್ಲಿ ವೈಫಲ್ಯ ಕಂಡಿದ್ದಾರೆ.ನಿರಂತರವಾಗಿ ಪರಿಸ್ಥಿತಿಯ ವಿಕೋಪವನ್ನು ಧ್ವನಿ ವರ್ಧಕದ ಮೂಲಕ ವಿವರಿಸುತ್ತಲೇ ಇದ್ದು ಜನರು ಕ್ರೀಡಾಂಗಣವನ್ನು ತೆರವು ಮಾಡಲು ಹೇಳಿದರೂ ಸಹಾ ತೆರವು ಮಾಡದೆ ಕಾಲ್ತುಳಿತಕ್ಕೆ ನೇರವಾಗಿ ಸಂಪೂರ್ಣವಾಗಿ ಹೊಣೆಗಾರರಾಗಿ ಸಾರ್ವಜನಿಕರು ತಮ್ಮ ತಪ್ಪಿಗೆ ತಾವೇ ಶಿಕ್ಷೆಗೆ ಒಳಗಾಗಿದ್ದಾರೆ.

ಹೌದು, "ಅತಿಯಾದರೆ ಅಮೃತವೂ ವಿಷವಾಗುತ್ತದೆ" ಎಂಬ ಗಾದೆ ಮಾತಿನಂತೆ ಎಲ್ಲದಕ್ಕೂ ಒಂದು ಇತಿಮಿತಿಗಳು ಇರಬೇಕು. ಕ್ರಿಕೆಟ್ ಒಂದು ಎಲ್ಲರೂ ಮೆಚ್ಚಿ, ಆಡುವ, ನೋಡುವ ಆಟ. ಕ್ರಿಕೆಟ್ ವ್ಯಾಮೋಹ ಎಲ್ಲರಲ್ಲೂ ಇರಬೇಕು ಆದರೆ ಅತಿಯಾದ ವ್ಯಾಮೋಹ ದುಷ್ಪರಿಣಾಮಕ್ಕೆ ನಾಂದಿಯಾಗುತ್ತದೆ. ಇನ್ನೂ ಕ್ರೀಡಾಂಗಣದಲ್ಲಿ ಕೇಳಿ ಬಂದ ಮಾತುಗಳು "ನಮ್ಮ ಜೀವ ಹೋದರೂ ಪರವಾಗಿಲ್ಲ ಕ್ರಿಕೆಟ್ ಆಟಗಾರರನ್ನು ನೋಡಿಯೇ ಹಿಂತಿರುಗುತ್ತೇವೆ" ಎಂದು ಕೆಲವರಂದರೆ ಮತ್ತೊಂದು ಕಡೆ ಕೆಲವರು, ಹೈಕೋರ್ಟ್ ಮೇಲೆ ಇಳಿಜಾರಾದ ಪ್ರದೇಶದಲ್ಲಿ ನಿಂತವರು, ಮರದ ತೊಟ್ಟ ತುದಿಯಲ್ಲಿ ಕುಳಿತವರು, ಜೀವದ ಹಂಗನ್ನೇ ಮರೆತು ಅಭಿಮಾನಿತನವನ್ನು ಪ್ರದರ್ಶಿಸುತ್ತಿದ್ದರು. ನಮ್ಮ ಜೀವ ಮೊದಲು, ನಾವಿದ್ದರೆ ಮಾತ್ರ ವಿಶ್ವವಿರುವುದು, ನಾವೆಲ್ಲ ಇಲ್ಲವೆಂದರೆ ನಮಗೆ ಜಗತ್ತೇ ಇಲ್ಲ, ಆದರೂ ಇತ್ತೀಚೆಗೆ ಅಭಿಮಾನಿಗಳು ಇದನ್ನೆಲ್ಲಾ ಮರೆತು ವರ್ತಿಸಿದ್ದಾರೆ.

ಈ ಹಿಂದೆಯೂ 2012ರಲ್ಲಿ ಐಪಿಎಲ್ ಕಪ್‌ನ ಪಂದ್ಯವೊಂದು ಕೊಲ್ಕತ್ತಾದಲ್ಲಿ ನಡೆದಿದ್ದಾಗಲೂ ಕಾಲ್ತುಳಿತ ಸಂಭವಿಸಿತ್ತು. ಆದರೆ ಭಗವಂತನ ದಯದಿಂದ ಸಾವು ನೋವುಗಳು ಸಂಭವಿಸಿರಲಿಲ್ಲ, ಪ್ರೇಕ್ಷಕರಲ್ಲಿ ಕೆಲವರಿಗೆ ಸಣ್ಣಪುಟ್ಟ ಗಾಯಗಳಾಗಿ ದೊಡ್ಡ ದುರಂತದಿಂದ ಪಾರಾಗಿದ್ದರು. ಕ್ರಿಕೆಟ್ ಒಂದು ಒಳ್ಳೆಯ ಜನಪ್ರಿಯವಾದ ಉಲ್ಲಾಸಭರಿತವಾದ ಆಟ. ಅಂತಹ ಸುಂದರ ಪಂದ್ಯಾವಳಿಯನ್ನು ಅಭಿಮಾನಿ ಪ್ರೇಕ್ಷಕರುಗಳ ವ್ಯಾಕುಲತೆಯಿಂದ ಆಟಗಾರರನ್ನು ನೋಡಲೇಬೇಕೆಂಬ ಮನಸ್ಸಿನಿಂದ ಸಂಭ್ರಮಕ್ಕೆ ಭಂಗ ತರುತ್ತಿದ್ದಾರೆ.

ಆ ದಿನ ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಆಗಮಿಸುತ್ತಿರುವವರ ಜನರ ಸಂಖ್ಯೆ ಹೆಚ್ಚಾಗುತ್ತಿದೆ ಎಂದು ಪ್ರತಿ ಕ್ಷಣ ಅಲ್ಲಿ ಕುಳಿತವರಿಗೆ ಭಾಸವಾಗುತ್ತಿತ್ತು ಆ ಕ್ಷಣವೇ ಎಚ್ಚೆತ್ತುಕೊಳ್ಳಬಹುದಿತ್ತು. ಕ್ರೀಡಾಂಗಣದಿಂದ ಹೊರಬರುವುದು ಅಥವಾ ಜನ ನಿಬಿಡ ಪ್ರದೇಶದತ್ತ ತೆರಳಿ ಸಾವಕಾಶದಿಂದ ಹೊರಬಹುದಿತ್ತು. ಸಾರ್ವಜನಿಕರಲ್ಲಿ ತಾಳ್ಮೆಯ ಕೊರತೆ ಆಟಗಾರರನ್ನು ನೋಡಲೇಬೇಕೆಂಬ ಅತಿಯಾದ ವ್ಯಾಮೋಹ, ಅದರಲ್ಲೂ ಮಕ್ಕಳ ಈ ರೀತಿಯ ವ್ಯಾಮೋಹಕ್ಕೆ ಕುಮ್ಮಕ್ಕು ನೀಡುತ್ತಿರುವ ಪೋಷಕರ ವರ್ತನೆ ಖಂಡನೀಯ.

ಒಟ್ಟಾರೆ ಹೇಳಬೇಕೆಂದರೆ ಮಕ್ಕಳು ತಮ್ಮ ಜವಾಬ್ದಾರಿಯನ್ನು ಅರಿತುಕೊಳ್ಳಬೇಕು, ವ್ಯಾಮೋಹಕ್ಕೆ ನಿರ್ಬಂಧ ಕಡಿವಾಣಗಳು ಕೆಲವೊಮ್ಮೆ ಅನಿವಾರ್ಯವಾಗುತ್ತದೆ. 18 ವರ್ಷಗಳ ನಂತರ ನಮ್ಮ ಆರ್‌ಸಿಬಿ ಗೆಲುವು ಎಲ್ಲರಿಗೂ ಸಂತೋಷ, ಸಂಭ್ರಮ, ಉತ್ಸಾಹ ಖಂಡಿತಾ ತಂದಿದೆ. ಆದರೆ ಇವೆಲ್ಲವುಗಳನ್ನು ಅಭಿವ್ಯಕ್ತಿಸುವ ರೀತಿ ನೀತಿಗೆ ಒಂದು ಚೌಕಟ್ಟು ಇದ್ದಿದ್ದರೆ ಈ ಅನಾಹುತ ಜರುಗುತ್ತಿರಲಿಲ್ಲ. ಮಾಧ್ಯಮದಲ್ಲಿ ಪ್ರಸಾರವಾಗುತ್ತಿದ್ದ ನೇರ ಪ್ರಸಾರವನ್ನು ವೀಕ್ಷಿಸಿದ್ದರೆ ಸಂತೋಷದ ಸಂಭ್ರಮ ದ್ವಿಗುಣವಾಗುತ್ತಿತ್ತು, ಉತ್ಸಾಹ ತ್ರಿಗುಣವಾಗಿ ಕರ್ನಾಟಕದ ಹೆಮ್ಮೆ ಹೆಮ್ಮರವಾಗಿ ದೇಶದಾದ್ಯಂತ ಪ್ರಸರಿಸಬಹುದಿತ್ತು. ಆದರೆ ಈ ಒಂದು ಕಾಲ್ತುಳಿತದ ದುರ್ಘಟನೆಯಿಂದಾಗಿ ಎಲ್ಲಾ ಸಂತೋಷಕ್ಕೆ ತಣ್ಣೀರೆರಚಿದಂತಾಗಿದೆ. ಪ್ರತಿಯೊಬ್ಬರು ದುಃಖಿಸುತ್ತಿದ್ದಾರೆ, ಸರ್ಕಾರ, ಪೊಲೀಸರು, ರಾಜಕಾರಣಿಗಳು, ಆರ್‌ಸಿಬಿ ಸಮಿತಿ, ಎಲ್ಲರೂ ಸಂಭ್ರಮ ಆಚರಣೆಗಾಗಿ ಸೇರಿದ್ದರು, ಆದರೆ ದುಃಖದಿಂದ ನೋವಿನಿಂದ ಹಿಂತಿರುಗುವಂತಾಯಿತು. ಆ ಮೃತರ ಪೋಷಕರುಗಳಿಗೆ ಪರಿಹಾರ ನಿಧಿಯನ್ನು ಕೋಟಿಗಟ್ಟಲೆ ಕೊಟ್ಟರೂ ಹೋದ ಜೀವ ಮರಳಿಬಾರದು, ಪೋಷಕರ ನೋವು ಭರಿಸಲಾಗದು. ಭಗವಂತನಲ್ಲಿ ಬೇಡುವುದಿಷ್ಟೇ, ಇನ್ನು ಮುಂದಾದರು ಇಂತಹ ದುರ್ಘಟನೆಗಳು ಜರುಗದಂತಿರಲಿ, ಮುಂದಾಲೋಚನೆ, ಪೂರ್ವ ಸಿದ್ಧತೆ, ತಾಳ್ಮೆ, ಅತಿಯಾದ ವ್ಯಾಮೋಹಕ್ಕೆ ಕಡಿವಾಣವನ್ನು ಹಾಕುವ ಮನಸ್ಸನ್ನು ಜಗತ್ತಿನ ಎಲ್ಲ ಜನರಿಗೂ ದೇವರು ನೀಡಲಿ. "ಮಾನವ ಜನ್ಮ ಅತೀ ಶ್ರೇಷ್ಠ, ನಾಶ ಮಾಡಿಕೊಳ್ಳಬೇಡಿರೋ ಹುಚ್ಚಪ್ಪಗಳಿರಾ" ಎಂಬ ಕವಿವಾಣಿಯನ್ನು ಸ್ಮರಿಸುತ್ತಾ ಬದುಕೋಣ. ❑

***ಎಂ.ಎಸ್. ಲಾವಣ್ಯ ಬಸವರಾಜ್***

# "ಪುಟಗಳಲ್ಲಿ ವಿಶ್ವ ಪರ್ಯಟನೆ"

ಕೆಲವು ಕತೆಗಳು ಅದೇಕೋ ದೀರ್ಘಕಾಲ ನೆನಪಿನಲ್ಲಿ ಉಳಿದು ಬಿಡುತ್ತವೆ. ನನ್ನ ಮಟ್ಟಿಗಂತೂ ಈ ಕತೆಗಳು ಸತ್ಯಕತೆಗಳಾಗಿ ಬಿಟ್ಟರೆ ಅವು ಮತ್ತಷ್ಟು ಗಾಢವಾಗಿ ಮನದಂಗಳದಲ್ಲಿ ಅಚ್ಚೊತ್ತಿಬಿಡುತ್ತವೆ. ಸುಮಾರು ಇಪ್ಪತ್ತೈದು ವರ್ಷಗಳ ಹಿಂದೆ ಅಂತಹ ಕತೆಯೊಂದು ನನಗೆ ಎದುರಾಗಿತ್ತು. ಅದು ಶ್ರೀ ರಾಮಕೃಷ್ಣ ಪರಮಹಂಸರದ್ದು. ಕನ್ನಡದಲ್ಲಿದ್ದ ರಾಮಕೃಷ್ಣರ ಈ ಜೀವನಕಥನವನ್ನು ಯಾರು ಬರೆದಿದ್ದರೆಂಬುದು ಈಗ ನೆನಪಿಲ್ಲ. ತೆಳುವಾದ ಖಾಕಿ ಬೈಂಡನ್ನು ಮೈ ಮೇಲೆ ಹೊದ್ದುಕೊಂಡಿದ್ದ, ಪುಟಗಳು ಕಂದು ಬಣ್ಣಕ್ಕೆ ತಿರುಗಿದ್ದ, ಹಳೆಯ ಪುಸ್ತಕವಾಗಿತ್ತದು. ಆಫೀಸಿನ ಗ್ರಂಥಾಲಯವು ಶಿಥಿಲಾವಸ್ಥೆಯಲ್ಲಿದ್ದ ಸಂದರ್ಭದಲ್ಲಿ ಈ ಕೃತಿಯನ್ನು ಅಪ್ಪ ನನಗಾಗಿ ಎತ್ತಿಟ್ಟುಕೊಂಡಿದ್ದರು. ನನಗೆ ನೆನಪಿರುವ ಪ್ರಕಾರ ರಾಮಕೃಷ್ಣರು ಹುಟ್ಟಿದ ಕೆಲವೇ ಕ್ಷಣಗಳಲ್ಲಿ ಶಿಶುವು ಅದ್ಹೇಗೋ ಕೈಯಿಂದ ಜಾರಿ ಒಲೆಯ ಪಕ್ಕದಲ್ಲಿ ಬಿದ್ದಿತಂತೆ. ಹೀಗಾಗಿ ಸುತ್ತಲೂ ಹರಡಿಕೊಂಡಿದ್ದ ಬೂದಿಯೆಲ್ಲ ಮಗುವಿನ ಮೈ ಮೇಲೆ ಅಂಟಿಕೊಂಡಿತ್ತು. ರಾಮಕೃಷ್ಣರು ಭವಿಷ್ಯದಲ್ಲಿ ಸನ್ಯಾಸ ಜೀವನವನ್ನು ಅಪ್ಪಿಕೊಳ್ಳಲಿದ್ದರು ಎಂಬುದನ್ನು ವಿಧಿಯೇ ಸೂಚ್ಯವಾಗಿ ಹೇಳಿದಂತಿತ್ತು ಎಂಬ ಧಾಟಿಯಲ್ಲಿತ್ತು ಆ ಕತೆ.


ನಾನು ಓದಿರುವ ನೂರಾರು ಆತ್ಮಕತೆ/ಜೀವನಕಥನಗಳಲ್ಲಿ ಶ್ರೀ ರಾಮಕೃಷ್ಣರದ್ದೇ ಮೊದಲನೆಯದ್ದು. ಇದಾದ ಕೆಲ ವರ್ಷಗಳ ನಂತರ ಜಿಲ್ಲಾಮಟ್ಟದ ಸ್ಪರ್ಧೆಯೊಂದರಲ್ಲಿ "ವಿವೇಕಾನಂದರ ದಿವ್ಯಸ್ಮೃತಿ" ಎಂಬ ಪುಸ್ತಕವೊಂದು ನನಗೆ ಬಹುಮಾನವಾಗಿ ಸಿಕ್ಕಿತ್ತು. ವಿವೇಕಾನಂದರು ಚಿಕಾಗೋ ಧರ್ಮ ಸಮ್ಮೇಳನಕ್ಕೆಂದು ಅಮೆರಿಕಾಗೆ ತೆರಳಿದ್ದಾಗ ಅವರೊಂದಿಗೆ ಒಡನಾಡಿದ್ದ ಹಲವರು ತಮ್ಮ ಅನುಭವಗಳನ್ನು ಇಲ್ಲಿ ದಾಖಲಿಸಿದ್ದರು. ಅದರಲ್ಲೂ ವಿಶೇಷವಾಗಿ ವಿದೇಶೀಯರು ಅವರನ್ನು ಅರ್ಥೈಸಿಕೊಂಡ ಬಗೆಯು ನಿಜಾರ್ಥದಲ್ಲಿ ಸ್ವಾರಸ್ಯಕರವಾಗಿದ್ದವು. ಸುತ್ತಮುತ್ತಲ ಮಂದಿಯ ಬಹುಪರಾಕುಗಳಿರದಿದ್ದರೂ ತಮ್ಮ ವ್ಯಕ್ತಿತ್ವದಿಂದಲೇ ಓರ್ವ ಯೂತ್ ಐಕಾನ್ ಆಗಿ ಕಾಣಿಸಿಕೊಳ್ಳಬಲ್ಲ ವ್ಯಕ್ತಿತ್ವವು ಅವರಲ್ಲಿತ್ತು ಎಂಬುದನ್ನು ನಾನಲ್ಲಿ ಕಂಡುಕೊಂಡಿದ್ದೆ. ಹಾಗೆ ನೋಡಿದರೆ ಅಂದಾಜು ಮುನ್ನೂರು ಪುಟಗಳಷ್ಟಿದ್ದ ಆ ಪುಸ್ತಕವು ಅಂಥಾ ದೊಡ್ಡ ಓದಿನ ಹಿನ್ನೆಲೆಯಿರದಿದ್ದ ನನ್ನಂತಹ ಸಾಮಾನ್ಯ ವಿದ್ಯಾರ್ಥಿಯೊಬ್ಬನಿಗೆ ಸವಾಲೇ ಆಗಿತ್ತು. ಆದರೆ ಈ ಬೆಳವಣಿಗೆಗಳೆಲ್ಲ ಹೊಸದೊಂದು ಸಾಹಿತ್ಯ ಪ್ರಕಾರಕ್ಕೆ ನನ್ನನ್ನು ಪರಿಚಯಿಸಿದ್ದಂತೂ ಹೌದು.

ಕೈಯಲ್ಲಿ ಕಾಸಿರದಿದ್ದ ಆ ಬಾಲ್ಯದ ದಿನಗಳಲ್ಲಿ ಚಾಕ್ಲೇಟುಗಳು ಕೂಡ ನಮಗೆ ದುಬಾರಿಯಾಗಿ ಕಾಣುತ್ತಿದ್ದವು. ಇದರಿಂದಾಗಿ ಹೊಸ ಪುಸ್ತಕಗಳನ್ನು ಕೊಂಡು ಓದುವುದು ಸಹಜವಾಗಿ ಅಸಾಧ್ಯವಾಗಿತ್ತು. ಮೇಲಾಗಿ ನಮ್ಮ ಓದಿನ ವೇಗಕ್ಕೆ ಸರಿಯಾಗಿ ಪುಸ್ತಕಗಳನ್ನು ತಂದು ಸುರಿಯುವುದು ಕೂಡ ಸುಲಭದ ಮಾತಾಗಿರಲಿಲ್ಲ. ಹೀಗಾಗಿ ಇದ್ದ ನಾಲ್ಕೈದು ಪುಸ್ತಕಗಳನ್ನೇ ನಾನು ರಜಾದಿನಗಳಲ್ಲಿ ಲೆಕ್ಕವಿಲ್ಲದಷ್ಟು ಬಾರಿ ಓದುತ್ತಿದ್ದೆ. ಇದು ತೀರಾ ನೀರಸವೆನಿಸತೊಡಗಿದಾಗ ಒಂದಿಬ್ಬರು ಗೆಳೆಯರಿಂದ ಪುಸ್ತಕಗಳನ್ನು ಎರವಲು ಪಡೆದುಕೊಳ್ಳುವುದೂ ಇರುತ್ತಿತ್ತು. ಇದೊಂಥರಾ ಕೊಡುಕೊಳ್ಳುವಿಕೆಯ ವ್ಯವಸ್ಥೆಯಾಗಿತ್ತು ಎಂದರಡ್ಡಿಯಿಲ್ಲ. ಒಟ್ಟಿನಲ್ಲಿ ಅಂದಿನಿಂದ ಇಂದಿನವರೆಗೂ ಆತ್ಮಕತೆ/ಜೀವನಕಥನಗಳೆಂದರೆ ನನ್ನ ಬಹುಮೆಚ್ಚಿನ ಸಾಹಿತ್ಯಪ್ರಕಾರಗಳಲ್ಲೊಂದು.

ನನಗನಿಸುವಂತೆ ಓದುಗನೊಬ್ಬನಿಗೆ ತನ್ನ ಸುತ್ತಲಿನ ಜಗತ್ತಿನ ಬಗ್ಗೆ ಅಗಾಧ ಆಸಕ್ತಿಯಿರುವುದೇ ಹೌದಾದಲ್ಲಿ ಆತ್ಮಕತೆ/ಜೀವನಕಥನಗಳಿಗಿಂತ ಅತ್ಯುತ್ತಮವಾದ ಸಾಹಿತ್ಯಪ್ರಕಾರವು ಬೇರೊಂದಿರಲಿಕ್ಕಿಲ್ಲ. ಈ ಪ್ರಕಾರದ ಪುಸ್ತಕಗಳಿಂದಾಗಿ ನಾನು ಕೊರಿಯಾದ ಉಸಿರುಗಟ್ಟಿಸುವ ವಾತಾವರಣದಲ್ಲಿ ಬದುಕಿದ್ದೇನೆ. ಆಫ್ರಿಕಾದ ರಣಬಿಸಿಲಿನಲ್ಲಿ ಬೆಂದಿದ್ದೇನೆ. ಅಘೋರಿಗಳ ಸ್ಮಶಾನದಲ್ಲಿ ನಡುಗಿದ್ದೇನೆ. ಹಾಲಿವುಡ್ ವೈಭವದಲ್ಲಿ ವಿಹರಿಸಿದ್ದೇನೆ. ಇಂತಹ ಅಸಂಖ್ಯ ಅನುಭವಗಳಿಗಾಗಿ ನಾನು ಮಾಡಿದ್ದು ಬೇರೇನಿಲ್ಲ. ಏಕಾಂತವೊಂದನ್ನು ಸೃಷ್ಟಿಸಿಕೊಂಡು ಪುಟಗಳನ್ನು ತಿರುಗಿಸಿದ್ದಷ್ಟೇ ನನ್ನ ಶ್ರಮ. ಅಸಲಿಗೆ ಪಾಶ್ಚಾತ್ಯ ಲೇಖಕರ ಬಗ್ಗೆ ದಂಡಿಗಟ್ಟಲೆ ಲೇಖನಗಳನ್ನು ಬರೆದಿದ್ದ ಪಿ. ಲಂಕೇಶ್ ದೇಶ ಬಿಟ್ಟು ಹೋಗಿರಲೇ ಇಲ್ಲ. ಆದರೆ ಇಂಟರ್‌ನೆಟ್ ಬರುವ ಮುನ್ನ ಕನ್ನಡದ ಒಂದಿಡೀ ಪೀಳಿಗೆಗೆ ವಿಶ್ವ ಸಾಹಿತ್ಯದ ರಸದೌತಣವನ್ನು ಉಣಬಡಿಸಿದ್ದು ಲಂಕೇಶರು. ಅವರ ಅರಿವಿನ ವಿಸ್ತಾರ ಮತ್ತು ಜೀವನಪ್ರೀತಿ ಎಷ್ಟಿರಬಹುದು ಎಂಬುದನ್ನು ಲೆಕ್ಕ ಹಾಕಲು ಇದಿಷ್ಟು ಸಾಕು.

ಬದುಕಿನಲ್ಲಿ ಬಂದೊದಗುವ ಕಷ್ಟಗಳನ್ನು ನನಗೆ ವಿಭಿನ್ನ ರೀತಿಯಲ್ಲಿ ನೋಡಲು ಕಲಿಸಿದ್ದೇ ಜೀವನಕಥನಗಳು. ಸೊಮಾಲಿಯನ್ ರೂಪದರ್ಶಿ ವಾರಿಸ್ ಡಿರಿಯು ಕತೆಯನ್ನೇ ನೋಡಿ. ಸೊಮಾಲಿಯಾದ ಸಂಪ್ರದಾಯದಂತೆ ಯಾವ ಚಿತ್ರಹಿಂಸೆಗೂ ಕಮ್ಮಿಯಿರದ ಯೋನಿಛೇದನವನ್ನು (ಎಫ್.ಜಿ.ಎಮ್) ಚಿಕ್ಕ ವಯಸ್ಸಿನಲ್ಲೇ ಅವಳಿಗೆ ಮಾಡಿಬಿಡುತ್ತಾರೆ. ಇದು ಸಾಲದು ಎಂಬಂತೆ ಏಳರ ಬಾಲೆಗೆ ಅರವತ್ತರ ವೃದ್ಧನನ್ನು ಕಟ್ಟಲು ನೋಡುತ್ತಾರೆ. ಆದರೆ ಇವಳೋ, ರಾತ್ರೋರಾತ್ರಿ ತನ್ನ ಕುಗ್ರಾಮವನ್ನು ಬಿಟ್ಟು ಸೊಮಾಲಿಯಾದ ರಾಜಧಾನಿ ಮೊಗದಿಶು ಶಹರಕ್ಕೆ ಪಲಾಯನ ಮಾಡುತ್ತಾಳೆ. ಅಲ್ಲಿ ಯಾರ್ಯಾರದ್ದೋ ಚಾಕರಿ ಮಾಡುತ್ತಾಳೆ. ಬದುಕು ಬಂದ ಹಾಗೆ ಸಾಗುತ್ತಾ, ಮತ್ಯಾರದ್ದೋ ಮನೆಯಲ್ಲಿ ಚಾಕರಿ ಮಾಡಲು ನಂತರ ಬೇರೊಂದು ದೇಶಕ್ಕೆ ತೆರಳುತ್ತಾಳೆ. ನಂತರ ಈ ಉದ್ಯೋಗದಾತರಿಂದಲೇ ಹೊರದಬ್ಬಿಸಿಕೊಂಡು ಅಕ್ಷರಶಃ ಬೀದಿಗೆ ಬೀಳುತ್ತಾಳೆ. ಸಂಕಷ್ಟದ ದಿನಗಳು ಹೀಗಿದ್ದಾಗ ರೆಸ್ಟೋರೆಂಟುಗಳಲ್ಲಿ ನೆಲ ಒರೆಸುವ ಕೆಲಸ ಮಾಡುತ್ತಾ, ದಿನಕ್ಕೊಂದು ಬರ್ಗರ್ ಮಾತ್ರ ತಿನ್ನುತ್ತಾ ವಾರಿಸ್ ದಿನ ತಳ್ಳುತ್ತಾಳೆ. ಹಸಿವು ಹೆಚ್ಚಾದಾಗ ಯಾರೋ ಬಿಸುಟು ಹೋಗಿರುವ ತುತ್ತನ್ನು ತಿಂದು ಜಠರಾಗ್ನಿಯನ್ನು ತಣಿಸುತ್ತಾಳೆ. ಇಂತಹ ಆಫ್ರಿಕನ್, ಅನಕ್ಷರಸ್ಥ ಹೆಣ್ಣುಮಗಳೊಬ್ಬಳು ಮುಂದೆ ಜಗತ್ತಿನ ಪ್ರಖ್ಯಾತ ಸೂಪರ್ ಮಾಡೆಲ್ ಆಗಿ, ಮಿಲಿಯನ್ ಡಾಲರುಗಳಲ್ಲಿ ಸಂಭಾವನೆ ಎಣಿಸುತ್ತಾ ಎಲ್ಲೆಡೆ ಮಿಂಚುತ್ತಾಳಲ್ಲ... ಆ ರೋಚಕ ಸತ್ಯಕತೆಯನ್ನು ನೀವು ಓದಿಯೇ ಸವಿಯಬೇಕು.

ಹೀಗೆ ಬದುಕಿನ ಚಿಕ್ಕಪುಟ್ಟ ಅಡಚಣೆಗಳಿಗೆ ವ್ಯಥೆಪಟ್ಟು ಗೊಣಗುವ ನಾವು ನಿಜವಾದ ಸಂಕಷ್ಟವೇನು ಎಂಬುದನ್ನು ತಿಳಿಯಬೇಕಾದರೆ ಇದೇ ವಾರಿಸ್ ಡಿರೀಯ ಬದುಕಿನ ಬಗ್ಗೆ ಓದಬೇಕು. ಬದುಕಿನುದ್ದಕ್ಕೂ ಗಾಢವಾದ ಪ್ರೀತಿಯನ್ನು ಬಿಟ್ಟರೆ ಬೇರೇನನ್ನೂ ಹಂಬಲಿಸದ ಮುಗ್ಧ ಮನಸ್ಸಿನ ಬಗ್ಗೆ ತಿಳಿಯಬೇಕಾದರೆ, ತನ್ನ ಬಾಲ್ಯದ ಬಹುತೇಕ ಭಾಗವನ್ನು ಫಾಸ್ಟರ್ ಹೋಮ್‌ಗಳಲ್ಲಿ ಕಳೆದ ವಿಶ್ವವಿಖ್ಯಾತ ನಟಿ ಮರ್ಲಿನ್ ಮನ್ರೋರ ಬಗ್ಗೆ ಓದಬೇಕು. ಪುಟ್ಟ ಮಗುವಾಗಿದ್ದರೂ ಬಾಲ್ಯವು ಹೊರೆಯಾಗಿಬಿಡುವ ಭಯಂಕರ ಸ್ಥಿತಿಯ ಬಗ್ಗೆ ತಿಳಿಯುವ ಇಚ್ಛೆಯಿದ್ದರೆ ನಾವು ಪಾಪ್ ತಾರೆ ಮೈಕಲ್





ಜಾಕ್ಸನ್ ಬಗ್ಗೆ ಓದಬೇಕು. ಇನ್ನು ಜ್ಞಾನದ ಅಗಾಧ ಹಸಿವು, ನಿರಂತರ ಕಲಿಕೆ, ಪರಿಶ್ರಮಗಳು ಬದುಕಿನಲ್ಲಿ ತರಬಲ್ಲ ಪವಾಡಗಳನ್ನು ಅರಿಯಲು ಅಂಬೇಡ್ಕರ್ ಅಥವಾ ಕಲಾಂರನ್ನು ಓದಬೇಕು. ಕನಸುಕಂಗಳ ಬಾಲೆಯೊಬ್ಬಳು ಜಗತ್ತಿಗೇ ಬೆಳಕಾಗುವ ಪರಿಯನ್ನು ಕಾಣಲು ಅಕ್ಕಮಹಾದೇವಿಯ ಜೀವನಗಾಥೆಯನ್ನು ಓದಬೇಕು. ಕೆಲವು ಕತೆಗಳು ನಮಗರಿವಿಲ್ಲದಂತೆಯೇ ನಮ್ಮನ್ನು ರೂಪಿಸುವುದು ಹೀಗೆ.

ಹಾಗಂತ ಆತ್ಮಕತೆ / ಜೀವನಕಥನಗಳು ಪ್ರೇರಣೆಗಷ್ಟೇ ಸೀಮಿತವೇ? ಖಂಡಿತ ಅಲ್ಲ! ಅವುಗಳು ಒಂದಿಡೀ ತಲೆಮಾರಿನ ಕತೆಯನ್ನು ನಮ್ಮ ಮುಂದಿಡಬಲ್ಲವು. ನಮ್ಮ ಅರೆಬೆಂದ ಪೂರ್ವಾಗ್ರಹಗಳನ್ನು ಏಕಾಏಕಿ ನುಚ್ಚುನೂರು ಮಾಡಬಲ್ಲವು. ನಾವು ಬದುಕನ್ನು ನೋಡುವ ರೀತಿಯನ್ನೇ ಸಂಪೂರ್ಣವಾಗಿ ಬದಲಾಯಿಸಬಲ್ಲವು. ಉತ್ತರ ಕೊರಿಯಾ ಎಂಬ ತೆರೆದ ಜೈಲಿನಂತಿರುವ ಸಾಮಾಜಿಕ ವ್ಯವಸ್ಥೆಯಿಂದ ಪರಾರಿಯಾಗಿ, ಹೇಗೋ ಬದುಕುಳಿಯುವ ಯೋನ್ಮಿ ಪಾರ್ಕ್ ಎಂಬ ತರುಣಿಯ ಬಗ್ಗೆ ಓದುವ ನನಗೆ, ನನ್ನ ದೇಶದ ಬಗ್ಗೆ ಕೃತಜ್ಞ ಭಾವ ಮೂಡುತ್ತದೆ. ತಾಲಿಬಾನ್ ರಾಕ್ಷಸರಿಂದ ನಲುಗಿಹೋದ ಮುಖ್ತಾರ್ ಮಾಯಿಯು ಬಗ್ಗೆ ಓದುವ ನಾನು ಸದ್ದಿಲ್ಲದೆ ಬೆಚ್ಚಿಬೀಳುತ್ತೇನೆ. ಓಶೋರ ಸಾಹಸಗಳನ್ನು ಓದುತ್ತಾ ಹೋದರೆ ನಮಗೆ ಸಿಗುವುದು ಅವರ ಬದುಕಿನ ಚಿತ್ರಣ ಮಾತ್ರವಲ್ಲ. ಬದಲಾಗಿ ಆ ಕಾಲಘಟ್ಟದ ರಾಜಕೀಯ–ಸಾಮಾಜಿಕ ಪರಿಸ್ಥಿತಿಯಿಂದ ಹಿಡಿದು, ಹಿಪ್ಪಿ ಚಳುವಳಿಯ ವಿಕಾಸದವರೆಗೂ ನಡೆಯುವ ಹತ್ತಾರು ಬೆಳವಣಿಗೆಗಳು ನಮ್ಮ ಮುಂದೆ ಸಿನಿಮೀಯ ರೀತಿಯಲ್ಲಿ ತೆರೆದುಕೊಳ್ಳುತ್ತಾ ಹೋಗುತ್ತವೆ. ಈ ರೀತಿಯಲ್ಲಿ ನೋಡಿದರೆ ಪುಸ್ತಕಗಳು ಯಾವ ಟೈಮ್ ಮಷೀನ್ ಗಳಿಗೂ ಕಮ್ಮಿಯಿಲ್ಲ.

ಕೆಲವೊಮ್ಮೆ ಜೀವನಕಥನಗಳು ತನಿಖಾ ವರದಿಯ ಅಥವಾ ನೆನಪುಗಳ ಮಾಲಿಕೆಯ ರೂಪದಲ್ಲೂ ಬರುವ ರೂಢಿಯಿದೆ. ಇದಲ್ಲದೆ ಕೆಲ ಖ್ಯಾತನಾಮರ ಬಗ್ಗೆ ಯಾರಾದರೂ ನಿಷ್ಠುರವಾಗಿ ಬರೆದಾಗ ಅಂತಹ

ಪುಸ್ತಕಗಳು ನಿಷೇಧಕ್ಕೊಳಗಾಗುವುದೂ ಇದೆ. ಪ್ರಭುತ್ವವು ಪುಸ್ತಕವೊಂದನ್ನು ನಿಷೇಧಿಸುತ್ತಿದೆ ಅಂತಾದರೆ ಆ ಪುಸ್ತಕವನ್ನು ನೀನು ಖಂಡಿತ ಓದಬೇಕು ಅಂತ ನನ್ನ ಗುರುಗಳೊಬ್ಬರು ಹೇಳುತ್ತಿದ್ದರು. ಅಂತಹ ಕೆಲ ಅಪರೂಪದ ಪುಸ್ತಕಗಳು ರದ್ದಿ ಅಂಗಡಿಗಳಲ್ಲಿ ಅಥವಾ ಸೆಕೆಂಡ್ ಹ್ಯಾಂಡ್ ಸ್ಟೋರುಗಳಲ್ಲಿ ಆಕಸ್ಮಿಕವಾಗಿ ಸಿಗುವುದೂ ಇದೆ. ಇಂದಿಗೂ ದಿಲ್ಲಿಯ ಹೆಸರಾಂತ ಪುಸ್ತಕದಂಗಡಿಗಳಿಗಿಂತ ಭಾನುವಾರಗಳಲ್ಲಷ್ಟೇ ಗ್ರಾಹಕರಿಗಾಗಿ ತೆರೆಯುವ ದರಿಯಾಗಂಜ್ ಪುಸ್ತಕದ ಮಾರುಕಟ್ಟೆಯು ಪುಸ್ತಕಪ್ರೇಮಿಗಳಿಗೆ ಇಷ್ಟವಾಗುವುದು ಇಂಥದ್ದೇ ಕಾರಣಗಳಿಗಾಗಿ!

ಇವೆಲ್ಲ ಕನವರಿಕೆಯ ಮಧ್ಯದಲ್ಲೂ ಓದುಗ ಅಭಿಮಾನಿಯೊಬ್ಬನ ತಾಪತ್ರಯಗಳು ಸಾಕಷ್ಟಿರುತ್ತವೆ. ಅವುಗಳನ್ನು ಹೇಳದಿದ್ದರೆ ನಿಸ್ಸಂದೇಹವಾಗಿ ಬರಹದ ಪ್ರಾಮಾಣಿಕತೆಗೆ ದ್ರೋಹ ಬಗೆದಂತಾಗುತ್ತದೆ. ತಂದು ಗುಡ್ಡೆ ಹಾಕಿರುವ ಪುಸ್ತಕಗಳೆಲ್ಲವೂ ಓದಿನ ಭಾಗ್ಯವನ್ನು ಪಡೆಯದಿರುವುದು ಇವುಗಳಲ್ಲಿ ಪ್ರಮುಖವಾದುದು. ಉದಾಹರಣೆಗೆ ಅಲಿಸ್ಟರ್ ಕ್ರೌಲೇಯ ಜೀವನಕಥನವೊಂದು ಕಳೆದ ಹತ್ತು ವರ್ಷಗಳಿಂದ ನನ್ನ ಪುಸ್ತಕದ ಕಪಾಟಿನಲ್ಲಿ ತಣ್ಣಗೆ ಕೂತಿದೆ. ಜಗತ್ತಿನ ಅತ್ಯಂತ ವಿಕ್ಷಿಪ್ತ ವ್ಯಕ್ತಿ ಎಂದು ಕುಖ್ಯಾತನಾಗಿದ್ದ ಕ್ರೌಲೇ ಪವಾಡದ ಜಗತ್ತಿನಲ್ಲಿ ಅದ್ವಿತೀಯ ಸಾಧನೆಗಳನ್ನು ಮಾಡಿದವನು. ಕಾಣದ ಶಕ್ತಿಗಳೊಂದಿಗೆ ವಿಚಿತ್ರ ಪ್ರಯೋಗಗಳನ್ನು ಮಾಡುತ್ತಾ ತನ್ನ ಭೌತಿಕ-ಆಧ್ಯಾತ್ಮಿಕ ಎಲ್ಲೆಗಳನ್ನು ಮೀರಲು ಶಕ್ತಿಮೀರಿ ಪ್ರಯತ್ನಿಸಿದವನು. ಮಾಂತ್ರಿಕರ ನಿಗೂಢ ಲೋಕದಲ್ಲಿ ನಿಗೂಢವಾಗಿಯೇ ಉಳಿದು ಬಿಟ್ಟವನು. ವಿಶೇಷವೆಂದರೆ ತನ್ನ ಜೀವಮಾನದ ಒಂದು ಹಂತದಲ್ಲಿ ಕ್ರೌಲೇ ನಮ್ಮ ಹಿಮಾಲಯದವರೆಗೂ ಬಂದಿದ್ದ. ಇಂತಿಪ್ಪ ಕ್ರೌಲೇ ಮಹಾಶಯನ "ಪೆರ್ಡುರಾಬೋ" ಎಂಬ ಬೃಹತ್ ಜೀವನಕಥನವೊಂದನ್ನು ನಾನು ವಿದೇಶದಿಂದ ತರಿಸಿಕೊಂಡಿದ್ದೆ. ಅಪರೂಪದ ಚಿತ್ರಗಳೊಂದಿಗೆ ಸಮೃದ್ಧವಾಗಿರುವ, ಆತನ ಬದುಕನ್ನು ದಾಖಲಿಸುವ ಇಷ್ಟು ವಿಸ್ತೃತವಾದ ಕೃತಿಯು ಬೇರೆಲ್ಲೂ ಬಂದಂತಿಲ್ಲ. ಆದರೆ ತನ್ನ ಬೃಹತ್ ಗಾತ್ರ ಮತ್ತು ಕ್ಲಿಷ್ಟವಾದ ನಿರೂಪಣೆಯಿಂದಾಗಿ, ಇದೊಂದು ಪುಸ್ತಕವು ಕೊನೆಗೂ ಹೇಳದೆ ಉಳಿದುಬಿಟ್ಟ ಪ್ರೇಮ ನಿವೇದನೆಯಂತೆ ನನ್ನ ಪಾಲಿಗೆ ಬಾಕಿ ಉಳಿದು ಬಿಟ್ಟಿದೆ. ಕ್ರೌಲೇಯ ವಿಚಿತ್ರ ಛಾಯಾಚಿತ್ರವೊಂದನ್ನು ಮುಖಪುಟವನ್ನಾಗಿ ಬಳಸಿಕೊಂಡಿರುವ ಈ ಪುಸ್ತಕವನ್ನು ಕಂಡಾಗಲೆಲ್ಲ ಅದು ನನ್ನನ್ನು ಅಣಕಿಸುತ್ತಿದೆ





ಎಂಬ ಭಾವವು ಮೂಡುವುದು ಸುಳ್ಳಲ್ಲ.

ನನ್ನ ಮಟ್ಟಿಗೆ ಇಂಥದ್ದೇ ರೋಚಕತೆಯನ್ನು ಉಳಿಸಿಕೊಂಡಿರುವ ಮತ್ತು ಇಂದಿನವರೆಗೆ ಓದದೇ ಬಾಕಿಯಾಗಿರುವ ಮತ್ತೊಂದು ಜೀವನಕಥನವೆಂದರೆ ಗ್ಯಕೋಮೋ ಕ್ಯಾಸನೋವಾನದ್ದು. ಕ್ಯಾಸನೋವಾ ಹದಿನೆಂಟನೇ ಶತಮಾನದ ಇಟಲಿಯಲ್ಲಿ ಹುಟ್ಟಿದವನು. ಜೀವಿತಾವಧಿಯುದ್ದಕ್ಕೂ ತನ್ನ ವಿಚಿತ್ರ ಸಾಹಸಗಳಿಂದಲೇ ಪ್ರಖ್ಯಾತಿ ಮತ್ತು ಕುಖ್ಯಾತಿಯನ್ನು ಪಡೆದುಕೊಂಡಿರುವವನು. ವಿವಿಧ ಬಗೆಯ ವೃತ್ತಿಗಳಲ್ಲಿ ತೊಡಗಿಕೊಳ್ಳುವುದು, ಅದರಲ್ಲಿ ದೊಡ್ಡ ಮಟ್ಟಿನ ಯಶಸ್ಸನ್ನು ಸಾಧಿಸುವುದು, ಗಳಿಸಿದ್ದೆಲ್ಲವನ್ನು ಕಳೆದುಕೊಂಡು ಬೀದಿಗೆ ಬರುವುದು, ನಂತರ ಹಿಂದಿಗಿಂತ ಹತ್ತು ಪಟ್ಟು ಹೆಚ್ಚು ಸಂಪಾದಿಸುವಲ್ಲಿ ಯಶಸ್ವಿಯಾಗುವುದು. ಹೀಗೆ ಇವನ ಸಾಹಸಗಳು ಒಂದೆರಡಲ್ಲ. ಲಾಟರಿಯನ್ನು ಹುಟ್ಟು ಹಾಕಿದ್ದೇ ಇವನೆಂದು ಹೇಳಲಾಗುತ್ತದೆ. ಮಹಾಲಂಪಟನೆಂದು ಕುಖ್ಯಾತನಾಗಿದ್ದ ಕ್ಯಾಸನೋವಾ ತಾನು ಹೋದಲ್ಲೆಲ್ಲಾ ನೂರಾರು ಸುಂದರಿಯರನ್ನು ಪ್ರೇಮಿಸಿದವನು. ಸಾಮಾನ್ಯವಾಗಿ ಸ್ತ್ರೀಲೋಲುಪತೆಯಲ್ಲಿ ಸದಾ ತೊಡಗಿಕೊಂಡಿರುವ ಗಂಡಸರನ್ನು ಇಂದಿಗೂ "ಕ್ಯಾಸನೋವಾ" ಅಂತಲೇ ಚುಡಾಯಿಸುವ ರೂಢಿಯಿದೆ. ಹೀಗೆ ಒಂದಿಲ್ಲೊಂದು ನಿರಂತರ ಸಾಹಸಗಳನ್ನು ಮಾಡುತ್ತಾ ಭಯಂಕರ ಬ್ಯುಸಿಯಾಗಿದ್ದ ಕ್ಯಾಸನೋವಾ, ನಂತರದ ವರ್ಷಗಳಲ್ಲಿ ತನ್ನ ಆತ್ಮಕತೆಯನ್ನೂ ಫ್ರೆಂಚ್ ಭಾಷೆಯಲ್ಲಿ ಬರೆದಿದ್ದ ಎಂಬುದನ್ನು ನೀವು ನಂಬಲೇಬೇಕು.

ಬಯೋಪಿಕ್‌ಗಳು ಹಿಂದೆಂದಿಗಿಂತಲೂ ಹೆಚ್ಚು ಬರುತ್ತಿರುವ ಈಗಿನ ಕಾಲದಲ್ಲಿ ಆತ್ಮಕತೆ/ಜೀವನಕಥನಗಳನ್ನೇಕೆ ಓದಬೇಕು ಎಂಬ ಪ್ರಶ್ನೆಯು ಇಂದು ಬಹುತೇಕರಲ್ಲಿದೆ. ಏಕೆಂದರೆ ದಪ್ಪನೆಯ ಆತ್ಮಕತೆಯೊಂದನ್ನು ದಿನ-ವಾರಗಟ್ಟಲೆ ಓದುವುದರ ಬದಲಾಗಿ ಸಿನೆಮಾ/ಸಾಕ್ಷ್ಯ ಚಿತ್ರವೊಂದನ್ನು ವೀಕ್ಷಿಸುವುದರಿಂದ ಎರಡು-ಮೂರು ತಾಸುಗಳಲ್ಲೇ ಸಾಕಷ್ಟು ಸಂಗತಿಗಳು ನಮಗೆ ಸಿಗುತ್ತದಲ್ಲ ಎಂಬುದು ಒಂದು ವಾದ. ಇದಕ್ಕಿರುವ ಸರಳ ಉತ್ತರವೆಂದರೆ ದೃಶ್ಯ ಮಾಧ್ಯಮಕ್ಕಿರುವ ಸೀಮಿತ ಚೌಕಟ್ಟು. ಜೀವನಕಥನವೊಂದನ್ನು ಬರೆಯುವಾಗ ಲೇಖಕನಿಗೆ ಸಿಗುವ ಚೌಕಟ್ಟು ಸಿನೆಮಾಗಿಂತ ನೂರಾರು ಪಟ್ಟು ದೊಡ್ಡದು. ಲೇಖಕನೊಬ್ಬ ತಾನು ಬರೆಯುತ್ತಿರುವ ಜೀವನಕಥನವನ್ನು ನೂರು-ಸಾವಿರ ಪುಟಗಳವರೆಗೂ ವಿಸ್ತರಿಸುತ್ತಾ ಹೋಗಬಹುದು. ಆದರೆ ದೃಶ್ಯ ಮಾಧ್ಯಮವು ನಿರ್ದೇಶಕನಿಗೆ ಅಷ್ಟರಮಟ್ಟಿನ ಸ್ವಾತಂತ್ರ್ಯವನ್ನು ಎಂದಿಗೂ ನೀಡಲಾರದು. ಇರುವ ಸಂಗತಿಗಳನ್ನು ಇರುವಂತೆಯೇ ತೋರಿಸಿದರೆ ಅದು ಡಾಕ್ಯುಮೆಂಟರಿಯಾಗುವ ಸಂಭವವಿರುತ್ತದೆ. ಇನ್ನು ಸಿನೆಮಾ ಮಾಡುವುದೇ ಗುರಿಯಾದರೆ ಅಲ್ಲಲ್ಲಿ ಒಂದಿಷ್ಟು ನಾಟಕೀಯ ಮಸಾಲೆಯನ್ನೂ ಒತ್ತಾಯಪೂರ್ವಕವಾಗಿ ಬೆರೆಸಬೇಕಾಗುತ್ತದೆ. ಅತ್ತ ತೀರಾ ಚಿಕ್ಕದಾದರೆ ಅದು ಕಿರುಚಿತ್ರ. ಇತ್ತ ಸಿಕ್ಕಾಪಟ್ಟೆ ದೊಡ್ಡದಾದರೆ ಹಲವು ಕಂತುಗಳಲ್ಲಿ ಬರುವ ವೆಬ್ ಸೀರೀಸ್. ಹೀಗೆ ಸಿನೆಮಾ, ಸಾಕ್ಷ್ಯಚಿತ್ರ, ಕಿರುಚಿತ್ರ, ವೆಬ್ ಸರಣಿಗಳೆಲ್ಲದರ ಸ್ವರೂಪವೂ ವಿಭಿನ್ನವಾಗಿರುವುದರಿಂದ ವ್ಯಕ್ತಿಯೊಬ್ಬನ ಬದುಕಿನ ಕತೆಯೊಂದನ್ನು ಈ ಬಗೆಯ ದೃಶ್ಯಮಾಧ್ಯಮಗಳ ಅವಶ್ಯಕತೆಗೆ ತಕ್ಕಂತೆ ಹಿಗ್ಗಿಸುವುದು ಅಥವಾ ಚಿಕ್ಕದಾಗಿಸುವುದು ಕೂಡ ದೊಡ್ಡ ಸವಾಲೇ.


ಬಹುಷಃ ಈ ಕಾರಣಕ್ಕಾಗಿಯೇ ಸಾಮಾನ್ಯವಾಗಿ ಪುಸ್ತಕಗಳನ್ನು ಓದಲು ಇಷ್ಟಪಡುವವರು




ಕೃತಿಯಾಧಾರಿತ ಸಿನೆಮಾಗಳನ್ನು ವೀಕ್ಷಿಸಲು ಅಷ್ಟಾಗಿ ಇಷ್ಟಪಡುವುದಿಲ್ಲ. ಪೂರ್ಣಚಂದ್ರ ತೇಜಸ್ವಿಯವರ ಖ್ಯಾತ ಕತೆಯಾದ "ಡೇರ್ ಡೆವಿಲ್ ಮುಸ್ತಫಾ" ಸಿನೆಮಾ ರೂಪದಲ್ಲಿ ತೆರೆಗೆ ಬಂದಾಗ ಅದು ವಿಫಲವಾಯಿತು. ಲೇಖಕಿ ಸಿಸಿಲಿಯಾ ಆಹೆರ್ನ್ ರವರ "PS I Love You" ಪುಸ್ತಕವು ಸಿನೆಮಾ ಆಗಿ ಹೊರಬಂದಾಗ ಕಾದಂಬರಿಯ ಮರ್ಯಾದೆ ತೆಗೆದಿರಿ ಎಂದು ಬೈದವರೇ ಹೆಚ್ಚು. ತೀರಾ ಇತ್ತೀಚೆಗೆ ವಿವಾದಗಳಿಂದ ವಿಪರೀತ ಸುದ್ದಿ ಮಾಡಿದ್ದ "ಎಮರ್ಜೆನ್ಸಿ" ಚಿತ್ರವೂ ಕೂಡ ಇಂಥದ್ದೇ ಟೀಕೆಗಳಿಗೆ ಗ್ರಾಸವಾಯಿತು. "ಎಮರ್ಜೆನ್ಸಿ" ಎಂಬ ಶೀರ್ಷಿಕೆಯನ್ನು ಹೊಂದಿದ್ದ ಚಿತ್ರವು ದೇಶದ ತುರ್ತುವ್ಯವಸ್ಥೆಯ ದಿನಗಳ ಕತೆಯನ್ನಷ್ಟೇ ಹೇಳಲಿದೆ ಎಂಬುದು ಸಿನಿಪ್ರೇಮಿಗಳ ನಿರೀಕ್ಷೆಯಾಗಿತ್ತು. ಆದರೆ ಭಾರತದ ಮಾಜಿ ಪ್ರಧಾನಿಯಾಗಿದ್ದ ಇಂದಿರಾಗಾಂಧಿಯವರ ಸಂಪೂರ್ಣ ಜೀವನಗಾಥೆಯನ್ನು ದೃಶ್ಯರೂಪದಲ್ಲಿ ತೋರಿಸಲು ಪ್ರಯತ್ನಿಸಿದ್ದು ಚಿತ್ರದ ಸೋಲಿಗೆ ಪ್ರಮುಖ ಕಾರಣವಾಯಿತು. ಅಸಲಿಗೆ ಬಹುರೂಪಿ ವ್ಯಕ್ತಿತ್ವವನ್ನು ಹೊಂದಿದ್ದ ಇಂದಿರಾಗಾಂಧಿಯಂತಹ ಪ್ರಖ್ಯಾತ ನಾಯಕಿಯ ಇಡೀ ಬದುಕನ್ನು ಎರಡೂವರೆ ತಾಸಿನ ಸಿನೆಮಾ ಒಂದರಲ್ಲಿ ಹಿಡಿದಿಡುತ್ತೇವೆ ಎಂಬುದೇ ಒಂದು ದುಸ್ಸಾಹಸ. ಇದಕ್ಕೂ ಚೊಂಬು ಹಿಡಿದುಕೊಂಡು ಸಮುದ್ರದ ನೀರು ಖಾಲಿ ಮಾಡುತ್ತೇವೆ ಎನ್ನುವುದಕ್ಕೂ ಹೆಚ್ಚಿನ ವ್ಯತ್ಯಾಸಗಳಿಲ್ಲ.

ಮುಂದಿನ ಬಾರಿ ಪುಸ್ತಕದಂಗಡಿಗೆ ಹೋದರೆ ಆತ್ಮಕತೆ/ಜೀವನಕಥನಗಳ ವಿಭಾಗದಲ್ಲೊಮ್ಮೆ ಸುಮ್ಮನೆ ಕಣ್ಣಾಡಿಸಿ ನೋಡಿ. ಹೊಸ ಓದುಗರಾದರೆ ಸರಳವೆನಿಸುವ ಪುಸ್ತಕಗಳನ್ನೇ ಕೈಗೆತ್ತಿಕೊಳ್ಳಿ. ಅನುಭವಿ ಓದುಗರಾದರೆ ಹೊಸತೇನನ್ನು ಓದಬಹುದು ಎಂಬ ತಲಾಶೆಯಲ್ಲಿ ಹೊರಡಿ. ಯಾರ ಬದುಕಿನ ಕತೆಯಾದರೂ ಒಮ್ಮೆಯೂ ಓದಿಡಲಾಗದಷ್ಟು ನೀರಸವಾಗಿರುವುದು ಅಸಾಧ್ಯ ಎಂಬ ಮಾತಿದೆ. ಆದರೆ ಅದು ಸತ್ಯವೋ ಸುಳ್ಳೋ ಎಂಬುದನ್ನು ಅರಿಯಲು ಮಾತ್ರ ಓದಿನ ಅನುಭವವು ನಿಮ್ಮದೇ ಆಗಬೇಕು. ❑

ಲೇಖಕರು :
**ಶ್ರೀ ಪ್ರಸಾದ್ ನಾಯ್ಕ್**
ಅಂಕಣಕಾರರು
ಅನುವಾದಕರು ಮತ್ತು
ಕಥೆಗಾರರು, ಗುರುಗ್ರಾಮ



# ಗುರುವಂದನಾ ಕಾರ್ಯಕ್ರಮ



ದೆಹಲಿ ಕನ್ನಡ ಶಿಕ್ಷಕ ಬಳಗದ ವತಿಯಿಂದ ದಿನಾಂಕ 10.07.2025ರಂದು ಗುರುಪೂರ್ಣಿಮೆ ದಿನದ ಶುಭ ಸಂದರ್ಭದಲ್ಲಿ ಗುರುವರ್ಯರು, ಮಾತೃ ಸಮಾನರಾದ ಶ್ರೀಮತಿ ಶಕುಂತಲಾ ಜಿ. ಸೋನಾರ್ ಅವರನ್ನು ನವದೆಹಲಿಯ ಸಿದ್ಧಾರ್ಥ ನಗರದಲ್ಲಿರುವ ಅವರ ಸ್ವಗೃಹದಲ್ಲಿ ಗುರುಪೂಜೆಗೈದು ಗೌರವಿಸಲಾಯಿತು.

ಗೌರವ ಅಭಿನಂದನೆಯನ್ನು ಸ್ವೀಕರಿಸಿದ ಶ್ರೀಮತಿ ಶಕುಂತಲಾ ಜಿ. ಸೋನಾರ್ ಅವರು ಮಾತನಾಡಿ ಬದುಕಿನ ದಾರಿಯಲ್ಲಿ ನಮ್ಮ ಕೈಹಿಡಿದು ಸನ್ಮಾರ್ಗದತ್ತ ಕೊಂಡೊಯ್ಯುವವನೇ ಗುರು. ಜ್ಞಾನದ ದೀಪವನ್ನು ಬೆಳಗಿಸಿ ಬದುಕಿಗೆ ಬೆಳಕನ್ನು ಧಾರೆಯೆರುವ ಪ್ರತಿಯೊಬ್ಬನೂ ಗುರು. ಇಂದಿನ ಶಿಕ್ಷಣ ವ್ಯವಸ್ಥೆಯಲ್ಲಿ ಶಿಕ್ಷಕರನ್ನು ಕೇವಲ ವಿಷಯಕ್ಕೆ ಸೀಮಿತಗೊಳಿಸಲಾಗಿದೆ. ವಿದ್ಯಾರ್ಥಿಗಳಿಗೆ ಬೋಧಿಸುವುದರೊಂದಿಗೆ ಅವರ ಸರ್ವಾಂಗೀಣ ಅಭಿವೃದ್ಧಿಗೆ ಯೋಚಿಸುವವನು, ಯೋಜಿಸುವವನು ಗುರುವಿನ ಸ್ಥಾನವನ್ನು ಅಲಂಕರಿಸುತ್ತಾನೆ ಎಂದು ಹೇಳಿದರು.

ಶ್ರೀಮತಿ ಶಕುಂತಲಾ ಜಿ. ಸೋನಾರ್ ಅವರು ಮೂಲತಃ ಮಹಾರಾಷ್ಟ್ರದವರು. ಆದರೆ ಬೆಳೆದದ್ದು, ಓದಿದ್ದು ಕರ್ನಾಟಕದಲ್ಲಿ. ಎನ್.ಟಿ.ಸಿ. ತರಬೇತಿಯನ್ನು ಪಡೆದು ನರ್ಸರಿ ಶಿಕ್ಷಕರಾಗಿ ನೇಮಕಗೊಂಡರು. ಬಳಿಕ ಹಿಂದಿ ಭಾಷೆಯಲ್ಲಿ ಬಿ.ಇಡಿ ಪದವಿಯನ್ನು ಪಡೆದು ಮೈಸೂರು ವಿಶ್ವವಿದ್ಯಾಲಯದಿಂದ ಕನ್ನಡ ಭಾಷೆಯಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದರು. 1970ರಲ್ಲಿ 'ಮಾಜಾ ಶಿ ಬೋಲ್ತೆ ಮಿ' (ನನ್ನ ಜೊತೆನೇ ನಾನು ಮಾತಾಡಿಕೊಳ್ತೀನಿ) ಮರಾಠಿ ಭಾಷೆಯಲ್ಲಿ ಇವರ ಆತ್ಮಕತೆ ಪ್ರಕಟವಾಯಿತು. ಈ ಕೃತಿಗೆ ಗುಲ್ಬರ್ಗ ವಿಶ್ವವಿದ್ಯಾಲಯದಿಂದ ರಾಜ್ಯೋತ್ಸವ ಪ್ರಶಸ್ತಿ, ಪಂಢರಪುರ, ಸೋಲ್ಲಾಪುರ ಹಾಗೂ ಚಂದ್ರಪುರದಿಂದ ಗೌರವ ಪುರಸ್ಕಾರಗಳು ದೊರೆತಿವೆ. ಹೆಣ್ಣು ಮಕ್ಕಳಿಗೆ ಶಿಕ್ಷಣದ ಅಗತ್ಯ ಯಾಕೆ ಬೇಕು? ಎನ್ನುವ ವಿಚಾರವನ್ನು ತೆರೆದಿಡುವ ಈ ಕೃತಿಯನ್ನು ಕನ್ನಡಕ್ಕೆ ಅನುವಾದಿಸಬೇಕೆಂಬ ಇಚ್ಛೆ ಅವರಿಗಿದೆ. ಇದಲ್ಲದೆ ಇವರ ಮಾನಸ ಸರೋವರ ಮತ್ತು ಪ್ರೇಮಾನುರಾಗ ಎಂಬ ಎರಡು ಕವನ ಸಂಕಲನಗಳು ಬಿಡುಗಡೆಗೊಂಡಿದೆ. ಬಿಡುವಿನ ವೇಳೆಯಲ್ಲಿ ಚಿತ್ರಕಲೆಯಲ್ಲಿ ತೊಡಗಿಸಿಕೊಳ್ಳುವ ಇವರು ಕಲಾಪ್ರೇಮಿ, ಸಾಹಿತ್ಯಪ್ರೇಮಿ. ಎಂಭತ್ತರ ಇಳಿ ವಯಸ್ಸಿನಲ್ಲೂ ಇನ್ನೂ ಓದಬೇಕು, ಬರೆಯಬೇಕೆಂಬ ಒಲವಿದೆ. ಜನ್ಮ ನೀಡಿದ ತಾಯಿ ಮಹಾರಾಷ್ಟ್ರ ಸಾಕಿ ಬೆಳೆಸಿದ್ದು ಕರ್ನಾಟಕ, ಕನ್ನಡ ಮತ್ತು ಮರಾಠಿ ಎರಡು ಕಣ್ಣುಗಳಿದ್ದಂತೆ ಎಂದು ಹೆಮ್ಮೆಯಿಂದ ಹೇಳುತ್ತಾರೆ.

ಮಗಳು ಚಿತ್ರಕಲಾ ಶಿಕ್ಷಕಿ ಶ್ರೀಮತಿ ಜ್ಯೋತಿ ಎಸ್. ಪೊದ್ದಾರ್, ಅಳಿಯ ಖ್ಯಾತ ಚಿತ್ರ ಕಲಾವಿದ ಶ್ರೀಯುತ ಶ್ರೀಕಾಂತ್ ಪೊದ್ದಾರ್, ಮೊಮ್ಮಕ್ಕಳಾದ ಅಕ್ಷಯ್ ಪೊದ್ದಾರ್, ಸೃಷ್ಟಿ ಪೊದ್ದಾರ್, ಸಮಾಜ ವಿಜ್ಞಾನ ಶಿಕ್ಷಕಿ ಶ್ರೀಮತಿ ಗುರುದೇವಿ ಭಜಂತ್ರಿ ಗುರುವಂದನೆ ಸಂದರ್ಭದಲ್ಲಿ ಉಪಸ್ಥಿತರಿದ್ದರು. ವಿಜ್ಞಾನ ಶಿಕ್ಷಕ ಶ್ರೀ ಹೆಚ್.ಎಸ್. ತೇಲಿ ಅವರು ಗುರುಪೂರ್ಣಿಮ ಮಹತ್ವದ ಬಗ್ಗೆ ಮಾತನಾಡಿದರು. ಸಮಾಜ ವಿಜ್ಞಾನ ಶಿಕ್ಷಕಿ ಶ್ರೀಮತಿ ಲಾವಣ್ಯ ಎಂ.ಎಸ್. ಅಭಿನಂದನಾ ಪತ್ರ ವಾಚಿಸಿದರು. ಸಹಶಿಕ್ಷಕಿ ಶ್ರೀಮತಿ ಸುನೀತಾ ಎನ್.ಜೆ. ಪ್ರಾರ್ಥಿಸಿದರು. ರಾಜ್ಯಶಾಸ್ತ್ರ ಉಪನ್ಯಾಸಕ ನಾಗರಾಜ್ ಎಂ. ಸ್ವಾಗತಿಸಿದರು. ಕನ್ನಡ ಶಿಕ್ಷಕ ಶ್ರೀ ಅರವಿಂದ ಬಿಜ್ಜೆ ಕಾರ್ಯಕ್ರಮ ನಿರೂಪಿಸಿದರು ಮತ್ತು ಕೊನೆಯಲ್ಲಿ ಎಲ್ಲರಿಗೂ ವಂದನೆಗಳನ್ನು ಸಲ್ಲಿಸಿದರು. ❑

*ಅರವಿಂದ ಬಿಜ್ಜೆ*

## ದೆಹಲಿ ತುಳುವ ಮಹಾಸಭೆಯ ಸಂಚಾಲಕರಾಗಿ ಶ್ರೀ ಪ್ರಕಾಶ್ ಶೆಟ್ಟಿ ಉಳೆಪಾಡಿಯವರು ನೇಮಕ



ತುಳು ಭಾಷೆ, ಸಂಸ್ಕೃತಿ, ಮತ್ತು ಸಮುದಾಯ ಹಕ್ಕುಗಳ ರಕ್ಷಣೆಗೆ ಶತಮಾನಾಂತರದಿಂದ ಶ್ರಮಿಸುತ್ತಿರುವ ತುಳುವ ಮಹಾಸಭೆ, ನವದೆಹಲಿ ಘಟಕದ ಸಂಚಾಲಕರಾಗಿ ಶ್ರೀ ಪ್ರಕಾಶ್ ಶೆಟ್ಟಿ ಉಳೆಪಾಡಿ ಅವರನ್ನು ನಾಮನಿರ್ದೇಶನ ಮಾಡಲಾಗಿದೆ. ಈ ನೂತನ ನೇಮಕದಿಂದ ಭಾರತದ ಸಂವಿಧಾನದ ಎಂಟನೇ ಪರಿಚ್ಛೇದಕ್ಕೆ ತುಳು ಭಾಷೆಯನ್ನು ಸೇರಿಸುವ ಹೋರಾಟಕ್ಕೆ ಹೊಸ ಶಕ್ತಿ ತುಂಬಲಿದೆ ಎಂದು ರಾಜ್ಯ, ರಾಷ್ಟ್ರ ಹಾಗೂ ಅಂತರರಾಷ್ಟ್ರೀಯ ಮಟ್ಟದ ತುಳು ಸಂಘಟನೆಗಳು ಈ ನೇಮಕಾತಿಯನ್ನು ಸ್ವಾಗತಿಸಿವೆ.

ತುಳುವ ಮಹಾಸಭೆ, 1928ರಲ್ಲಿ ಹಿರಿಯ ತುಳುವಾದಿ ಎಸ್.ಯು. ಪಣಿಯಾಡಿ ಅವರ ನೇತೃತ್ವದಲ್ಲಿ ಸ್ಥಾಪಿತವಾದ ಈ ಸಂಘಟನೆ, ತುಳು ಭಾಷೆ, ಸಂಸ್ಕೃತಿ, ಸಂಪ್ರದಾಯ ಹಾಗೂ ತುಳುವರ ಹಕ್ಕುಗಳ ಸಂರಕ್ಷಣೆ ಮತ್ತು ಪ್ರಚಾರಕ್ಕಾಗಿ ಶ್ರಮಿಸುತ್ತಿದೆ. ಶತಮಾನೋತ್ಸವದ ಹೆಜ್ಜೆಯಲ್ಲಿ ಈ ಸಂಸ್ಥೆ ತುಳುನಾಡಿನ ಕಳರಿ ತರಬೇತಿ (ಸಮರಕಲೆ, ಮರ್ಮ ಚಿಕಿತ್ಸಾ ಪಾಠ), ನಶಿಸುತ್ತಿರುವ ದೈವ ಆರಾಧನೆಗಳ ಪುನರುಜ್ಜೀವನ, ತುಳುವೇಶ್ವರ ದೇವಾಲಯ ಪುನರ್ ಸ್ಥಾಪನೆ, ಭಾಷಾ–ಮತ–ಜಾತಿ ಸೌಹಾರ್ದತೆ, ಪರಿಸರ ಸಂರಕ್ಷಣೆ ಮುಂತಾದ ಹತ್ತು ಹಾದಿಗಳಲ್ಲಿ ಕಾರ್ಯವ್ಯಾಪ್ತಿ ವಿಸ್ತರಿಸುತ್ತಿದೆ.

ಶ್ರೀ ಪ್ರಕಾಶ್ ಶೆಟ್ಟಿ ಉಳೆಪಾಡಿಯವರು ಕಲೆ, ಸಾಹಿತ್ಯ, ವಾಗ್ಮಿತ್ವ, ಮಾಧ್ಯಮ, ಶಿಕ್ಷಣ ಮತ್ತು ಡಿಜಿಟಲ್ ತಂತ್ರಜ್ಞಾನ ಕ್ಷೇತ್ರಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ. ಅವರು ತುಳು ಭಾಷೆಯಲ್ಲಿ ಕಥೆ, ಕವನ, ನಾಟಕಗಳನ್ನು ರಚಿಸುವಲ್ಲಿಯೂ, ಉದಯವಾಣಿ, ವಿಜಯ ಕರ್ನಾಟಕ, ಪ್ರಜಾವಾಣಿ, ಸಂಯುಕ್ತ ಕರ್ನಾಟಕ, ಹೊಸ ದಿಗಂತ, ಕರ್ನಾಟಕ ಮಲ್ಲ ಮುಂತಾದ ಪತ್ರಿಕೆಗಳಲ್ಲಿ ಲೇಖನ ಬರೆಯುವಲ್ಲಿಯೂ ಸಕ್ರಿಯರಾಗಿದ್ದಾರೆ. ಕಂಪ್ಯೂಟರ್ ಸೈನ್ಸ್ ಪದವೀಧರರಾದ ಶ್ರೀಯುತರು, ಆಳ್ವಾಸ್ ಕಾಲೇಜು (ಮೂಡುಬಿದಿರೆ), ಪಾಂಪೈ ಕಾಲೇಜು (ಐಕಳ), ಮಣಿಪಾಲ ಇನ್‌ಸ್ಟಿಟ್ಯೂಟ್ ಆಫ್ ಕಂಪ್ಯೂಟರ್ ಎಜುಕೇಶನ್ ಮುಂತಾದ ಪ್ರತಿಷ್ಠಿತ ಸಂಸ್ಥೆಗಳಲ್ಲಿ ಉಪನ್ಯಾಸಕರಾಗಿ ಕಾರ್ಯನಿರ್ವಹಿಸಿದ್ದಾರೆ. ಮಂಗಳೂರು, ಉಡುಪಿ, ಶಿವಮೊಗ್ಗ, ದಾವಣಗೆರೆ ಮೊದಲಾದ ನಗರಗಳಲ್ಲಿ ಕಂಪ್ಯೂಟರ್ ಸಾಕ್ಷರತಾ ಕಾರ್ಯಕ್ರಮಗಳನ್ನು ನಡೆಸುವ ಮೂಲಕ ಗ್ರಾಮೀಣ ಡಿಜಿಟಲ್ ಸಾಮರ್ಥ್ಯವನ್ನು ಬಲಪಡಿಸಿದ್ದಾರೆ.

ಇತ್ತೀಚಿನ 18 ವರ್ಷಗಳಿಂದ ದೆಹಲಿಯಲ್ಲಿ ವೃತ್ತಿಪರವಾಗಿ ನೆಲೆಸಿರುವ ಅವರು, ಈಗ ಟ್ರೇಡ್ ಪ್ರಮೋಷನ್ ಕೌನ್ಸಿಲ್ ಆಫ್ ಇಂಡಿಯಾದ ಕಲಾ ವಿಭಾಗದಲ್ಲಿ ಹಿರಿಯ ನಿರ್ದೇಶಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಪ್ಲಾನ್‌ಮ್ಯಾನ್ ಮೀಡಿಯಾ, ಡ್ರೀಮ್‌ವರ್ಕ್ಸ್ ಮೀಡಿಯಾ, ಟಿಸಿಜಿ ಮೀಡಿಯಾ, ಮ್ಯಾಕ್ಸ್‌ಪೋಶರ್ ಮೀಡಿಯಾ, ಮತ್ತು ದಿ ಸಂಡೆ ಇಂಡಿಯನ್ ವಾರಪತ್ರಿಕೆಯಲ್ಲಿ ಅವರ ಪಾತ್ರಗಳು ಮಾಧ್ಯಮ ಕ್ಷೇತ್ರದಲ್ಲಿ ವಿಶಿಷ್ಟ ಗುರುತನ್ನು ಕಲ್ಪಿಸಿವೆ. 2004ರಲ್ಲಿಯೇ ಅವರು ಸ್ಥಾಪಿಸಿದ ಪ್ರಕಾಶಕ ಡಾಟ್ ಕಾಂ ಎಂಬ ವೆಬ್‌ಸೈಟ್ ತುಳು–ಕನ್ನಡದ ಸುದ್ದಿಗಳಿಗೆ ವೇದಿಕೆಯಾಗಿದ್ದು, ತುಳು ಚಾನಲ್ (youtube.com/@TuluChannel) ಯೂಟ್ಯೂಬ್ ಚಾನೆಲ್ ಮೂಲಕ ತುಳು ಭಾಷಾ ಪರಂಪರೆಯ ಜಾಗತಿಕ ಪ್ರಸಾರದಲ್ಲಿ ಮಹತ್ವದ ಪಾತ್ರ ವಹಿಸಿದ್ದಾರೆ. ಅವರು ದೆಹಲಿ ಕರ್ನಾಟಕ ಸಂಘದ ಸಕ್ರಿಯ ಸದಸ್ಯರು, ತುಳು ಸಿರಿ ಸಂಘಟನೆಯ ಜೊತೆ ಕಾರ್ಯದರ್ಶಿ ಎಂಬ ಹುದ್ದೆಗಳ ಮೂಲಕ ತುಳು–ಕನ್ನಡ ಸಾಂಸ್ಕೃತಿಕ ಚಟುವಟಿಕೆಗಳನ್ನು ಆಯೋಜಿಸಲು ನಿರಂತರ ಶ್ರಮಿಸುತ್ತಿದ್ದಾರೆ. ಈ ನೈಜ ಸೇವಾ ಮನೋಭಾವನೆ ಹಾಗೂ ಸಂಘಟನಾ ಕೌಶಲ್ಯಗಳು ಅವರ ನೇಮಕಕ್ಕೆ ಪೂರಕವಾದ ಮಹತ್ವದ ಅಂಶಗಳಾಗಿವೆ.

ಶ್ರೀ ಪ್ರಕಾಶ್ ಶೆಟ್ಟಿಯವರ ನೇತೃತ್ವದಲ್ಲಿ ದೆಹಲಿಯಲ್ಲಿ ತುಳು ಭಾಷೆಯನ್ನು ಸಂವಿಧಾನದ ಎಂಟನೇ ಪರಿಚ್ಛೇದಕ್ಕೆ ಸೇರಿಸಬೇಕೆಂಬ ಅಭಿಯಾನ ಇನ್ನಷ್ಟು ಗಂಭೀರವಾಗಿ ನಡೆಯಲಿದೆ. ಜೊತೆಗೆ ಯುವ ಸಮುದಾಯದಲ್ಲಿ ಭಾಷಾ ಪ್ರೇಮ ಮತ್ತು ಸಂಸ್ಕೃತಿಯ ಅರಿವು ಮೂಡಿಸಲು ಹಲವು ಸಾಂಸ್ಕೃತಿಕ ಕಾರ್ಯಕ್ರಮಗಳು ರೂಪುಗೊಳ್ಳಲಿವೆ ಎಂದು ಮಹಾಸಭೆಯ ಕೇಂದ್ರ ಸಮಿತಿ ವಿಶ್ವಾಸ ವ್ಯಕ್ತಪಡಿಸಿದೆ. ❑



ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದ ಸಂಸದರೂ ಹಾಗು ಪ್ರಸಿದ್ಧ ಹೃದಯ ರೋಗ ತಜ್ಞರೂ ಆದ ಹೃದಯವಂತ ಕನ್ನಡಿಗ ಡಾ. ಸಿ.ಎನ್. ಮಂಜುನಾಥ್ ಅವರನ್ನು ಇತ್ತೀಚೆಗೆ ನವದೆಹಲಿಯ ಸುತ್ತೂರು ಆಧ್ಯಾತ್ಮಿಕ ಮತ್ತು ಸಾಂಸ್ಕೃತಿಕ ಭವನದಲ್ಲಿ ಭೇಟಿಯಾದ ಸಂದರ್ಭ ದೆಹಲಿ ಕರ್ನಾಟಕ ಸಂಘದ ಪದಾಧಿಕಾರಿಗಳು ಹಾಗು ಸದಸ್ಯರು ಅವರಿಗೆ ಅಭಿನಂದನೆ ಸಲ್ಲಿಸಿದ ದೃಶ್ಯ.



ದೆಹಲಿ ಕರ್ನಾಟಕ ಸಂಘದ ಜಂಟಿ ಕಾರ್ಯದರ್ಶಿ ಶ್ರೀಮತಿ ಅಶ್ವಿನಿ ಬಿ.ಎಸ್. ಮತ್ತು ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಶ್ರೀ ಬಿ.ಕೆ. ಬಸವರಾಜು ಹಾಗು ಗೌರವ ಕಾರ್ಯದರ್ಶಿ ಶ್ರೀ ಟಿ.ಎಂ. ಮೈಲಾರಪ್ಪ ಅವರು ಇತ್ತೀಚೆಗೆ ಸುತ್ತೂರು ಶ್ರೀಕ್ಷೇತ್ರ ಶ್ರೀ ವೀರಸಿಂಹಾಸನ ಮಹಾ ಸಂಸ್ಥಾನ ಮಠದ ಪೀಠಾಧೀಶರಾದ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳನ್ನು ಭೇಟಿ ಮಾಡಿ ಶ್ರೀಗಳ ಆಶೀರ್ವಾದ ಪಡೆದ ಕ್ಷಣ.


Saujanya PRINTING PRESS

ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರೊಬ್ಬರ
ಬಹುವರ್ಣದ ಸುಸಜ್ಜಿತ ಮುದ್ರಣಾಲಯ
ಸೌಜನ್ಯ ಪ್ರಿಂಟಿಂಗ್ ಮತ್ತು ಎಚ್.ಪಿ. ಗ್ರಾಫಿಕ್
ಪ್ರಿಂಟರ್ಸ್ ಇಲ್ಲಿ ಎಲ್ಲಾ ಬಗೆಯ ಮುದ್ರಣ
ಕಾರ್ಯಗಳನ್ನು ಸಮಯಕ್ಕೆ ಸರಿಯಾಗಿ



ಅಚ್ಚುಕಟ್ಟಾಗಿ ಮಾಡಿಕೊಡಲಾಗುವುದು.
ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್,
ಪ್ರಿಂಟಿಂಗ್ ಮತ್ತು ಬೈಂಡಿಂಗ್ ಕೆಲಸಗಳಿಗಾಗಿ
ದಯವಿಟ್ಟು ಸಂಪರ್ಕಿಸಿ



B-303, Okhla Industrial Area,
Phase-I, New Delhi - 110020
Tel.: 011-40520770
Mob.: +91 - 9811104398, 9811604398
Email: saujanyapp2010@gmail.com,
hpgp2006@gmail.com

Delhi Karnataka Sangha Abhimata
July-2025, Vol. No.35, Issue No.10, Price Rs.1/-
RNI Regn. No. 53405/91, DL-SW-01/4016/22-24
Date of Publication : July 8th / 9th, Posting Date : 10th / 11th, Total Pages-24 Monthly-Language Kannada, POSTED AT RMS DELHI-110006
Printed & Published by Radhakrishna, General Secretary on behalf of Delhi Karnataka Sangha (R)Rao Tularam Marg, Sector-12, R.K.Puram, New Delhi-110022
Tel: 26109615, Printed at Saujanya Printing Press B-303, Okhla Industrial Area, Phase-I, New Delhi-110020, Tel: 40520770, Editor: K.Sreenivasa Murthy

## ದಿನಾಂಕ 21.06.2025 ರಂದು ಸಂಘದಲ್ಲಿ ಆಯೋಜನೆಗೊಂಡ ಅಂತರ ರಾಷ್ಟ್ರೀಯ ಯೋಗ ದಿನಾಚರಣೆಯ ಆಯ್ದ ಛಾಯಾಚಿತ್ರಗಳು









